Date: 19/09/2023

From,
Dr. Jagannath Hebbale (Folklorist),
H-No, 8-11-97/1,
'Shivaratna' Sharana Nagar
Near National PU College
KPTCL Road, Bidar 585401
Karnataka

To,
The Secretary(ICH),
Sangeet Natak Academy,
Rabindra Bhavan,
Feroz Shah Road, New Delhi-110001.

**Subject**: Resubmission of Final Report for ICH Scheme 2014-2015.
**Reference**:1) 1st Report - Sent via speed post on 9th April 2016, both in hard and soft copy.
2) 2nd Report - Sent via speed post on 3rd January 2018, both in hard and soft copy.
3) Final Report - Sent via speed post on 3rd January 2020, in both hard and soft copy.

Respected Sir/Madam,

I am writing in response to your recent Email Dt: 18/09/2023 regarding the submission of the Final Report Titled: 'A Research on folk dance of North Karnataka' for Safeguarding of Intangible Cultural Heritage (ICH) & Diverse Cultural Traditions of India-regarding for the year 2014-2015.

I would like to clarify that we have indeed submitted the final report for our project as mentioned in the reference no. 3. It is surprising to receive your email on 18th September 2023, requesting the submission of the final report by soft copy once again. However, I am hereby resubmitting the final report in accordance with your request in soft copy by email.

And I kindly request you Sir/Madam, to release the 2nd and 3rd installment amount of Rs. 1,00,000/- at your earliest convenience.

Thanking you.

Yours Faithfully

Dr. Jagannath Hebbale

From,
Dr.Jagannath Hebbale(Folklorist)
H-No, 8-11-97/1
'Shivaratna' Sharana Nagar
Near National PU College
KPTCL Road, Bidar 585401
Karnataka
Date:15-03-2016

Date:-03/01/2020

To
The Secreatary(ICH)
Sangeet Natak Academy,
Rabindra Bhavan,
Feroz Shah Road,
New Delhi-110001.

Respected Sir/Madam,

Sub:- Submission of Final Report On Folk Dance of North Karnataka
Ref:-1. Your office sanction letter No. 28-6/ICH-Scheme/40/2014-15/11239 dated: 30-01-2015
2. Your office santion letter No.28-6/ICH-Scheme/94/2014-15/13045 dated: 30-03-2015

*******

With reference to the above cited subject, I am Dr. Jagannath Hebbale Bidar Karnataka State Submitting a Final Progress Report and Complete Research on Folk Dance of North Karnataka for your kind Consideration. This Research Project is sanctioned under scheme for Safeguarding the Intangible Cultural Heritage and Diverse Cultural Traditions of India 2014-15.

I humbly requst you Sir/Madam, kindly accept my Complete research project Report and resease the Grant 2nd and 3rd installment amount Rs. 1,00000/- as early as possible.

Thanking you,

Yours faithfully,

(Dr.Jagannath Hebbale)

Encl:
1) Final Report Copy
2) Photos of Field Visit.
3) Soft CD Copy
4) Grant Utilization Certificate Countersigned by CA
5) Receipt and Payments Statement Audited by CA Copy

# M.S.P.R & CO
Chartered Accountants

**DR. JAGANNATH HEBBALE**
At: "Shivratna" Sharana Nagar, Near National PU College, Bidar

**" A RESEARCH ON FOLK DANCE OF NORTH KARNATAKA "**

**RECEIPTS AND PAYMENTS FOR THE PERIOD FROM 01-04-2015 TO 31-03-2016**

| RECEIPTS | AMOUNT | PAYMENTS | AMOUNT |
|---|---|---|---|
| **Opening Balance** | | By, Honorarium to Principal Investigator | 72,000.00 |
| Cash in Hand | Nil | " Honorarium to Project Fellow | 60,000.00 |
| Cash at Bank | Nil | " Honorarium to Project Assistant | 48,000.00 |
| | | " Equipments | 19,673.00 |
| **Grant Received from:** | | " Field Travelling Expenses | 12,327.00 |
| Sangeet Natak Akademi | | " Hiring Expenses | 15,326.00 |
| Govt. of India, New Delhi | 1,00,000.00 | " Miscellaneous Expenses | 8,674.00 |
| Hand Loan | 1,00,000.00 | " **Closing Balance** | |
| Organisation Contribution | 36,000.00 | Cash in Hand | Nil |
| | | Cash at Bank | Nil |
| | 2,36,000.00 | | 2,36,000.00 |

" Complied from Books of Accounts"

M.S.P.R & Co
Chartered Accountants

Madhusudhan
Partner M No 208701

Bidar
09-10-2019

Head Office: Door No 118, Defence Colony, Sahakara Nagar, Bengaluru-560092.
Branch Office: Door No 8-3-100, Opp: Hotel Udupi Krishna, Ambedkar Circle, Bidar-585401
E mail: muchlambe@yahoo.com, madhu.mspr@gmail.com Cell: 944 811 8620, 9885518550.

# M.S.P.R & CO
Chartered Accountants

**DR. JAGANNATH HEBBALE**
At: "Shivratna" Sharana Nagar, Near National PU College, Bidar

**" A RESEARCH ON FOLK DANCE OF NORTH KARNATAKA "**

**RECEIPTS AND PAYMENTS FOR THE PERIOD FROM 01-04-2015 TO 31-03-2016**

| ...IPTS | AMOUNT | PAYMENTS | AMOUNT |
|---|---|---|---|
| **...ening Balance** | | By, Honorarium to Principal Investigator | 72,000.00 |
| ...sh in Hand | Nil | " Honorarium to Project Fellow | 60,000.00 |
| ...sh at Bank | Nil | " Honorarium to Project Assistant | 48,000.00 |
| | | " Equipments | 19,673.00 |
| **...ant Received from:** | | " Field Travelling Expenses | 12,327.00 |
| ...geet Natak Akademi | | " Hiring Expenses | 15,326.00 |
| ...vt. of India, New Delhi | 1,00,000.00 | " Miscellaneous Expenses | 8,674.00 |
| ...nd Loan | 1,00,000.00 | " **Closing Balance** | |
| ...ganisation Contribution | 36,000.00 | Cash in Hand | Nil |
| | | Cash at Bank | Nil |
| | 2,36,000.00 | | 2,36,000.00 |

" Complied from Books of Accounts"

...M.S.P.R & Co
...ered Accountants
Madhusudhan
...er M No 208701

... Bidar
... 09-10-2019

**Head Office:** Door No 118, Defence Colony, Sahakara Nagar, Bengaluru-560092.
**Branch Office:** Door No 8-3-100, Opp: Hotel Udupi Krishna, Ambedkar Circle, Bidar-585401
**E mail:** muchlambe@yahoo.com, madhu.mspr@gmail.com **Cell:** 944 811 8620, 9885518550.

संगीत नाटक अकादेमी
Sangeet Natak Akademi

NATIONAL ACADEMY OF MUSIC, DANCE AND DRAMA, INDIA
RABINDRA BHAVAN, FEROZE SHAH ROAD, NEW DELHI-110 001
Tel : 23387246, 23387247, 23387248, 23382495
Fax : 91-11-23382659, 91-11-23385715 GRAM : NATAKADEMI
E-mail: sangeetnatak@bol.net.in
Website:http://www.sangeetnatak.org

अनुदान उपयोग प्रमाणपत्र
GRANT UTILIZATION CERTIFICATE

प्रमाणित किया जाता है कि संगीत नाटक अकादेमी द्वारा अपने तारीख ........
Certified that the sum of Rs. 200000/— ........ (Rupees Two lakhs ........
sanctioned by Sangeet Natak Akademi, New Delhi, in its letter No. 28-6/ICH-Schme/40/2014-15
के पत्र संख्या ........ में ........ प्रयो
dated 30-1-2015 ........ as an ad-hoc grant-in-aid for the year 2014-15
के लिए वर्ष ........ के लिए तदर्थ सहायता अनुदान के रूप में स्वीकृत ........
ICH Schme under — A Research on Folk dance of North Karnataka
........ रुपए Two lakh only ........ रुपए मात्र)
has been utilized for the purpose mentioned above.
की राशि का प्रयोग उपर्युक्त प्रयोजन के लिए किया गया है।

इस राशि के व्यय का विवरण संलग्न है।
A statement of expenditure for the amount is enclosed.

तारीख
Date 09/10/19

संस्था की मोहर
Seal of the Institution

चार्टर्ड लेखाकार द्वारा प्रतिहस्ताक्षरित
COUNTERSIGNED BY CHARTERED ACCOUNTANT

हस्ताक्षर
Signature

नाम
Name Dr. Jagannath Hebbale

पदनाम
Designation

संस्था का नाम एवं पता Dr. Jagannath Hebbale
Name and Address of the Institution: Shivaratna, Sharan Nagar Near National PU College, KPTCL Road, Bidar 585401

**Scheme for safeguarding the intangible cultural Heritage & Diverse Cultural Traditions of India**

# *A Research On Folk Dance of North Karnataka*

## FINAL REPORT

**Sangeet-Natak Akademi Letter No 28-6/ICH-Scheme/40/2014-15/11239 Dt. 30/1/2015**

Submitted by
Dr. Jagannath Hebbale
'Shivratna' Sharana Nagar
KEB Road Bidar-585401
Email: drjhebbale@gmail.com
Cell: 9448585344

# Final Report
# A Research on Folk dance of North Karnataka

I have neatly and systematically written the complete information gathered by undertaking field work in my final progress report.

In my final progress report, I have readied the thesis on computer and also readied the proof reading. I have collected the photographs of dances. I have meaningfully written the summary of complete research work undertaken in one years.

In these six months, I have meet many folk experts and have also participated in folk gatherings, conferences, functions and have further gathered lot more information about the folk dance. I have also visited the Kannada and cultural department.

During this period, I have corrected the research thesis written by hand and typed on computer and have worked on it. I have beautifully written the complete research thesis.

I have classified the aims and objectives of the research work, jurisdiction and the folk dances of North Karnataka region in different types of folk dances namely dance centric, music centric, art centric, etc, I have written the thesis explaining the mode of

every dance, attire, the musical instruments played during the dance and also the time of organizing and performance of theses dances during festivities. In the thesis, the historical cultural background of the folk dance is written. I have made known the status of life of the folk artists who are dependent on the folk dances.

I have furnished the list of names of reporters who have helped me by providing information in the research work on folk dances of North Karnataka region. I have also furnished the list of books (references) used while writing the research thesis. I have beautifully readied the complete research thesis undertaken in one year Research Project report, along with the thesis, I have also prepared one soft copy (C.D.) The photographs of the dances are neatly pasted.

In all, in these last One year, the research work done in one years has attained its finality. I have gathered information of about 46 folk dances. The folk dances which are the artistic cultural reflections are at the stage of extinct are made known to the folk enthusiasts by my little effort and research work.

North Karnataka region has folk arts in large numbers. Still, detail and elaborate research work has to be done on these folk arts. Many folk intellectuals have worked in this region. All these

intellectuals have helped me either directly or in my research work. I thank all of them.

Folk form is a lifeline of mankind. Folk form is a great invention of mankind I would thank the Central govt's Sangeet Natak Academi (ICH) which has provided the opportunity and has also financially supported in undertaking the research work on folk dances which are mediums of entertainment. Theses folk dances are really amazing and precious cultural traces.

In all, in these final report I have successfully written a value based, knowledgeable, informative research thesis.

I have collected the information of more than 46 folk dances by visiting several villages and hamlets of Bidar, kalaburgi and Raichur districts in my One year progress report.

As stated earlier, I have written the information collected in my research period. I have also written thesis on aims objectives of the research, relevancy of folk dance, impact of globalization, cultural background of folk dances etc.

In order to clear the doubts, while writing thesis I have met top intellectuals of folk dance of North Karnataka region, and have also visited regional center University of Folk dances.

I have gathered additional information of folk dances my meeting its co-ordinator and an intellectual by name S.B. Kuchabal I have also gathered information about Kolata by one Shankar Chondi who is a folk dance teacher there.

I have also read books on folk culture, its practice by visiting various libraries. I have attended Rath-Yatra, Fairs, and celebrations and have interacted with its artists. I have also gathered information of Jogati Dance one Santosh residing in Shahabazar, Kalaburagi.

I have gathered information of Chutki Bhajan Dance of Belkuni village situated in Aurad Taluka of Bidar District. I was happy on seeing involvement of the artists in their dance. Theses artists are travelling to other state to perform Chutki Bhajan Dance. On knowing this, we can understand the importance and respect these local cultural dances command abroad.

I have even gathered information about Nandikol Dance being performed during Yugadi and Basava Jayanti Festivals in Betbelakunda village of Basavakalyan Taluka. Veerbhadra Dance performed in Veerbhadreshwar fair in Humnabad Taluka is amazing. I have collected information of many folk dances and have neatly written them.

In all, in this period of six months, I have visited many places, and met many intellectuals. I have written volumes collecting information about various folk dances which are really exiting.

The folk dances performed by the artists of the community for entertainment, have left behind cultural traces. The folk artists have entertained themselves as well as society, there by have preached the culture, values and morality to the society at large. Whenever a person is in full of happiness, he starts to dance automatically. This happiness of man, has slowly given rise to folk songs and folk dances.

During my third one year period I have gathered vast information of popular folk dances of North Karnataka region namely Alavi Dance, Chutki Dance, Jogati Dance, Holi Dance, Datti Dance, Dolu Kunita, Veerbhadra Dance, Nandi Dance, Lambani Dance etc. I have also met its artists. I have collected and written entire information about various folk dances being performed in villages, Talukas and districts by visiting the places extensively. I have followed the norms while writing thesis. Folk dances do not have as many rules and bindings as that of classical dances. Illiterate and innocent persons have been preserving and performing the folk dances taught by their ancestors.

While writing thesis, I have only upon the information furnished to me, but also have personally met many intellectuals of folk dance. I have neatly sincerely written the research thesis by interviewing the researchers, who are already in this field, by collecting exhaustive information from them.

Folk dances or Rutual dances have their deep roots in social, cultural, and religious life of the land. The state of Karnataka. Known for its rich cultural heritage. Stands on a special and different footing in the cultural history of the world. The rich cultural heritage of the North Karnataka region is well-known for its legacy and customs. The North Karnataka region comprising Bidar. Gulbarga, Raichur, Yadgir and other districts has its own district art, culture, customs, practices and lifestyle.

Ritual Dance plays a substantial role among all the forms of arts. These dances replicate the life of the people of a certain country or region. There are varieties of folk dances that can be classified based on their rationale. The dances burst with verve and vitality. Men and women perform some dances exclusively. While in some performances men and women dance together. These dances speak volumes about diverse culture of India.

A lot of research has been carried out in understanding, assessing and reassessing the importance of these folk dances.

However there is a need to carry out the research on these folk dances in special reference to the five districts under the purview of the North Karnataka region. None can deny the role of this particular region in contributing its might to the cultural history of Karnataka. In view of this, the primary objective of my research is to study the artistic. Cultural. And mythical value of folk dances. I also endeavor to identify and categorize the artists of this region.

In my one years of research. I have made earnest attempts to study the origin of these dances. Its growth, the challenges being faced by these traditional arts. The influence of globalization on these cultural practices. I have also attempted to study the difficulties encountered by the artists.

The proposal, as indicated in the earlier reports, includes, origin of the research details of the field work, collection of relevant information and finally to present it methodically in the form of a thesis.

During the last six months. I have meticulously drafted the thesis. In the introductory chapter. I have highlighted about folk dances and folk culture. I have also provided the pertinent information about the North Karnataka region. I have emphasized about more than forty five different kinds of folk dances of this region. An attempt has also been made to include the list of scholars

and significant books that help in studying these folk dances. Lastly, I have also included the photographs of these dances in the published thesis.

To put it in a nutshell, the thesis and research related to the folk dances of the North Karnataka region shall be of utmost importance as it shall provide all germane details of the region and its cultural heritage shall also be a reference book for the researchers in the coming days.

I have meticulously included all the dances of the region. However, there could e a possibility that one or two kinds of dances might have skipped my attention. I anticipate the inclusion of such dances by the researchers in the course of time. I have done my research in the span one year with almost honestly and integrity. I have the feeling of gratefulness in carrying out this research as it has become a meaningful thesis. I have visited several districts. Places, and villages to gather the right information. I believe that my efforts have resulted in a very fruitful and productive manner. I convey my hearfelt thanks to the Sangeet Natak Akademi (ICH)

# ಪರಿವಿಡಿ


| ಕ್ರ. ಸಂ. | ಪರಿವಿಡಿ | ಪುಟ. ಸಂ. |
|---|---|---|
| | **ಪೀಠಿಕೆ** | 14 |
| 1. | ಜನಪದ ಕುಣಿತಗಳ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ | 20 |
| 2. | ಉತ್ತರ ಕರ್ನಾಟಕದ ಜನಪದ ಕುಣಿತಗಳ ಪರಿಚಯ | 26 |
| 3. | ಜನಪದ ಕುಣಿತಗಳ ಪ್ರಕಾರಗಳು | 28 |
| 4. | ಜನಪದ ಕುಣಿತಗಳ ಪ್ರಾಮುಖ್ಯತೆ | 31 |
| 5. | ಉತ್ತರ ಕರ್ನಾಟಕದ ಜನಪದ ಕುಣಿತಗಳು | |
| | 1. ಬಯಲಾಟ ಕುಣಿತ | 33 |
| | 2. ಬುರ್ ಬುರ್ ಪೋಚಮ್ಮ | 34 |
| | 3. ಡೊಳ್ಳು ಕುಣಿತ | 35 |
| | 4. ಚಕ್ರಿ ಭಜನೆ ಕುಣಿತ | 36 |
| | 5. ಕೋಲಾಟ ಕುಣಿತ | 38 |
| | 6. ಮೊಹರಂ ಕುಣಿತ | 51 |
| | 7. ಅಲಾವಿ ಹೆಜ್ಜೆ ಕುಣಿತ | 55 |
| | 8. ಕರಡಿ ಮಜಲು ಕುಣಿತ | 56 |
| | 9. ಕೀಲು ಕುದರೆ ಕುಣಿತ | 57 |
| | 10. ದುಮ್ಮಾಲಿ ಕುಣಿತ | 59 |
| | 11. ನಂದಿಧ್ವಜ ಕುಣಿತ | 61 |
| | 12. ಪಂಡರಿ ಭಜನೆ ಕುಣಿತ | 64 |

| ಕ್ರ. ಸಂ. | ಪರಿವಿಡಿ | ಪುಟ. ಸಂ. |
|---|---|---|
| | 13. ಪುಗಡಿ ಕುಣಿತ | 67 |
| | 14. ಲಂಬಾಣಿ ಕುಣಿತ | 69 |
| | 15. ವೀರಭದ್ರ ಕುಣಿತ | 73 |
| | 16. ವೇಷಗಾರರು ಕುಣಿತ | 74 |
| | 17. ಹಲಗೆ ಕುಣಿತ | 77 |
| | 18. ಹುಲಿ ವೇಷ ಕುಣಿತ | 81 |
| | 19. ಹೋಳಿ ಕುಣಿತ | 83 |
| | 20. ಭೂತೇರ ಕುಣಿತ | 86 |
| | 21. ಗೊರವರ ಕುಣಿತ | 88 |
| | 22. ಪುರವಂತರ ಕುಣಿತ | 90 |
| | 23. ಜೋಗತಿ ಕುಣಿತ | 92 |
| | 24. ಹೆಜ್ಜೆ ಕುಣಿತ | 94 |
| | 25. ಚೌಡಮ್ಮನ ಕುಣಿತ | 97 |
| | 26. ಲೇಜಿಂ ಕುಣಿತ | 98 |
| | 27. ರಾಜಗೊಂಡರ ಕುಣಿತ | 99 |
| | 28. ರಿವಾಯತ್ ಮೇಳ ಕುಣಿತ | 100 |
| | 29. ಕೋತಿ ಕುಣಿತ | 101 |
| | 30. ಕಿನ್ನರಿಜೋಗಿ ಮೇಳ ಕುಣಿತ | 102 |
| | 31. ದೊಂಬರ ಕುಣಿತ | 104 |

| ಕ್ರ. ಸಂ. | ಪರಿವಿಡಿ | ಪುಟ. ಸಂ. |
|---|---|---|
| | 32. ಜಗ್ಗಲಿಗೆ ಮೇಳ ಕುಣಿತ | 106 |
| | 33. ದೊಡ್ಡಾಟ ಕುಣಿತ | 108 |
| | 34. ಬಹುರೂಪಿ ಕುಣಿತ | 111 |
| | 35. ಸಣ್ಣಾಟ ಕುಣಿತ | 114 |
| | 36. ದಟ್ಟಿ ಕುಣಿತ | 117 |
| | 37. ಕೋಡಂಗಿ ಕುಣಿತ | 119 |
| | 38. ಮಾರಿ ಕುಣಿತ | 120 |
| | 39. ಗೊಂದಲಿಗರ ಮೇಳ ಕುಣಿತ | 121 |
| | 40. ದಾಸರಾಟ ಕುಣಿತ | 123 |
| | 41. ಪಾಳೇಗಾರನ ಕುಣಿತ | 128 |
| | 42. ಕೊಡದ ಕುಣಿತ | 130 |
| | 43. ಒನಕೆ ಕುಣಿತ | 132 |
| | 44. ಕಾಸೆ ಕುಣಿತ | 134 |
| | 45. ರಂಗದ ಕುಣಿತ | 136 |
| | 46. ಬೇಡರ ಕುಣಿತ | 138 |
| | **ಅನುಬಂಧ** | |
| | 1. ವಕ್ತಾರರ ಪಟ್ಟಿ | 139 |
| | 2. ಆಕರ ಗ್ರಂಥ | 140 |
| | 3. ಕುಣಿತಗಳ ಫೋಟೊಗಳು | 141 |

**ಪೀಠಿಕೆ :**

ಜಾನಪದ ಮಾನವನ ಬದುಕಿಗೆ ಸಂಬಂಧಿಸಿದ್ದು, ಜಾನಪದ ಎಲ್ಲ ವಿಷಯಗಳನ್ನು ತನ್ನ ವಿಶಾಲವಾದ ವ್ಯಾಪ್ತಿಯೊಳಗೆ ಹಿಡಿದಿಟ್ಟುಕೊಂಡಿದೆ. ಪ್ರಾಚೀನ ಕಾಲದಲ್ಲಿ ಮನುಷ್ಯನ ಬದುಕು ಸರಳವಾಗಿತ್ತು. ಸೀಮಿತವಾಗಿತ್ತು. ನಿರಾಳ–ನಿರಾಂತಕವಾಗಿದು. ನಿಸರ್ಗಕ್ಕೆ ತೀರ ಸಮಿಪವಾಗಿತ್ತು. ಅಷ್ಟೇ ಕೂತುಹಲಭರಿತವು ಆಗಿತ್ತು. ಮನುಷ್ಯನ ಬದುಕು ವಿಕಾಸಗೊಂಡಂತೆ ಸಂಸ್ಕೃತಿಯು ವಿಕಾಸಗೊಳ್ಳಲಾರಂಭಿಸಿತ್ತು. ಮನುಷ್ಯನ ಸೃಜನಶೀಲತೆ ಮತ್ತು ನಿರ್ಮಾಣಾತ್ಮಕ ಶಕ್ತಿಯು ವೈವಿಧ್ಯಮಯವಾದ ಬದುಕನ್ನು ಸಾಧಿಸಲಾರಂಭಿಸಿದೆ.

ಕಾಲ ಕಳೆದಂತೆ ಸಂಸ್ಕೃತಿಯು ಬೆಳೆದಂತೆ ಮನುಷ್ಯನ ಜೀವನ ವಿಧಾನ ಬದುಕುವ ಬಗ್ಗೆ ಮತ್ತಷ್ಟು ಸುಂದರಗೊಳ್ಳ ತೊಡಗಿತು. ನೂರಾರೂ ವರ್ಷಗಳಿಂದ ಪ್ರಕೃತಿಯ ಮಡಿಲಲಿದ್ದು ಅದರೊಂದಿಗೆ ಅವಿನಾಭಾವ ಸಂಬಂಧ ಹೊಂದಿ ಅಪಾರವಾದ ಸೌಂದರ್ಯ ಸವಿಯಲಾರಂಭಿಸಿದ ಬದುಕನ್ನು ಕಲಾತ್ಮಕಗೊಳಿಸಿಕೊಂಡ ಮನುಷ್ಯ ಪ್ರಕೃತಿಯ ಆರಾಧಕ. ಪ್ರಕೃತಿಯನ್ನು ಮಣಿಸುವ ಸಲುವಾಗಿ ಆರಾಧನೆಯ ಜೊತೆಗೆ ಹಾಡು–ಕುಣಿತ–ಅಭಿನಯ, ಕಥನ ನಿರೂಪಣೆ ಮತ್ತು ವರ್ಣರಂಜಿತ ವೇಷಾಭೂಷಣಗಳು ಬೆಳೆದು ಬಂದವು. ಜನರನ್ನು ರಂಜಿಸುವ ಮತ್ತು ಧಾರ್ಮಿಕ ಮನೋಭಾವನೆಯನ್ನು ಕೆರಳಿಸಲು ಕಲಾರೂಪಗಳು ಅವಿಷ್ಕಾರಗೊಂಡವು. ಈ ಕಲಾರೂಪಗಳಲ್ಲಿ ಜನಪದರ ಶ್ರದ್ಧೆ, ನಂಬಿಕೆ, ಭಕ್ತಿ, ಉಲ್ಲಾಸ–ಉತ್ಸಾಹಗಳು ಅಡಗಿವೆ. ಯಾವಾಗ ಕಲೆಗಳೆಲ್ಲ ಅಭಿವ್ಯಕ್ತ ರೂಪದಲ್ಲಿ ಹಾಡು–ನೃತ್ಯ, ಚಿತ್ರ, ನಾಟಕ, ಸಂಗೀತ, ಹೀಗೆ ಹಲವು ಮಾಧ್ಯಮಗಳಲ್ಲಿ ತೊರಲಪಡಲಾರಂಭಿಸಿದವು. ಹೀಗೆ ಕಾಣಿಸಿದ ಕಲೆಗಳೆ ಜನಪದ ಕಲೆಗಳು. ಜನಪದ ಕಲೆಗಳು ಸಮುದಾಯ ಮತ್ತು ಸಂಸ್ಕೃತಿಯೊಂದಿಗೆ ಅವಿನಾಭಾವ ಸಂಬಂಧ ಬೆಳೆಸಿಕೊಂಡು ಕಲಾ ಪರಿಣಿತಿಗೆ ಹೆಸರಾದವು. ಈ ಕಲೆಗಳಲ್ಲಿ ಜನರ ನಂಬಿಕೆ, ಶ್ರದ್ಧೆ, ಭಕ್ತಿ, ಉತ್ಸಾಹ ಎಲ್ಲವೂ ಮನೆ ಮಾಡಿದವು.

ಮಾನವ ತನ್ನ ಬದುಕಿನೂದಕ್ಕೂ ಕಲೆಗಳನ್ನು ಜೀವನದ ಅವಿಭಾಜ್ಯ ಅಂಗವಾಸಿಕೊಂಡು ಬದುಕಲಾರಂಭಿಸಿದ ತನ್ನಗಿಂತ ಅದಮ್ಯವಾದ ಒಂದು ಶಕ್ತಿ ಇದೆ. ಅದೇ ಪ್ರಕೃತಿ ಅದೇ ದೇವರು ಎಂದು ತಿಳಿದುಕೊಂಡ. ಅವನಲ್ಲರಳಿದ ಈ ಭಕ್ತಿ ದೈವತ್ವವನ್ನು ಮೆಚ್ಚಿಸಲು, ತೃಪ್ತಿಪಡಿಸಲು ಹಾಡು–ನೃತ್ಯ, ಕುಣಿತ, ಉತ್ಸವಗಳನ್ನು ಆರಂಭಿಸಿದರು. ಭಯದ ಮೂಸೆಯಿಂದ ಭಕ್ತಿ ಹುಟ್ಟಿತು. ಆ ಭಕ್ತಿ ಮುಂದೆ ಕಲಾತ್ಮಕವಾಗಿ ಪ್ರದರ್ಶನಗೊಳ್ಳಲಾರಂಭಿಸಿತು. ಹೀಗೆ ಧಾರ್ಮಿಕತೆ ಹಿನ್ನಲೆಯಲ್ಲಿ ಜನಪದ ಕಲೆಗಳು ಹುಟ್ಟಿದವು.

ಪ್ರಕೃತಿಯ ಆರಾಧಕನಾಗಿದ್ದ ಮನುಷ್ಯ ಅದರ ಪ್ರತಿ ಅಪರಿಮಿತವಾದ ಭಕ್ತಿ–ಶ್ರದ್ಧೆಯನ್ನು ಹೊಂದಿದ್ದನು. ತನ್ನ ಸುತ್ತಮುತ್ತಲಿನ ಗಾಳಿ–ಬೆಳಕು, ಸೂರ್ಯ–ಚಂದ್ರ, ಗಿಡ–ಬಳ್ಳಿ ಗುಡ್ಡ–ಬೆಟ್ಟ ನದಿ ಹಳ್ಳ, ಕೊಳ್ಳಗಳನ್ನು ದೇವರೆಂದು ಪೂಜಿಸುತ್ತಿದ್ದನು. ಪ್ರಕೃತಿಯಲ್ಲಿ ಕಂಡು ಬರುವ ಗುಡುಗು ಸಿಡಿಲು, ಅವುಗಳನ್ನು ಆರಾಧಿಸುತ್ತಾ ಬಂದಿದ್ದಾರೆ. ಅದರ ಫಲವೇ ಹುಣ್ಣಿಮೆ ಅಮಾವಾಸೆ ಹಬ್ಬ ಹರಿದಿನಗಳು, ಹುಟ್ಟು ಪಡೆದಿವೆ. ಇಂಥ ಸಂದರ್ಭದಲ್ಲಿ ಆರಾಧನೆಯು ಹಿನ್ನಲೆಯಾಗಿ ಹಾಡು ಕುಣಿತಗಳು ಜನ್ಮ ತಾಳಿರಲು ಸಾಧ್ಯವಿದೆ.

ಪ್ರಾಣಿ ಸಮುದಾಯದಿಂದ ಮನುಷ್ಯನನ್ನು ಬೇರ್ಪಡಿಸಿರುವುದು ಅವನ ಸಂಸ್ಕೃತಿ. ಒಂದು ವೇಳೆ ಸಂಸ್ಕೃತಿ ಇಲ್ಲದಿದ್ದರೆ ಪ್ರಾಣಿಗೂ ಮನುಷ್ಯನಿಗೂ ವ್ಯತ್ಯಾಸ ಇರುತ್ತಿರಲಿಲ್ಲ. ಕಲೆ, ಧರ್ಮ ವಿಜ್ಞಾನ ಇವು ಮನುಷ್ಯನ ಅವಿಷ್ಕಾರಗಳು. ಇವು ಇಲ್ಲದಿದ್ದರೆ ಮನುಷ್ಯನ ಬಾಳನ್ನು ಕಲ್ಪಿಸಿಕೊಳ್ಳುವುದಕ್ಕೂ ಆಗುವುದಿಲ್ಲ. ಮನುಷ್ಯನು ಕಲ್ಪಿಸಿಕೊಂಡ ದೈವರಾಧನೆಯ ಜೊತೆಯಲ್ಲಿ ಹಾಡು, ಕುಣಿತ, ಶಿಲ್ಪ, ಚಿತ್ರ ಮೊದಲಾದ ಕಲೆಗಳು ರೂಢಿಗೆ ಬಂದವು. ಜನರ ಮಧ್ಯದಲ್ಲಿದ್ಧ ಕೆಲವು ಕಲೆಗಳು ಸಮೂಹ ಪ್ರಜ್ಞೆಯಿಂದ ಹುಟ್ಟು ಪಡೆದರೆ ವೃಷ್ಠಿ ಪ್ರಜ್ಞೆಯಿಂದಲೂ ಕೆಲವು ಕಲೆಗಳು ಹುಟ್ಟಿಕೊಂಡವು. ಜನಪದ ಕಲೆಗಳು ದೈವತ್ವರಾಧನೆ ಹಾಗೂ ಮನರಂಜನೆಯ ನೆಪದಲ್ಲಿ ಸಮ ಸಮವಾಗಿ ಬೆಳೆದು ಬಂದಿದೆ. ಎಂದು ಹೇಳಿದರೆ ತಪ್ಪಾಗಲಾರದು, ಮನುಷ್ಯ ಅಭಿವ್ಯಕ್ತ ಕಲೆಯನ್ನು ಬಲ್ಲ. ಪ್ರಾಣಿ. ತನಗನಿಸಿದನ್ನು – ಹೇಳುತ್ತಾ–

ತೋರುತ್ತಾ–ಕುಣಿಯುತ್ತಾ ಬರತೊಡಗಿದೆ. ಬರಬರುತ್ತಾ ಇವೆಲ್ಲವೂ ಮತ್ತಷ್ಟು ಸುಂದರಗೊಂಡು ಜನಪದ ಕಲೆಗಳಾಗಿ ರೂಪಗೊಂಡವು.

ಜನಪದ ಕಲೆಗಳು ಮನುಷ್ಯಷ್ಟೇ ಪ್ರಾಚೀನವಾದವು. ಪ್ರಕೃತಿ, ಪರಿಸರದ ಪರಿವೀಕ್ಷಣೆಯಿಂದ, ಅನುಕರಣೆಯಿಂದ ಅರಿತದ್ದನ್ನು ತಿಳಿದಿದ್ದನ್ನು ಒಂದೆಡೆ ದಾಖಲಿಸಿಕೊಳ್ಳಲು ಇಂಥ ಕಲೆಗಳು ಅಸಿತತ್ವಕ್ಕೆ ಬರುತ್ತವೆ. ಇವು ಮನಸ್ಸಿಗೆ ನೆಮ್ಮದಿ , ಸಂತೋಷ ನೀಡುವುದರ ಜೊತೆಗೆ ನಮ್ಮ ಮುಂದಿನ ಪೀಳಿಗೆಯ ಅನುಕರಣೆಯ ಆಕರಗಳಾಗಿ, ಸಂಸ್ಕೃತಿಯ ವಾಹಕವಾಗಿ ಕೆಲಸ ಮಾಡುತ್ತವೆ. ಜನಪದ ಸಂಸ್ಕೃತಿಯ ಪ್ರತಿ ಹೆಜ್ಜೆಯಲ್ಲೂ ಜನಪದ ಕಲೆಗಳನ್ನು ಕಾಣಬಹುದು. ನಮ್ಮ ಜನಪದರ ಬದುಕೇ ಒಂದು ಕಲೆ, ಜನಪದರಿಗೆ ಅರಿವಿಲ್ಲದಂತೆಯೇ ಅವರ ಬದುಕಿನಲ್ಲಿ ಇವು ಹಾಸು ಹೊಕ್ಕಾಗಿವೆ. ಕಲೆಗಳು ಬದುಕನ್ನು ಅರ್ಥಪೂರ್ಣವಾಗಿಸುತ್ತವೆ. ಜೀವನ ಬಲು ಸೊಗಸು ಅದರ ಭವ್ಯತೆಯನ್ನು ತಿಳಿಸುತ್ತವೆ. ಕಲೆ ಕೇವಲ ಮನುಷ್ಯನಿಗೆ ಮಾತ್ರ ತಿಳಿದಿರುವ ಒಂದು ಅದ್ಭುತ ಶಕ್ತಿ. ಜನಪದ ಕಲೆಗಳು ಮಾನಸಿಕ ನೆಮ್ಮದಿ, ದೈಹಿಕ ಉತ್ಸಾಹ, ಜೊತೆಗೆ ಜೀವನವನ್ನು ರಮಣೀಯಗೊಳಿಸುತ್ತವೆ. ಸೃಷ್ಠಿಯಲ್ಲಿ ಹುಟ್ಟಿ ಸಮಷ್ಠಿಯ ಸತ್ವವಾಗಿ ಪರಿಣಮಿಸುತ್ತವೆ.

ಬದುಕಿನ ಅಸ್ಥಿರತೆಯನ್ನು ಮರೆತು ಅಮರತ್ವವನ್ನು ತಂದುಕೊಳ್ಳಲು, ತನ್ನ ಅಸ್ತಿತ್ವಕ್ಕಾಗಿ ಹೋರಾಡಲು ಜೀವನೋತ್ಸಾಹ, ಪಡೆಯಲು ದೈವಾರಾಧನೆಯ ಹಿನ್ನಲೆಯಲ್ಲಿ ಜನಪದರ ಹಾಡು ಕುಣಿತ ಅರ್ವಿಭವಿಸಿದೆ.[1] ಮನುಷ್ಯನ ಅಂತರಂಗದ ಏನೆಲ್ಲ ಅಭವ್ಯಕ್ತಿಗೆ ಕುಣಿತ ಸಾಧನವಾಗಿದೆ. ಮನುಷ್ಯ

---

1. ಜಾನಪದ ಸ್ವರೂಪ ಮತ್ತು ಸಾಹಿತ್ಯ : ಡಾ. ಡಿ.ಲಿಂಗಯ್ಯ ಡಾ.ಕೆ.ಆರ್ ಸಂಧ್ಯಾರೆಡ್ಡಿ ಪುಟ –100

ಪ್ರಕೃತಿಯ ನಂಟು, ಪಕೃತಿಯ ವೈಚಿತ್ರ, ರಹಸ್ಯ ಮೊದಲಾದ ಆಗುಹೋಗುಗಳು ಕುಣಿತದಲ್ಲಿ ಪಡಿಮೂಡಿವೆ. ಇವುಗಳ ವೈವಿಧ್ಯ ವೈಚಿತ್ರ್ಯ ಅಗಾಧವಾಗಿದೆ, ಅದ್ಭುತವಾಗಿದೆ. ವ್ಯಾಪಕವಾಗಿವೆ. ಈ ವಿಶ್ವವ್ಯಾಪ್ತಿ ಕಲೆ ಆದಿ ಮಾನವನ ಹಾಗೂ ಅರ್ವಾಚೀನ ಮಾನವನ ಬದುಕಿನ ಅವಿಭಾಜ್ಯ ಅಂಗವಾಗಿದೆ.

ಜನಪದ ಕಲೆಗಳ ಜನಪದರ ಕಲಾತ್ಮಕ ಅಭಿವ್ಯಕ್ತಿ ವರ್ಣರಂಜಿತ ವೇಷಭೂಷಣ, ಸುಮಧುರವಾದ ವಾದ್ಯಮೇಳ, ಹಾಡು, ಕುಣಿತ, ಅಭಿನಯ, ಸಂಭಾಷಣೆ ಮೊದಲಾದ ಬದುಕಿನ ಮೌಲ್ಯಗಳನ್ನು ಒಳಗೊಂಡರುತ್ತವೆ. ಇವು ಸಂಸ್ಕೃತಿಯ ಪಳವಳಿಕೆಗಳಾಗಿ, ವಾಹಕವಾಗಿವೆ, ನಮ್ಮ ಜನಪದರ ಬದುಕೇ ಒಂದು ಕಲೆ. ಅವರ ಉಡುಗೆ–ತೊಡುಗೆ, ಕೆಲಸ–ಕಾರ್ಯ, ಹಬ್ಬ ಆಚರಣೆ, ನೋವು–ನಲಿವು ಎಲ್ಲದರಲ್ಲೂ ಒಂದು ಅದ್ಭುತತೇ ಎದ್ದು ಕಾಣುತ್ತದೆ. ಪ್ರತಿ ಕೆಲಸದಲ್ಲೂ ಹಾಡು. ಆ ಹಾಡಿನಲ್ಲಿ ತಮ್ಮ ಬದುಕಿನ ಪಾಡನ್ನು ಹೇಳುವರು, ಹಾಡು, ಕಥೆ, ಗಾದೆ, ಒಗಟು, ಕುಣಿತ, ನಾಟಕ, ಎಲ್ಲವೂ ಜಾನಪದ ಸಾಹಿತ್ಯದಲ್ಲಿ ಹಾಗೂ ಜನಪದ ಕಲೆಗಳಲ್ಲಿ ಕಾಣಬಹುದು.

ದೈವತ್ವದ ಆರಾಧನೆಯ ಹಿನ್ನಲೆಯಲ್ಲಿ ಜನಪದ ಹಾಡು–ಕುಣಿತಗಳು ಹುಟ್ಟಿಕೊಂಡಿವೆ. ಜಗತ್ತಿನ ಪ್ರತಿಯೊಂದು ಮಾನವ ಸಮುದಾಯಗಳಲ್ಲಿ ತನ್ನದೇ ಆದ ಕಲೆಗಳನ್ನು ರೂಢಿಸಿಕೊಂಡು ಬೆಳೆಸಿಕೊಂಡು ಬಂದಿವೆ. ಆಪತ್ತುಗಳು ಎದುರಾದಾಗ, ಕಷ್ಟಗಳು ಬಂದಾಗ ಮನುಷ್ಯ ದೇವರ ಮೊರೆಹೋಗಿ ತೃಪ್ತಿಪಡಿಸಲು ಹಾಡನ್ನು ಹಾಡಲಾರಂಭಿಸಿದ. ಹಾಡಿನ ಲಯ–ತಾಳಕ್ಕೆ ತಕ್ಕಂತೆ ವಾದ್ಯಗಳನ್ನು ಸೃಷ್ಟಿಸಿದ ಹಾಡು–ಸಂಗೀತದ ಜೊತೆಗೆ ಕುಣಿಯಲು ಆರಂಭಿಸಿದ. ಹೀಗೆ ಜನಪದ ಕಲೆಗಳು ಜನಾಂಗಿಯ ಆಚರಣೆಯ ಮನೋಧರ್ಮಗಳನ್ನು ಅರಿಯಲು ಇವು ನೆರವು ನೀಡುತ್ತದೆ. ಈ ಕಲೆಗಳು ಸಾಕಷ್ಟು ಪ್ರಾದೇಶಿಕ ವೈವಿಧ್ಯತೆಗಳಿವೆ.

ಜನಪದ ಕಲೆಗಳು ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿವೆ. ಇವುಗಳ ಪ್ರದರ್ಶನ–ಆಚರಣೆ–ಅನುಕರಣೆಗಳು ಬೇರೆ–ಬೇರೆಯಾಗಿವೆ. ಧಾರ್ಮಿಕ ಹಿನ್ನಲೆಯಾಗಿ ಹುಟ್ಟಿಕೊಂಡು ಬರಬರುತ್ತಾ ಕಲೆಗಳು

ಮನರಂಜನೆಗಾಗಿ, ಹೊಟ್ಟೆಪಾಡಿಗಾಗಿ, ಹವ್ಯಾಸ್ಕಾಗಿ ಪ್ರದರ್ಶನಗೊಳ್ಳಲಾರಂಭಿಸಿದವು. ಆಧುನಿಕ ಕಾಲದಲ್ಲಿಯೂ ಇಂದಿಗೂ ಜನಪದ ಕಲೆಗಳು ಉಳಿದುಕೊಂಡು ಬಂದಿವೆ ವ್ಯತ್ಯಾಸವೆಂದರೆ ಕಲೆಗಳ ಬಗ್ಗೆ ಜನರಿಗೆ ಮೊದಲು ಇದ್ದ ಆಸಕ್ತಿ–ಗೌರವ ಇಂದಿಲ್ಲವಾಗಿವೆ. ಜನಪದ ಕಲೆಗಳು ಅನಕ್ಷರಸ್ಥರ ಕಲೆಗಳು, ಅನಾಗರಿಕರ ಕಲೆಗಳು ಎಂಬ ಮನೋಧೋರಣೆ ಬೆಳೆಯುತ್ತಿರುವದು ವಿಷಾದನೀಯ.

ಜನಪದ ಕಲೆಗಳಲ್ಲಿ (Folk Arts) ಪ್ರದರ್ಶನ ಕಲೆಗಳ ಪಾಲು ದೊಡ್ಡದು. ಪ್ರತಿ ಜನಾಂಗದಲ್ಲೂ ಇವು ಹೇರಳವಾಗಿವೆ. ಇವುಗಳಲ್ಲಿ ಜನಪದ ಕುಣಿತಗಳದ್ದು ಸಿಂಹಪಾಲು, ಇವುಗಳನ್ನು ಧಾರ್ಮಿಕ ಕುಣಿತಗಳು, ಲೌಕಿಕ ಕುಣಿತಗಳು ಎಂದು ಸ್ಥೂಲವಾಗಿ ವಿಭಾಗಿಸಬಹುದು. ದೈವರಾಧನೆಯ ಹಿನ್ನಲೆಯಲ್ಲಿ ಹುಟ್ಟಿಕೊಂಡಥವು ಧಾರ್ಮಿಕ ಕುಣಿತಗಳು. ನಮ್ಮ ಜನಪದ ಕುಣಿತಗಳ ಪ್ರಾಚೀನತೆಯನ್ನು ಗುರುತಿಸಲು ಹೊರಟಾಗಲೆಲ್ಲಾ ನಿಖರವಾದ ಕಾಲದ ಸಮಸ್ಯೆ ಮತ್ತು ಅಧಿಕೃತ ಚರಿತ್ರೆಯ ಸಮಸ್ಯೆ ಎದುರಾಗುತ್ತದೆ. ಕುಣಿತಗಳ ಮೂಲ ನೋಡಿದರೆ ಲೋಕದ ಒಡೆಯ ಶಿವ ತಾಂಡವ ನೃತ್ಯ ಮಾಡುವದು ಅವನನ್ನು ನಟರಾಜ ಎಂದು ಕರೆಯವ ಉಲ್ಲೇಖಗಳು ನಮಗೆ ಪುರಾಣಗಳಿಂದ ಲಭ್ಯವಾಗಿವೆ. ಜೀವನದ ನೋವು–ನಲಿವಿನ ಸಂದರ್ಭದಲ್ಲಿ ನಮ್ಮ ಕಾಲುಗಳು ಹೆಜ್ಜೆ ಹಾಕುತ್ತವೆ. ಕುಣಿತ ಮನುಷ್ಯನ ಜೀವನದ ಭಾಗವಾಗಿದೆ.

ಆರಾಧನೆಯ ಅಂಗವಾಗಿ ಧಾರ್ಮಿಕ ಪ್ರಸಾರಕ್ಕಾಗಿ ಹೊಟ್ಟಿಕೊಂಡ ಕಲೆಗಳು ಕ್ರಮೇನ ವೃತ್ತಿಪರತೆಗೆ ಹಾದಿ ಮಾಡಿಕೊಟ್ಟಿವೆ. ಮನರಂಜನೆಯ ಕಲೆಗಳಾಗಿ ರೂಪುಗೊಂಡವು. ಈ ಹೊತ್ತಿಗೂ ಜನಪದ ಕಲೆಗಳಲ್ಲಿ ಜನಪದರ ಧಾರ್ಮಿಕ ಬದ್ಧತೆ ಅಡಗಿದೆ. ಅದರಲ್ಲಿ ಮನರಂಜನೆ ಎದ್ದು ಕಾಣುತ್ತದೆ. ಪ್ರೇಕ್ಷಕರು ಮತ್ತು ಕಲಾವಿದರೀರ್ವರೂ ಕಲೆಗಳ ಪ್ರದರ್ಶನದಲ್ಲಿ ಒಟ್ಟಾಗಿ ಸಮಾಧಾನ ಸಂತೃಪ್ತಿಗಳನ್ನು ಕಾಣುವ ಮೂಲಕ ಮಾನಸಿಕ ಉನ್ನತಿಯನ್ನು ಸಾಧಿಸುತ್ತಾರೆ. ಕಲೆಗಳು ಜಾತಿ–ಮತಗಳ ಮೇಲು ಕೀಳುಗಳ ಅಂತರವನ್ನು ನಿವಾರಿಸುತ್ತವೆ. ವರ್ಗ ವರ್ಣ ಸಾಮರಸ್ಯಗಳನ್ನು ಕಲಿಸುತ್ತವೆ. ಕೋಮು ಸೌಹಾರ್ದತೆಯನ್ನು ಬೆಳೆಸುತ್ತವೆ.

ಜನಪದ ಕಲೆಗಳಲ್ಲಿ ಕುಣಿತಗಳೇ[1] (Dance) ಸಿಂಹಪಾಲು, ಹಾಡು–ಸಂಗೀತದ ಜೊತೆ–ಜೊತೆಗೆ ನೃತ್ಯಗಳು ಸೇರಿ ಜನಪದ ಕುಣಿತಗಳಾದವು. ಮನುಷ್ಯನ ಜೀವನ ನೋವು ನಲಿವುಗಲನ್ನು ಅಭಿವ್ಯಕ್ತಿಸಲು, ಪಾರಂಪರಿಕ ಸಂಸ್ಕೃತಿಯನ್ನು ಪ್ರದರ್ಶಿಸಲು, ದೇವರ ಆರಾಧನೆಗೂ ಹೀಗೆ ಹಲವು ಕಾರಣಗಳಿಗಾಗಿ ಜನಪದ ಕುಣಿತಗಳು  ಹುಟ್ಟಿಕೊಂಡವು. ಹಬ್ಬ ಹರಿದಿನ ವಿಶೇಷವಾದ ಜಾತ್ರಾ ಉತ್ಸವದ ಸಂದರ್ಭದಲ್ಲಿ ದೈವತ್ವವನ್ನು ಶಾಂತಗೊಳಿಸಲು, ಮೆಚ್ಚಿಸಲು, ಸಂತೃಪ್ತಗೊಳಿಸಲು ಈ ಕುಣಿತಗಳನ್ನು ಮಾಡುವದು ರೂಢಿಯಾಯಿತು. ಕುಣಿತಗಳಿಂದ ಮನರಂಜನೆ, ಮಾನಸಿಕ ಸಂತೋಷ ದೈಹಿಕ ಉತ್ಸಾಹಗಳು ಲಭ್ಯವಾಗುವುದುಂಟು. ಒಬ್ಬರು ಮಾಡುವ ಕುಣಿತಗಳು, ಸಮೂಹ ಕುಣಿತಗಳಾಗಿಯು ರೂಪಗೊಂಡವು.

---

ಜನಪದ ಕಲಾ ಪ್ರವೇಶ : ಡಾ. ಚಕ್ಕೆರೆ ಶಿವಶಂಕರ ಪುಟ–8

## 1. ಜನಪದ ಕುಣಿತಗಳ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :

ಜಾನಪದ ಕ್ಷೇತ್ರ ಸಾಗರವಿದ್ದಂತೆ ಇದರಲ್ಲಿ ಎಲ್ಲವೂ ಇದ್ದು ಕಥೆ, ಹಾಡು, ಕುಣಿತ, ಪುರಾಣ, ನಂಬಿಕೆ, ಉಡುಗೆ-ತೊಡುಗೆ, ಹಬ್ಬ-ಜಾತ್ರೆ, ಕಲೆ, ಒಗಟು, ಗಾದೆ, ಒಡಪು, ಐತಿಹ್ಯ, ಸಂಪ್ರದಾಯ, ಆಚರಣೆಗಳು, ಹೀಗೆ ಒಂದೇ ಎರಡೇ ಎಲ್ಲವನ್ನೂ ತನ್ನ ತೆಕ್ಕೆಯೊಳಗೆ ಸೇರಿಸಿಕೊಂಡು ಸಂಭ್ರಮಿಸ ತೊಡಗುತ್ತಾ ಬಂದಿದೆ. ಪ್ರಾಣಿ ಸಂಸ್ಕೃತಿಯಿಂದ ಮಾನವ ಸಂಸ್ಕೃತಿಯು ಭಿನ್ನವಾಗಿದೆ. ಅದಕ್ಕೆ ಅವನ ಬದುಕುವ ಕಲೆಯೇ ಕಾರಣ. ಜನಪದ ನಮ್ಮ ಸಂಸ್ಕೃತಿಯನ್ನು ತಲೆ ತಲಾಂತರದಿಂದ ಪೀಳಿಗೆಯಿಂದ ಪೀಳಿಗೆಗೆ ಹಂಚುತ್ತಾ, ತಿಳಿಸುತ್ತಾ, ವಿವರಿಸುತ್ತಾ ಬಂದಿದೆ. ಹೀಗೆ ಅಮೂಲ್ಯವಾದ ಸಂಸ್ಕೃತಿಯ ಖಣಿಯಾಗಿರುವ ಜನಪದದ ಅಧ್ಯಯನ ತೀರಾ ಅವಶ್ಯಕ. ನಮ್ಮ ಹಿಂದಿನ ಸಂಸ್ಕೃತಿ ಅರಿಯದೆ ಮುಂದಿನ ಬದುಕ್ನು ಕಟ್ಟುವದು ಸಾಧ್ಯವಿಲ್ಲ. ಜಾನಪದ ಅಧ್ಯಯನವೆಂದರೆ ಕೇವಲ ಹಿಂದಿನ ಸಂಸ್ಕೃತಿಯ ಅಧ್ಯಯನವಷ್ಟೆ ಅಲ್ಲ. ಪ್ರಸ್ತುತ ಸಂಸ್ಕೃತಿಯ ಅಧ್ಯಯನವೂ ಹೌದು. ಜಾನಪದ ಮನುಕುಲದ ಮೂಲ ಜೀವನದ ವಿಧಾನವನ್ನು ಅರಿಯಲು ಅವಕಾಶ ನೀಡುತ್ತದೆ. ಮೌಖಿಕ ಪರಂಪರೆಯ ಸಮಸ್ತ ವಿಷಯಗಳ್ನು ಪರಿಚಯಿಸುತ್ತದೆ. ಎಲ್ಲ ದೇಶಗಳ ಸಂಸ್ಕೃತಿಗಳು ಮೇಲನೋಟಕ್ಕೆ ಬೇರೆ-ಬೇರೆಯಾಗಿ ಕಂಡರೂ ತೌಲನಿಕವಾಗಿ ಅಭ್ಯಸಿಸಿದಾಗ ಕೆಲ ಸಮಾನ ಅಂಶಗಳಿರುವುದನ್ನು ಕಾಣಬಹುದು. ಜಾನಪದ ಅಂತರರಾಷ್ಟ್ರಿಯ ಸ್ವರೂಪದ್ದಾಗಿರುವುದರಿಂದ ಅದರ ಅಧ್ಯಯನದಿಮದ ವಿವಿಧ ಜನಾಂಗಗಳ ನಡುವೆ ಸಾಮರಸ್ಯ-ಸೌಹಾರ್ದತೆ ಮಾಡಲು ಸಹಾಯಕವಾಗುತ್ತದೆ.

ಜನಪದ ಕುಣಿತಗಳು ಹಾಡು, ಸಂಗೀತ, ಸಂಭಾಷಣೆ, ಅಭಿನಯಗಳಿಂದ ಸಂಪೂರ್ಣಗೊಂಡಿವೆ. ಪ್ರತಿ ಕುಣಿತ ದೇವರ ಆರಾಧನೆಯ ಹಿನ್ನಲೆಯಾಗಿ ಹುಟ್ಟಿಕೊಂಡಿವೆ. ಪ್ರತಿ ಕುಣಿತವು ದೇವರ ಆರಾಧಾನೆಯ ಹಿನ್ನಲೆಯಾಗಿ ಹುಟ್ಟಿಕೊಂಡಿವೆ. ಪ್ರತಿ ಕುಣಿತವು ಒಂದೊಂದು ದೇವರಿಗೆ ಮೀಸಲಾಗಿ ರೂಪುಗೊಂಡಿದೆ. ಶಿವನ ಆರಾಧನೆಗಾಗಿ ವೀರಭದ್ರನ ಕುಣಿತ, ವೀರಗಾಸೆ ನೃತ್ಯ, ಪುರವಂತರ, ಎಲ್ಲಮ್ಮನ

ಆರಾಧನೆಗಾಗಿ ಚಾಡಿಕೆ ಮೇಳ, ಜೋಗತಿ ಕುಣಿತ, ಭೂತೇರ ಕುಣಿತ, ಗೊಂದಲಿಗರ ಮೇಳ, ಮೊಹರಂ ಆರಾಧನೆಗಾಗಿ ಮೊಹರಂ ಕುಣಿತ ಅಲಾಯಿ ಕುಣಿತ, ಹೆಜ್ಜೆ ಕುಣಿತ, ಮೈಲಾರಲಿಂಗನ ಆರಾಧನೆಗಾಗಿ ಗೊರವರ ಕುಣಿತ, ಡೊಳ್ಳು ಕುಣಿತ, ಮಲೆಮಾದೇಶ್ವರನ ಆರಾಧನೆಗಾಗಿ ಕಂಸಾಳೆ ಕುಣಿತ, ನಿಲಗಾರ ಕುಣಿತ (ಮೇಳ) ಸಮೃದ್ಧಿಯ ಆಚರಣೆಗಾಗಿ ಹೋಳಿ ಕುಣಿತ ಕೋಲಾಟ, ನಂದಿ ಧ್ವಜ ಕುಣಿತ, ಪಂಜಿನ ಕುಣಿತ ಕೊಡದ ಕುಣಿತ ಬುಡಕಟ್ಟು ಹಾಗೂ ಕೆಳವರ್ಗದವರ ಗೌಳಿಗರ ಕುಣಿತ, ಒಕ್ಕಲಿಗರ ಕುಣಿತ, ಲಂಬಾಣಿ ಕುಣಿತ, ಗೊರವರ ಕುಣಿತ ಒಂದೇ ಎರಡೆ ಹೀಗೆ ನೂರಾರು ಬಗೆಯ ಕುಣಿತಗಳು ನಮಗೆ ನಮ್ಮ ಸಮುದಾಯ ಮಧ್ಯಯೇ ಕಾಣಸಿಗುತ್ತವೆ. ನಮ್ಮ ಸಂಸ್ಕೃತಿಯನ್ನು ಹಾಸು ಹೊಕ್ಕಾಗಿ ಅಳವಡಿಸಿ ರೂಪಿಸಿರುವ ಜನಪದ ಕುಣಿತಗಳು ಇಂದು ಕಣ್ಮರೆಯಾಗುತ್ತವೆ. ಮಾನವ ಆಧುನೀಕರಣ ಹೊಂದಿದಂತೆ ಜೀವನ ಶೈಲಿಯು ಬದಲಾಗುತ್ತಿದೆ. ಜಾಗತೀಕರಣದ ಮಧ್ಯೆ ನೆಲಮೂಲ ಸಂಸ್ಕೃತಿಯ ಬೇರಾಗಿರುವ, ದೇಶಿ ಸೊಗಡನ್ನು ಹೊಂದಿರುವ ಕುಣಿತಗಳು ಇಂದು ಮುಖ್ಯ ವಾಹಿನಿಯಿಂದ ದೂರ ಉಳಿಯುತ್ತಿವೆ. ಆಧುನಿಕ ಮತ್ತು ಪಾಶ್ಚಾತ್ಯ, ಶಾಸ್ತ್ರೀಯ ಸಂಗೀತ ನೃತ್ಯಗಳ ಮಧ್ಯ ಅಜ್ಞಾತ ಅನಕ್ಷರಸ್ಥರ ಅವಿಷ್ಕಾರಗಳಾಗಿರುವ ನಮ್ಮ ಜನಪದ ಕುಣಿತಗಳನ್ನು ನೋಡುವವರ ಸಂಖ್ಯೆ ಕಡಿಮೆಯಾಗಿದೆ. ಅಬ್ಬರದ (ವಿದೇಶಿ) ರಾಕ್ ಸಂಗೀತದ ಮಧ್ಯೆ ಕಂಟೆಂಪ್ರರಿ, ರಾಕ್ ಡಾನ್ಸ್‌ನ ಹಾವಳಿಯ ನಡುವೆ ಜನಪದ ಕುಣಿತಗಳನ್ನು ಕೇಳುವವರೂ ನೋಡುವವರಿಲ್ಲದಾಗಿದೆ.

ಜನಪದ ಕುಣಿತಗಳನ್ನು ಜನಪದರು ಹಬ್ಬ ಹರಿದಿನ, ಜಾತ್ರೆ ಉತ್ಸವಗಳ ಸಂದರ್ಭದಲ್ಲಿ ಬಹಳ ಸಂತೋಷ, ಉತ್ಸಾಹ, ಮತ್ತು ಆಸಕ್ತಿಯಿಂದ ಕುಣಿಯುತ್ತಿದ್ದರು. ಹೀಗಾಗಿ ಹಳ್ಳಿಗಳ್ಳಲಿ ಇವು ತಕ್ಕ ಮಟ್ಟಿಗೆ ಉಳಿದುಕೊಂಡು ಬಂದಿವೆ. ಇಂದು ಹಬ್ಬ ಹರಿದಿನಗಳ ಆಚರಣೆಗಳೇ ಕಡಿಮೆಯಾಗುತ್ತಿದ್ದು ಕುಣಿತಗಳು ಮಾಡುವುದು ಕಡಿಮೆಯಾಗುತ್ತಿದೆ. ಜನಪದ ಕಲಾವಿದರಿಗೆ ಸಿಗಬೇಕಾದ ಗೌರವ ಸನ್ಮಾನಗಳು ತೀರ ಕಡಿಮೆಯಾಗಿದ್ದು ಕಲಾ ಪ್ರದರ್ಶನಕ್ಕೆ ಉತ್ತಮ ವೇದಿಕೆಗಳು ಸಿಗುತ್ತಿಲ್ಲ.

ಜ್ಞಾನ ಸಂಸ್ಕೃತಿಗಳ ಪ್ರಸಾರ ಮಾಧ್ಯಮವಾಗಿರುವ ಜನಪದ ಕುಣಿತಗಳು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸಗೊಳ್ಳುತ್ತವೆ. ಆಯಾ ಪ್ರದೇಶಗಳಲ್ಲಿನ ರೀತಿ–ಗೀತೆಗಳು ಅಭಿರುಚಿ–ಮನೋಧರ್ಮಗಳು ಅಲ್ಲಿಯ ಜನಮನದ ಸೌಂದರ್ಯ ಪ್ರಜ್ಞೆಯ ಆಯಾ ಪ್ರದೇಶಿಕ ಕುಣಿತಗಳಲ್ಲಿ ಬಿಂಬಿತವಾಗುತ್ತದೆ. ಜನಪದ ಕುಣಿತಗಳು ತೀರಾ ಸರಳ. ಅಷ್ಟೇ ರೋಮಾಂಚನವನ್ನುಂಟು ಮಾಡುತ್ತವೆ. ಹುಬ್ಬೇರಿಸಿ, ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡುತ್ತವೆ. ಕೆಲವೊಂದು ಕುಣಿತಗಳನ್ನು ನೋಡುತಿದ್ದರೆ ಕುಣಿಯುವ ಕಲಾವಿದರ ಮೈಯಲ್ಲಿ ಪರಕಾಯ ಪ್ರವೇಶವಾದಂತೆ ಅಷ್ಟು ಆವೇಶದಿಂದ, ಸಮರ್ಪಣಾ ಭಾವದೊಂದಿಗೆ ಕುಣಿಯುತ್ತಾರೆ. ಡೊಳ್ಳು ಕುಣಿತದಲ್ಲಿ ಡೊಳ್ಳಿನ ಸದ್ದು ಮುಗಿಲು ಹರಿದು ಬಾನೆತ್ತರಕ್ಕೆ ಕೇಳಿಸುವಂತಹದ್ದು. ಪೂಜಾ ಕುಣಿತದಲ್ಲಿ ದೇವರ ವಿಗ್ರಹವನ್ನು ಶಿರದ ಮೇಲೆ ಇಟ್ಟುಕೊಂಡು ಕಲಾವಿದನ ಕಾಲಗಳ ಹೆಜ್ಜೆಯ ಗತಿಯನ್ನು ನೋಡಿದರೆ ಅಬ್ಬಾ ಎಂದ ಎನಿಸದೆ ಇರದು. ಕಂಸಾಳೆ ನೃತ್ಯದಲ್ಲಿ ಒಬ್ಬರ ಮೇಲೆ ಮತ್ತೊಬ್ಬರು ನಿಂತು–ಕುಳಿತು ಕಂಸಾಳೆ ಬಾರಿಸುತ್ತಾ–ಹಾಡುವುದನ್ನು ನೋಡಲು ಎರಡು ಕಣ್ಣು ಸಾಲದು. ಮೊಹರಂನ ಅಲಾಯಿ ಕುಣಿತ ಹಿಂದೂ–ಮುಸ್ಲಿಂರ ಭಾವೈಕ್ಯದ ಸಂಕೇತವಾಗಿ ತೋರುತ್ತದೆ. ಹೀಗೆ ಪ್ರತಿ ಜನಪದ ಕುಣಿತಗಳಿಗೆ ತನ್ನದೇ ಆದ ವೈಶಿಷ್ಟ್ಯತೆ ಹಾಗೂ ವೈವಿಧ್ಯತೆಯು ಉಂಟು.

ಮಂಗನಿಂದ–ಮಾನವ ಎಂಬಂತೆ ಮನುಷ್ಯ ಇಂದು ಮೀನಿನಂತೆ ಈಜಬಲ್ಲ. ಹದ್ದಿನಂತೆ ಹಾರಬಲ್ಲ. ಚಂದ್ರಲೋಕಕ್ಕೆ ಹೋಗಿ ಹೊಸ ಇತಿಹಾಸವನ್ನು ಸೃಷ್ಟಿಸಿದೆ. ಕಾಲಕ್ಕನುಗುಣವಾಗಿ ಅವನು ಬೆಳವಣಿಗೆ ಹೊಂದತ್ತಲೇ ಬರುತ್ತಿದ್ದಾನೆ. ಅದೇ ರೀತಿ ಆದಿ ಮಾನವನಿಂದ ಹಿಡಿದು ಇಂದಿನ ಈ ಆಧುನಿಕ ಮಾನವನ ಜೀವನ ಕ್ರಮದೊಂದಿಗೆ ರಕ್ತಗತವಾಗಿ ಬೆಳೆದು ಬಂದಿರುವ ಜನಪದ ಕಲೆ–ಸಂಸ್ಕೃತಿಯ ಬಗ್ಗೆ ಹಗುರಾಗಿ ಮಾತಾಡುವುದು ಸರಿಯಲ್ಲ. ಜನಪದ ಕುಣಿತಗಳು ಅನಾದಿ ಕಾಲದಿಂದ ಹಿಡಿದು ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳಾಗಿ ಉಳಿದುಕೊಂಡು ಬಂದಿವೆ. ಇಷ್ಟ ಅಪೂರ್ವವಾದ, ರಮ್ಯವಾದ ಕುಣಿತಗಳು ಇಂದು ಕಣ್ಮರೆಯಾಗುತ್ತಿವೆ.

ಟಿ.ವಿಯ ಹಾವಳಿ ಹೆಚ್ಚಾದಂತೆ, ಆಧುನಿಕ ಮನೊರಂಜನೆಯ ಸೌಲಭ್ಯಗಳು ಸಿಗುತ್ತೀರುವಾ ಜನಪದ ಕುಣಿತಗಳನ್ನು ನೋಡುವ, ಕಣ್ಣುಗಳು ಕಡಿಮೆಯಾಗಿವೆ. ನಗರಗಳಿಗೆ ಹೋಲಿಸಿದರೆ ಹಳ್ಳಿಗಳಲ್ಲಿ, ಒಂದಿಷ್ಟು ಕಲೆಗಳು ಉಳಿದಿವೆ. ಅಗಾದ ಸಂಸ್ಕೃತಿಯ ಕುರುಹುಗಳಾದ ಜನಪದ ಕುಣಿತಗಳನ್ನು ಇಂದಿಗೂ ಒಂದಿಷ್ಟು ಉಳಿಸಿದವರೆಂದರೆ ನಮ್ಮ ಗ್ರಾಮೀಣ ಪ್ರದೇಶ ಅನಕ್ಷರಸ್ಥ ಜನಪದರು, ತಾಯಂದಿರು ಹಳ್ಳಿಗರು. ಕಲೆಗೆ ಬೆಲೆ ಕೊಟ್ಟು ಇನ್ನು ಕೂತುಹಲತೆಯಿಂದ ನೋಡುತ್ತಾರೆ. ಊರ ಹಬ್ಬಗಳಲ್ಲಿ, ಜಾತ್ರೆಗಳಲ್ಲಿ ಜನಪದ ಕುಣಿತಗಳು ಇರಲೇ ಬೇಕು. ಇತ್ತೀಚಿಗೆ ಒಂದು ಹೊಸ ಅಲೆ ಎದ್ದಿದೆ. ಅದೇನೆಂದರೆ ಚಲನ ಚಿತ್ರಗಳಲ್ಲಿ, ರಾಜಕೀಯ ಪಕ್ಷಗಳ ಸಾರ್ವಜನಿಕ, ಸಾಮಾಜಿಕ ಕಾರ್ಯಕ್ರಮಗಳಲ್ಲಿ ಸರಕಾರಿ ಸಮಾರಂಭಗಳಲ್ಲಿ ರಾಜಕೀಯ ನಾಯಕರ ಮೆರವಣಿಗೆಗಳಲ್ಲಿ ಕುಣಿತಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಜನಪದ ಕುಣಿತಗಳ ವೈಶಿಷ್ಯತೆಯೇ ತಿಳಿಯದ ಸುಶಿಕ್ಷತರಿಗೆ ಅವುಗಳನ್ನು ನೋಡುವ, ತಿಳಿಯುವ ಅವಕಾಶ ಲಭಿಸುತ್ತದೆ. ಜನಾಂಗಗಳ ಸಾಂಸ್ಕೃತಿಕ ವಾಹಕಗಳಾದ ಕುಣಿತಗಳು ತಲೆಮಾರುಗಳ ಸಾಧನೆಯ ಸಾಕ್ಷ್ಯಗಳಾಗಿ ಉಳಿದು ಬಂದಿದೆ. ಪಾಶ್ಚ್ಯತ ದೇಶಗಳು ಈಗಾಗಲೇ ಜನಪದ ಸಾಹಿತ್ಯ-ಕಲೆಗಳನ್ನು ರಾಷ್ಟ್ರೀಯ ಆಸ್ತಿಯೆಂದು ಪರಿಗಣಿಸಿವೆ. ನಮ್ಮಲ್ಲಿಯೂ ಸಹ ರಾಷ್ಟ್ರೀಯ ಪ್ರಜ್ಞೆಯನ್ನುಂಟು ಮಾಡುವ, ಭಾವೈಕ್ಯತೆಯನ್ನು ಬೆಳೆಸುವ ಜನಪದ ಕುಣಿತಗಳನ್ನು ಉಳಿಸಿಕೊಳ್ಳಬೇಕು. ಇಲ್ಲವಾದಲ್ಲಿ ಸಮುದಾಯದ ಬದುಕು ಅರ್ಥಹೀನವಾಗುತ್ತದೆ. ಈ ಉದ್ದೇಶದಿಂದಲೇ ಮಾನವ ಜನಾಂಗದ ಪಳಯುಳಿಕೆಯಂತಿರುವ ನಮ್ಮ ಸಂಸ್ಕೃತಿಯ ವಾಹಕಗಳು ಆದ ಜನಪದ ಕುಣಿತಗಳ ಕುರಿತು ಸಂಶೋಧನೆ ಮಾಡಲು ನಿರ್ಧರಿಸಿದ್ದೇನೆ.

ಕರ್ನಾಟಕ ಬಹು ವೈವಿದ್ಯಮಯವಾದ ಕಲೆಗಳ ಬೀಡು. ಪ್ರತಿ ಜಿಲ್ಲೆಯೂ ತನ್ನದೇ ಆದ ವೈವಿದ್ಯಮಯವಾದ, ವೈಶಿಯುಷ್ಯಯುತವಾದ ಕಲೆ ಸಂಸ್ಕೃತಿಯ ಛಾಪನ್ನು ಹೊಂದಿದೆ. ಕನ್ನಡ ನಾಡಿನ ಚರಿತ್ರೆ ಸಹ ಅಷ್ಟೇ ವಿಶಿಷ್ಟವಾದುದು. ಚರಿತ್ರೆ ಕಾಲ ಘಟ್ಟಗಳಲ್ಲಿ ನಾನಾ ಕಾರಣಗಳಿಂದ, ಹುಟ್ಟಿಕೊಂಡ ಕಲೆಗಳು ಕರ್ನಾಟಕದ ವೈವಿದ್ಯಮಯ ಭೌಗೋಳಿಕತೆಯ ಹಿನ್ನಲೆಯಲ್ಲಿ ಭಿನ್ನ ರೂಪಗಳನ್ನು ಪಡೆದಿವೆ.

ವಿಭಿನ್ನ ಪ್ರದೇಶ, ವಿಭಿನ್ನ ಜನ ಸಮುದಾಯ, ವಿವಿಧ ಧರ್ಮ, ವಿಭಿನ್ನ–ಆಚರಣೆ ವಿಭಿನ್ನ–ವೈವಿಧ್ಯಮಯವಾದ ಭಾಷೆ ಹೀಗೆ ಹತ್ತು ಹಲವು ಕಾರಣಗಳಿಂದ ಜನಪದ ಕಲೆಗಳ ಸ್ವರೂಪವನ್ನು ಪ್ರಭಾವಿಸಿವೆ. ದೇಶಿ ವಿದೇಶಿ ವಿದ್ವಾಂಸರ ಜಾನಪದ ಶ್ರದ್ಧೆ ಬದ್ಧತೆಯಿಂದ ಮೂಲೆಗುಂಪಾಗಿರುವ ಜನಪದ ಅಜ್ಞಾತರಾಗಿದ್ದ ಉತ್ಕೃಷ್ಟ ವೃತ್ತಿ ಗಾಯಕರನ್ನು, ಜನಪದ ಕುಣಿತಗಳನ್ನು ಬೆಳಕಿಗೆ ತಂದ ಯಶಸ್ಸು ಜೀಶಂಪ, ಎಚ್.ಎಲ್, ನಾಗೇಗೌಡ ಮೊದಲಾದವರಿಗೆ ಸಲ್ಲುತ್ತದೆ.

ಜನಪದ ಕುಣಿತಗಳು ಕರ್ನಾಟಕದ ಎಲ್ಲಾ ಪ್ರದೇಶಗಳಲ್ಲೂ ಜೀವಂತವಿದ್ದು ವಿಭಿನ್ನ ಬಗೆಯಲ್ಲಿ ಉಳಿದುಕೊಂಡು ಬಂದಿವೆ. ಕರ್ನಾಟಕದ ಈಶಾನ್ಯ ಭಾಗದಲ್ಲಿರುವ ಹೈದ್ರಾಬಾದ ಕರ್ನಾಟಕ (ಉತ್ತರ ಕರ್ನಾಟಕದ ಒಂದು ಭಾಗ) ಕಲೆ–ಸಾಹಿತ್ಯ–ಸಂಸ್ಕೃತಿಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಆರು ಜಿಲ್ಲೆಗಳು 35 ಕ್ಕೂ ಹೆಚ್ಚು ತಾಲ್ಲೂಕು ಹೊಂದಿರುವ ಈ ಭಾಗ ಹಿಂದೂ–ಮುಸ್ಲಿಂ ಸಂಸ್ಕೃತಿಯ–ಭಾವೈಕ್ಯತೆಯ ಮತ್ತು ಕೋಮ ಸೌಹಾರ್ದತೆಯ ತಾಣವಾಗಿದೆ. ಕದಂಬರು ರಾಷ್ಟ್ರಕೂಟರ, ಕಲ್ಯಾಣದ ಚಾಲುಕ್ಯ, ಕಳಚೂರಿಯರು, ಬಹಮನಿ ಸುಲ್ತಾನರು, ಹೈದ್ರಾಬಾದ ನಿಜಾಮರು ಅನೇಕ ರಾಜವಂಸ್ಥ ರಾಜ ಮನೆತನಗಳು ಆಳ್ವಿಕೆ ನಡೆಸಿದ್ದಾರೆ. ಕನ್ನಡದ ಮೊಟ್ಟ ಮೊದಲ ಕೃತಿ 'ಕವಿರಾಜಮಾರ್ಗ' ರಚನೆಯಾದದ್ದು ಮಾನ್ಯಖೇಟದ ರಾಷ್ಟ್ರಕೂಟರ ಕಾಲದಲ್ಲಿ . ಮೊಟ್ಟ ಮೊದಲ ಗದ್ಯ ಗ್ರಂಥವಾದ 'ವಡ್ಡಾರಾಧನೆ ದೊರೆತದ್ದು 'ಪಲ್ಲಿಖೇಡ' (ಬೀದರಿನ ಹಳ್ಳಿಖೇಡ) ಎಂಬಲ್ಲಿ, 12 ನೇ ಶತಮಾನದಲ್ಲಾದ ವಚನ ಚಳುವಳಿ, ಕಲ್ಯಾಣ ಕ್ರಾಂತಿ ಆದದ್ದು ಬೀದರ ಜಿಲ್ಲೆಯ ಬಸವಕಲ್ಯಾಣದಲ್ಲಿ. ಮಹಾದಾಸೋಹಿ ಶರಣಬಸವೇಶ್ವರರು ನೆಲೆಸಿದ್ದು ಕಲ್ಬುಗಿಯಲ್ಲಿ, ಖಾಜಾ ಬಂದೇನವಾಜರ ತಾಣವೂ ಹೌದು. ಯಾದಗಿರಿಯ ಬಲಿಷ್ಟ ಬೆಟ್ಟಗಳು, ಕನ್ನಡ ಖ್ಯಾತ ತತ್ವಪದಕಾರ ಕಡುಕೋಳ ಮಡಿವಾಳಪ್ಪ, ಕೊಪ್ಪಳದ ಗವಿಸಿದ್ದೇಶ್ವರ ದೇವಾಲಯ, ರಾಯಚೂರಿನ ಅಪಾರ ಸಂಖ್ಯೆಯ ಜನಪದ ಕವಿಗಳು, ಬಳ್ಳಾರಿಯ ಜನಪದ ರಂಗಭೂಮಿ ಕಲಾವಿದರು, ಹೀಗೆ

ಹೈದ್ರಬಾದ ಕರ್ನಾಟಕದ ಪ್ರತಿ ಜಿಲ್ಲೆಯು ಒಂದೊಂದು ಕಲೆಯ ಕೇಂದ್ರಗಳಾಗಿವೆ. ಗಂಡು ಮೆಟ್ಟಿದ ನೆ., ಶರಣರ ಕಲ್ಯಾಣ ಕರ್ನಾಟಕವೆಂತಲೂ ಕರೆಯುವುದುಂಟು.

ಹೈದ್ರಾಬಾದ ಕರ್ನಾಟಕವು ಸಾಂಸ್ಕೃತಿಕಾಗಿ ಅಪಾರ ಸಮೃದ್ಧಿಯನ್ನು ಹೊಂದಿದೆ. ಜಾನಪದ ಸಂಶೋಧನೆಗೆ ಮೂಲ ಆಕರ ಸ್ಥಾನವಾಗಿದೆ. ಈ ಭಾಗದಲ್ಲಿ ಅನೇಕ ಬಗೆಯ ಜನಪದ ಕುಣಿತಗಳು ಕಾಣಸಿಗುತ್ತವೆ. ಕರ್ನಾಟಕ ಜಾನಪದ ಕ್ಷೇತ್ರಕ್ಕೆ ಈ ಭಾಗದ ವಿದ್ವಾಂಸರು ಅನೇಕ ಸಂಶೋಧನೆಗಳನ್ನು ಕೈಗೊಂಡು ಅಪಾರವಾದ ಮಾಹಿತಿಯನ್ನು ನೀಡಿದ್ದಾರೆ. ಕರ್ನಾಟಕ ಜನಪದ ರಂಗಭೂಮಿ ಕ್ಷೇತ್ರಕ್ಕೆ ಹೈದ್ರಬಾದ ಕರ್ನಾಟಕ ಭಾಗ ಅಪಾರ ಕೊಡುಗೆಯನ್ನು ನೀಡಿದೆ. ಸಣ್ಣಾಟ, ದೊಡ್ಡಾಟ, ಅದರಲ್ಲೂ ಜಗತಪ್ರಸಿದ್ಧ,

"ಶ್ರೀ ಕೃಷ್ಣ ಪಾರಿಜಾತ' ಸಣ್ಣಾಟ ಪರಿಚಯಿಸಿದ ರಾಯಚುರು ಜಿಲ್ಲೆಯ ಅಪರಾಳ ತಮ್ಮಣ್ಣ. ಹೈದ್ರಬಾದ ಕರ್ನಾಟಕ ಜಾನಪದ ಸಂಸ್ಕೃತಿಯ ಮತ್ತು ಕಲೆಯ ತವರು ಎಂದರೂ ತಪ್ಪಾಗಲಾರದು. ಈ ಭಾಗದಲ್ಲಿ ಕುಣಿತಗಳು ಅಷ್ಟೇ ಸಂಖ್ಯೆಯಲ್ಲಿವೆ. ಪ್ರತಿ ಹಬ್ಬ ಉತ್ಸವಕ್ಕೊಂದು ಕುಣಿತಗಳಿವೆ. ಜಾಗತೀಕರಣದ ಗಾಳಿ ಎಲ್ಲ ಕಡೆಗೂ ಬೀಸಿ ಕುಣಿತಗಳು ಇಂದು ಕಣ್ಮರೆಯಾಗುತ್ತಿವೆ.

ಆದುದರಿಂದ ಹೈದ್ರಬಾದ ಕರ್ನಾಟಕದ ಜನಪದ ಕುಣಿತಗಳ ಕುರಿತು ಸಂಶೋಧನೆ ಕೈಗೊಂಡು ಅಳಿದುಳಿದ ಕುಣಿತಗಳ ಮಹತ್ವವನ್ನು ಪ್ರಜ್ಞಾವಂತರಿಗೆ ತಿಳಿಯಪಡಿಸುವ ಪ್ರಮಾಣಿಕ ಉದ್ದೇಶ ಹೊಂದಿರುತ್ತೇನೆ. ಕುಣಿತಗಳ ಜೊತೆ-ಜೊತೆಗೆ ಕಲಾವಿದರ ಬಗ್ಗೆಯೂ ಅವರ ಕಷ್ಟ-ಕಾರ್ಪಣ್ಯದ ಕುರಿತು ಅಧ್ಯಯನ ಮಾಡುವುದು ನನ್ನ ಸಂಶೋಧನೆಯ ಉದ್ದೇಶವಾಗಿದೆ. ಜನಪದ ಕುಣಿತಗಳನ್ನು ಪೌರಾಣಿಕ, ಧಾರ್ಮಿಕ, ಮತ್ತು ಸಾಂಸ್ಕೃತಿಕ ದೃಷ್ಟಿಕೋನದಿಂದ ನೋಡುವ ಆ ಮೂಲಕ ನೆಲ ಮೂಲ ಸಂಸ್ಕೃತಿಯ ರಾಯಭಾರಿಯಂತಿರುವ ಜನಪದ ಕುಣಿತಗಳ ಉಳಿಸುವುದು-ಬೆಳೆಸುವುದು ನನ್ನ ಸಂಶೋಧನೆಯ ಉದ್ದೇಶವಾಗಿದೆ.

## 2. ಉತ್ತರ ಕರ್ನಾಟಕದ ಜನಪದ ಕುಣಿತಗಳ ಪರಿಚಯ :

ಉತ್ತರ ಕರ್ನಾಟಕ ಕರ್ನಾಟಕದ ಒಂದು ಪ್ರಮುಖ ಭಾಗ. ಹಲವಾರು ಭಾಷೆಗಳನ್ನಾಡುವ ಜನರು ಇಲ್ಲಿ ನೆಲೆಸಿದ್ದಾರೆ. ಹಿಂದಿ, ಉರ್ದು, ತೆಲಗು, ಮರಾಠಿ ಭಾಷೆಗಳ ಪ್ರಭಾವ ಮತ್ತು ಹಲವು ಸಂಸ್ಕೃತಿಗಳ ಸಂಗಮವುವಾಗಿದೆ. ಶರಣರ ಬೀಡಾದ ಈ ಪ್ರದೇಶ ಜನಪದ ಕಲೆ ಮತ್ತು ಸಂಸ್ಕೃತಿಗಳ ಗಣಿಯಾಗಿದೆ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ವೈಜ್ಞಾನಿಕವಾಗಿ ಹಿಂದುಳಿದರು ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ. ಜನಪದ ಕುಣಿತಗಳು ಇಲ್ಲಿ ಹೇರಳವಾಗಿವೆ. ಪ್ರತಿ ಜಾತ್ರೆ–ಉತ್ಸವಗಳಲ್ಲಿ ಜನಪದ ಕುಣಿತಗಳ ಪ್ರದರ್ಶನ ಕಲೆಗಳದ್ದೇ ಅಬ್ಬರ ಕಂಡು ಬರುತ್ತದೆ.

ಜನಪದ ಕುಣಿತಗಳು ತನ್ನ ಮೂಲ ಸಂಸ್ಕೃತಿಯನ್ನು ಯಥಾವತ್ತಾಗಿ ಉಳಿಸಿಕೊಂಡು ಬಂದಿವೆ. ಕುಣಿತಗಳು ಸಮಾಜದ ಕೆಳವರ್ಗದಲ್ಲಿ ಜನ್ಮ ತಳೆದು ಅಲ್ಲಿಯೇ ನಶಿಸುತ್ತಿರುವುದಕ್ಕೆ ಇದಕ್ಕೆ ನಮ್ಮ ಸಮಾಜಿಕ ವ್ಯವಸ್ಥೆಯೇ ಕಾರಣವಾಗಿದೆ. ಶಿಕ್ಷಣ ನಮ್ಮನ್ನು ನಾಗರೀಕತೆಯನ್ನು ಕಲಿಸುತ್ತದೆ. ಸುಶಿಕ್ಷಿತರಾದಂತೆ ಕಲೆ–ಸಂಸ್ಕೃತಿಗಳು ಕೆಲಸಕ್ಕೆ ಬಾರದವು ಎಂಬ ಮನೋಧೋರಣೆ ಉಂಟಾಗಿದೆ. ಹಾಗೆಂದು ಶಿಕ್ಷಣ–ವಿಜ್ಞಾನ ಬೇಡವೆಂದಲ್ಲ. ನಾವು ಎಷ್ಟೋ ಮುಂದುವರಿದರೂ ನಮ್ಮ ಸಂಸ್ಕೃತಿಯ ಕುರುಹುಗಳನ್ನು, ಬೇರುಗಳನ್ನು ಎಂದು ಮರೆಯಬಾರದು. ಅವುಗಳನ್ನು ಗೌರವಿಸಬೇಕು. ಜನಪದ ಕುಣಿತಗಳು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಅವುಗಳ ಮಹತ್ವವೇನು, ಜನಪದ ಕುಣಿತಗಳು ಆಧುನಿಕ ನೃತ್ಯಗಳಿಗೆ ಎಷ್ಟು ಪೂರಕ ಎಂಬುದನ್ನು ಕುರಿತು ವಿವೇಚಿಸಬೇಕಾಗಿದೆ.

ಜಗತ್ತಿನ ಪ್ರತಿ ದೇಶದಲ್ಲೂ, ಪ್ರತಿ ಭಾಷೆಯಲ್ಲಿ ಜನಪದ ಎಂಬುದು ಇದ್ದೇ ಇರುತ್ತದೆ. ಪ್ರತಿ ಸಂಸ್ಕೃತಿಯಲ್ಲೂ, ಕುಣಿತ–ಸಂಗೀತ–ಹಾಡುಗಳು ಇರಲೇಬೇಕು. ಭಾರತದ ಪ್ರತಿ ಪ್ರಾದೇಶಿಕ ಭಾಷೆಯಲ್ಲಿ ತನ್ನದೇ ಆದ ಜಾನಪದ ಸಾಹಿತ್ಯ ಮತ್ತು ಕಲೆಗಳನ್ನು ಹೊಂದಿವೆ. ಕೆಲವೊಂದು ರಾಜ್ಯದ ಜನಪದ ಕುಣಿತಗಳು ಬಹಳ ಪ್ರಸಿದ್ಧಿಯಾಗಿ ಜನಜನೀತವಾಗಿವೆ. ಉದಾ: ಪಂಜಾಬ ರಾಜ್ಯದ 'ಭಾಂಗಡ' ನೃತ್ಯ

ಇಂದೂ ಭಾರತಾದ್ಯಂತ ಪ್ರಸಿದ್ಧವಾದ ಜನಪದ ಕುಣಿತವಾಗಿದೆ. ಇದನ್ನು ಈ ಮಟ್ಟಿಗೆ ಪ್ರಚಾರ ಪಡಿಸುವುದರಲ್ಲಿ ಭಾರತೀಯ ಚಲನ ಚಿತ್ರರಂಗದ ಪಾತ್ರ ಹಿರಿದಾಗಿದೆ. ಹಾಗೇ ಟಿ.ವಿ. ಮಾಧ್ಯಮಗಳ ಮೂಲಕ ಜನಪದ ಕುಣಿತಗಳು ಜನ ಮೆಚ್ಚುಗೆಯಾಗಿ ಉಳಿಯಲು ಸಾಧ್ಯವಾಗಿದೆ. ಗುಜರಾತನ ಗರ್ಭಾ, ದಾಂಡಿಯಾ, ರಾಜಸ್ಥಾನದ ಲಂಬಾಣಿ ನೃತ್ಯ, ಕೇರಳದ ಓಣಂ, ರಾಜಸ್ಥಾನದ ಅಗ್ನಿ ಕುಣಿತ, ಹೀಗೆ ಭಾರತದ ಪ್ರತಿ ರಾಜ್ಯಗಳಲ್ಲಿ ಜನಪದ ಕುಣಿತಗಳಿವೆ ಉತ್ತರ ಭಾರತದ ಕುಣಿತಗಳಿಗೆ ಹೋಲಿಸಿ ನೋಡಿದರೆ ದಕ್ಷಿಣ ಭಾರತದ ಜನಪದ ಕುಣಿತಗಳು ಅಷ್ಟು ಜನಪ್ರಿಯವಾಗಿಲ್ಲ. ಕರ್ನಾಟಕದಲ್ಲಿಯೂ ದಕ್ಷಿಣ ಕರ್ನಾಟಕದ ಕುಣಿತಗಳು ಬೆಳೆದಷ್ಟು ಉತ್ತರ ಕರ್ನಾಟಕದ ಕುಣಿತಗಳು ಜನರಿಗೆ ಪರಿಚಯವೇ ಇಲ್ಲದಾಗಿದೆ.

ಜನಪದ ಕುಣಿತಗಳನ್ನು ಕುಣಿಯುವರು ಕೆಳ ವರ್ಗದವರು, ಅಶಿಕ್ಷಿತರು, ಕೆಲಸವಿರದವರು, ಕೆಲಸಕ್ಕೆ ಬಾರದವರು, ಆಯೋಗ್ಯರು ಎಂಬ ಮನೋಧೋರಣೆಯಿದೆ. ಈ ಧೋರಣೆ ಬದಲಾಗಬೇಕು. ನಮ್ಮ ಪೂರ್ವಿಕರ ಅಮೂಲ್ಯ ಸಂಸ್ಕೃತಿಯ ಗುರುತಾಗಿರುವ ಜನಪದ ಕುಣಿತಗಳು, ಕಲೆಗಳನ್ನು, ಕಲಾವಿದರನ್ನು, ಗೌರವಿಸಬೇಕು. ಗೌರವ ದೃಷ್ಟಿಕೋನದಿಂದ ನೋಡಬೇಕು. ಕುಣಿತಗಳನ್ನು ಮಾಡುವ ಕಲಾವಿದರು ಇವುಗಳನ್ನು ತೊರೆದು ಬೇರೆ–ಬೇರೆ ಉದ್ಯೋಗಕ್ಕೆ ಅರಸಿ ಹೋಗುತ್ತಿದ್ದಾರೆ. ಇವರ ಕಲೆಗೆ ಬೆಲೆ ಸಿಗುವುದಾದರೆ, ಸಮಾಜದಲ್ಲಿ ಕುಣಿತಗಳಿಗೆ ಮಾನ್ಯತೆ, ಮರ್ಯಾದೆಗಳು ಮತ್ತೆ ಲಭಿಸುವುದಾದರೆ ಜನಪದ ಕುಣಿತಗಳು ಉಳಿದೆ ಉಳಿಯುತ್ತವೆ.

ಉತ್ತರ ಕರ್ನಾಟಕ ಸಂಮಿಶ್ರ ಸಂಸ್ಕೃತಿಯ ನೆಲೆಬೀಡಾಗಿದೆ. ಪ್ರತಿ ಜಿಲ್ಲೆಯು ತನ್ನದೇ ಆದ ಭೌಗೋಳಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ವೈಶಿಷ್ಟ್ಯತೆ ಹೊಂದಿದೆ. ಭಾಷೆ, ಪದ್ಧತಿ, ಸಂಪ್ರದಾಯ, ನಂಬಿಕೆ, ಆಚರಣಗೆಗಳು ಜಿಲ್ಲೆಯಿಂದ ಜಿಲ್ಲೆಗೆ ವಿಭಿನ್ನವಾಗಿವೆ. ಆದರೂ ಉತ್ತರ ಕರ್ನಾಟಕ ಪುಟ್ಟ ರಾಜ್ಯದಂತೆ ಕಂಗೊಳಿಸುತ್ತದೆ.

## 3. ಜನಪದ ಕುಣಿತಗಳ ಪ್ರಕಾರಗಳು

ಜನಪದ ಕುಣಿತಗಳ ಜನಪದರು ನಮಗೆ ಕೊಟ್ಟ ಬಹು ದೊಡ್ಡ ಸಾಂಸ್ಕೃತಿಕ ಸಂಪತ್ತು. ದೈವಾರಾಧನೆಗಾಗಿ ಹುಟ್ಟಿ ಮುಂದೆ ಮನರಂಜನೆಯ ಸಾಧನಗಳಾದವು. ಕಲಾ ಪ್ರತಿಬಿಂಬಗಳಂತಿದ್ದ ಕುಣಿತಗಳು ಆಧುನಿಕ ನೃತ್ಯಗಳಿಗೆ ಮಾರ್ಗದರ್ಶಕಗಳಾಗಿವು. ಮಾನವ ದಿನವಿಡಿ ದುಡಿದು ಶ್ರಮವಾದಾಗಲೂ ಹಾಡಿದ. ದೈನಂದಿನ ದುಡಿಮೆಯಲ್ಲಿ ಕೆಲಸ ಕಾರ್ಯಗಳಲ್ಲಿ ರಾಗ ಭಾವಗಳನ್ನು ಅಭಿವ್ಯಕ್ತ ಪಡಿಸಿದ, ಹಾಡು-ಹಾಡಿನೊಂದಿಗೆ ಕುಣಿತ ಕುಣಿತದೊಂದಿಗೆ ಅಭಿನಯ ಹೀಗೆ ರಾಗ ತಾಳಗಳನ್ನು ಮೇಳವಿಸಲು ಪ್ರಯತ್ನ ಮಾಡಿದ. ಈ ಕಲೆಗಳಿಗೆ ಮತ್ತಷ್ಟು ಮೆರಗು ಬರುವಂತೆ ವಿವಿಧ ವಾದ್ಯಗಳನ್ನು ಸೃಷ್ಟಿಸಿದೆ.

ಹೈದ್ರಾಬಾದ ಕರ್ನಾಟಕದ ಜನಪದ ಕುಣಿತಗಳನ್ನು ಹಲವಾರು ಪ್ರಕಾರಗಳಲ್ಲಿ ವರ್ಗಿಕರಿಸಬಹುದು.

- **ಪ್ರಾಣಿ ಪ್ರಧಾನ ಕುಣಿತಗಳು**

1. ಕೋತಿ ಕುಣಿತ
2. ಕರಡಿ ಕುಣಿತ
3. ಕೀಲು ಕುದರೆ ಕುಣಿತ
4. ಹುಲಿ ಕುಣಿತ

- **ವಾದ್ಯ ಪ್ರಧಾನ ಕುಣಿತ**

1. ಹಲಗೆ ಕುಣಿತ
2. ಡೊಳ್ಳು ಕುಣಿತ
3. ಲೇಜಿಂ ಕುಣಿತ

- **ಆರಾಧನಾ ಕುಣಿತ**

1. ಭೂತೇರ ಕುಣಿತ
2. ಗೊರವರ ಕುಣಿತ
3. ಜೊಗತಿ ಕುಣಿತ
4. ಪುರವಂತರ ಕುಣಿತ
5. ಚೌಡಮ್ಮನ ಕುಣಿತ
6. ನಂದಿಕೊಲು ಕುಣಿತ
7. ಹೆಜ್ಜೆ ಕುಣಿತ
8. ಅಲಾವಿ ಕುಣಿತ
9. ರಿವಾಯಲ್ ಕುಣಿತ

- **ನೃತ್ಯ ಪ್ರಧಾನ ಕುಣತ**

1. ಕೋಲಾಟ
2. ಲಂಬಾಣಿ ಕುಣಿತಿ

* **ಮನರಂಜನಾ ಪ್ರಧಾನ ಕುಣಿತ**

1. ಹೋಳಿ ಕುಣಿತ
2. ರಾಜಗೊಂಡರ ಕುಣಿತ
3. ದುಮ್ಮಾಲಿ ಮೇಳ ಕುಣಿತ

ಅಧ್ಯಯನದ ದೃಷ್ಟಿಯಿಂದ ಈ ರೀತಿಯ ವರ್ಗಿಕರಣ ಮಾಡಲಾಯಿತು. ಪ್ರತಿ ಕುಣಿತಗಳು ತನ್ನದೇ ಆದ ಭೌಗೋಳಿಕ, ಪಾರಂಪರಿಕ, ಪೌರಾಣಿಕ ಹಾಗೂ ಚಾರಿತ್ರಿಕ ಮಹತ್ವವನ್ನು ಹೊಂದಿದೆ, ಜನಪದ ಕುಣಿತಗಳನ್ನು ವರ್ಗಿಕರಿಸುವಾಗ ನೃತ್ಯ, ಹಾಡು, ವಾದ್ಯಗಳನ್ನು ಪ್ರಮುಖವಾಗಿ ಪರಿಗಣಿಸಲಾಗಿದೆ. ಏಕೆಂದರೆ ಹಾಡು-ವಾದ್ಯ ಅಭಿನಯಗಳ ಸಂಗಮವೇ ಜನಪದ ಕುಣಿತಗಳಾಗಿವೆ, ದೈವಿ ಪವಾಡ, ಕಾರ್ಯಗಳ ಅಭಿನಂದದಿಂದ ಕುಣಿತಗಳು ಕ್ಷಣ-ಕ್ಷಣಕ್ಕೂ ರೋಮಾಂಚನಕಾರಿಗಳಾಗಿವೆ.

ಜನಪದ ಕುಣಿತಗಳನ್ನು ನೋಡುವಾಗ ಎಂತಹವರೇ ಆಗಲಿ ಅವರ ಅರಿವಿಲ್ಲದೆ ಅವರ ಕಾಲುಗಳು ನಿಂತಲ್ಲೇ ಹೆಜ್ಜೆ ಹಾಕಲಾರಂಭಿಸುತ್ತವೆ. ಒಂದು ರೋಮಾಂಚನಕಾರಿಯಾದ, ವಿಸ್ಮಯಕಾರಿಯಾದ ಲೋಕವೇ ತೆರೆದುಕೊಳ್ಳುತ್ತದೆ. ಶರೀರದ ದಣಿವನ್ನು ನಿವಾರಿಸಿ, ಆನಂದವನ್ನು ನಮ್ಮ ಜನಪದ ಕುಣಿತಗಳು ನೀಡುತ್ತವೆ. ನೆಲಮೂಲ ಸಂಸ್ಕೃತಿಯ ಬೇರುಗಳಾದ ಪ್ರಾಚೀನ ಸಂಸ್ಕೃತಿಯ ಕುರುಹುಗಳಾದ ಜನಪದ ಕುಣಿತಗಳು ಇಂದು ಕಣ್ಮೆರೆಯಾಗುತ್ತಿವೆ. ಅವಜ್ಞೆಗೆ ಒಳಗಾಗುತ್ತಿವೆ. ಪ್ರಜ್ಞಾವಂತರಾದ ನಾವು ಇಂದು ನಮ್ಮ ಕಲೆ-ಸಂಸ್ಕೃತಿಯ ಹಿರಿಮೆಯನ್ನು ಗರಿಮೆಯನ್ನು ನಮ್ಮ ಕಲೆ-ಸಂಸ್ಕೃತಿಯ ಹಿರಿಮೆಯನ್ನು ಗರಿಮೆಯನ್ನು ತಿಳಿದುಕೊಂಡು ಇತರರಿಗೆ ತಿಳಿಸಬೇಕಾಗಿದೆ.

## 4. ಜನಪದ ಕುಣಿತಗಳ ಪ್ರಾಮುಖ್ಯತೆ

ಜನಪದ ನಿಂತ ನೀರಲ್ಲ. ಸಂಚಲನ, ಪರಿವರ್ತನೆ ಸ್ವೀಕಾರ ಕೊಳ್ಳುಕೊಡೆ ಅದರ ಮೂಲಮಂತ್ರ, ಮಾನವನ ಸೃಷ್ಠಿಯೊಂದಿಗೆ ಹುಟ್ಟಿ ಅವನ ವಿಕಾಸದ ಜೊತೆ–ಜೊತೆಗೆ ವಿಕಾಸ ಹೊಂದಿರುವುದು. ಸಂಸ್ಕೃತಿಯ ವಾಹಕವೂ ಹೌದು. ಸಂಸ್ಕೃತಿ ಪರಂಪರೆಯ ಗಣಿಯೂ ಹೌದು. ಜನಪದ ಕಲೆಗಳು ಕುಣಿತಗಳು ತನ್ನದೇ ಆದ ವಿಶೇಷತೆಯನ್ನು ಹೊಂದಿವೆ. ಜನಪದ ಕುಣಿತಗಳು ಆನಂದದ ಜೊತೆಗೆ ಮನರಂಜನೆ, ದೈಹಿಕ ದಣಿವನ್ನು ನಿವಾರಿಸುತ್ತವೆ.

1. ಧಾರ್ಮಿಕತೆಯ ಹಿನ್ನೆಲೆಯಲ್ಲಿ ಹುಟ್ಟಿರುವ ಜನಪದ ಕುಣಿತಗಳ ಮೂಲಕ ನಂಬಿದ ದೇವರುಗಳಿಗೆ ಭಕ್ತಿಯ ಸಮರ್ಪಣೆ.
2. ದೈಹಿಕ ದಣಿವನ್ನು ಆಸರಿಕೆ–ಬೇಸರಿಕೆಗಳನ್ನು ನಿವಾರಿಸುತ್ತವೆ.
3. ಮಾನಸಿಕ ನೆಮ್ಮದಿ ಶಾಂತಿ ಮತ್ತು ಮನರಂಜನೆಯನ್ನು ನೀಡುತ್ತದೆ.
4. ಜನಪದ ಕುಣಿತಗಳಿಂದ ಜಾತ್ರೆ–ಉತ್ಸವ, ಉರುಸ್ ಹಬ್ಬ, ಹರಿದಿನಗಳ ಮಹತ್ವ ಮತ್ತಷ್ಟು ಹೆಚ್ಚುತ್ತದೆ.ದೇವರೋತ್ಸವಗಳಿಗೆ ವಿಶೇಷ ಮೆರಗನ್ನು ಕೊಡುತ್ತವೆ.
5. ಜನಪದ ಕುಣಿತಗಳು ಬೇರೆ–ಬೇರೆ ಭಾಷೆ, ಸಂಸ್ಕೃತಿ, ಪ್ರದೇಶಗಳ, ಜನರನ್ನು ಒಂದೆಡೆ ತಂದು ಸೇರಿಸುತ್ತವೆ. ಭಾವೈಕ್ಯತೆಯನ್ನು ಮೂಡಿಸುತ್ತವೆ.
6. ರಾಷ್ಟ್ರೀಯ ಭಾವೈಕ್ಯತೆಯನ್ನು ಜಾಗೃತಗೊಳಿಸುತ್ತವೆ.
7. ಜನಪದ ಕುಣಿತಗಳು ಕಲಾವಿದರಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಸಹಕಾರಿಯಾಗಿವೆ.
8. ಜನಪದ ಕುಣಿತಗಳು ಕಲಾವಿದರಿಗೆ ಹಾಗೂ ಅವರ ಕುಟುಂಬಗಳ ಜೀವನ ನಿರ್ವಹಣೆಗೆ ಸಹಕಾರಿಯಾಗಿವೆ.

9. ಜನಪದ ಕುಣಿತಗಳು ನಮ್ಮ ಸಂಸ್ಕೃತಿಯ ಕುರುಹಗಳಾಗಿದ್ದು ತಮ್ಮ ಮೂಲಕ ಕಲೆ–ಸಾಹಿತ್ಯ–ಸಂಸ್ಕೃತಿಯನ್ನು ತಲೆಮಾರಿನಿಂದ ತಲೆಮಾರಿಗೆ ಪ್ರಸರಣಗೊಳಿಸುತ್ತವೆ.

10. ಯುವ ಪೀಳಿಗೆಗೆ, ನಮ್ಮ ಮುಂದಿನ ಜನಾಂಗಕ್ಕೆ ಸಾಂಸ್ಕೃತಿಕ ಪಾಠವನ್ನು ತಿಳಿಸಿಕೊಡುತ್ತದೆ.

ಹೀಗೆ ತಮ್ಮದೇ ಆದ ವೈಶಿಷ್ಟತೆಯನ್ನು ಹೊಂದಿದೆ. ಇಂದು ಆಧುನೀಕತೆಯ ಪಾಶ್ಯಾತ್ಯತೆಯ ಹೆಸರಲ್ಲಿ ಸಂಸ್ಕೃತಿ ಪರಂಪರೆಯಿಂದ ಸಮ್ಮಿಳಿತವಾಗಿರುವ ಜನಪದ ಕುಣಿತಗಳ ಪ್ರದರ್ಶನಗಳು ತೀರಾ ಕಡಿಮೆಯಾಗುತ್ತಿವೆ. ಟಿ.ವಿ. ಮೊಬೈಲ್ ಹಾವಳಿಯಿಂದ ಪ್ರಾಚೀನ ಪರಂಪರೆಯ ಪ್ರತಿಬಿಂಬಕಗಳಾಗಿರುವ ಜನಪದ ಕುಣಿತಗಳ ಬಗ್ಗೆ ಆಸಕ್ತ ಇಲ್ಲದಾಗಿದೆ. ಪ್ರೋತ್ಸಾಹದ ಕೊರತೆಯಿಂದಾಗಿ ಕುಣಿತಗಳನ್ನು ಮಾಡುವವರ ಸಂಖ್ಯೆಯೂ ಕಡಿಮೆಯಾಗಿದೆ. ಈ ಬಗ್ಗೆ ಸರಕಾರ ಇತರ ಸಂಘ ಸಂಸ್ಥೆಗಳು, ಜಾನಪದ ಅಕಾಡೆಮಿ, ಜಾನಪದ ವಿಶ್ವವಿದ್ಯಾಲಯಗಳು ಚಿಂತನೆ ಮಾಡಿ ಈ ಕಲೆಗಳನ್ನು ಮತ್ತು ಕಲಾವಿದರನ್ನು ಉಳಿಸಿಕೊಳ್ಳಲು ಒಂದು ಮಾರ್ಗಸೂಚಿಯನ್ನು ಮತ್ತು ಕ್ರಿಯಾ ಯೋಜನೆಗಳನ್ನು ರೂಪಿಸಬೇಕು. ಜನರಲ್ಲಿ ಕುಣಿತಗಳ ಬಗ್ಗೆ ಕುತೂಹಲ–ಆಸಕ್ತಿಯನ್ನು ಕೆರಳಿಸುವಂತ ಕಾರ್ಯಕ್ರಮಗಳನ್ನು ರೂಪಿಸಬೇಕು. ಈ ಮೂಲಕ ಅಮೂಲ್ಯ ಸಂಸ್ಕೃತಿಯ ಗಣಿಯಾಗಿರು ಜನಪದ ಕುಣಿತಗಳನ್ನು ಉಳಿಸಲು–ಬೆಳೆಸಲು ಸಾಧ್ಯ.

## 5. ಉತ್ತರ ಕರ್ನಾಟಕದ ಜನಪದ ಕುಣಿತಗಳು

### 1. ಬಯಲಾಟ ಹಾಡುಗಳ ಕುಣಿತ

ಹಳ್ಳಿಯಲ್ಲಿ ಆಟದ ಮಾಸ್ತರ ಎನ್ನುವ ಹೆಸರು ಬಯಲಾಟ ಕಲಿಸುವ ವ್ಯಕ್ತಿಗಿದೆ. ಈ ವ್ಯಕ್ತಿ ಬಯಲಾಟ ಕಲಿಸುವುದನ್ನೇ ಮುಖ್ಯ ವೃತ್ತಿಯಾಗಿರಿಸಿಕೊಂಡು ಹಳ್ಳಿಯಿಂದ ಹಳ್ಳಿಗೆ ಅಲೆದು, ಅಲ್ಲಲ್ಲಿ ಆಟವನ್ನು ಕಲಿಸಿ ಅವರಿಂದ ಆಟವಾಡಿಸುತ್ತಾನೆ. ಆಟದ ಸೂತ್ರಧಾರನಾಗಿ ಪ್ರತಿಯೊಂದು ಹಾಡನ್ನು ಹಿಮ್ಮೇಳದೊಂದಿಗೆ ಹಾಡುತ್ತಾನೆ. ಮುಖ್ಯವಾದ ದೃಶ್ಯಬಂದಾಗ ಅಲ್ಲಲ್ಲಿ ತಾನೇ ವಿವಿಧ ಧ್ವನಿಗಳಲ್ಲಿ ಮಾತನಾಡುತ್ತಾನೆ. ಹಾಡು ಹೇಳುತ್ತಾನೆ. ತಕ್ಕ ಸಂಗೀತದ ಬೆಳಕು ಚೆಲ್ಲುತ್ತಾನೆ. ಹಾಡಿನೊಂದಿಗೆ ಹೆಜ್ಜೆ ಕುಣಿತವಿರುತ್ತದೆ.

## 2. ಬುರ್ ಬುರ್ ಪೋಚಮ್ಮ ಕುಣಿತ:

ಡೋಲಕದ ಮೇಲೆ ಬುರ್ ಎನ್ನುವ ರೀತಿ ಬಾರಿಸುತ್ತ ಹಾಡುತ್ತ ಮನೆಯಿಂದ ಮನೆಗೆ ಅಲೆದು ಭಿಕ್ಷೆ ಬೇಡುವ ವೃತ್ತಿ ಗಾಯಕರೇ ಬುರ-ಬುರ ಪೋಚಮ್ಮ ಕಾಲಿಗೆ ಗೆಜ್ಜೆ, ಮುಖಕ್ಕೆ ಬಿಳಿ ಬಣ್ಣ ಇಲ್ಲವೆ ಒಣಮುಖದೊಂದಿಗೆ ಹಾಡನ್ನು ಹಾಡುತ್ತಾರೆ. ಕಾಲಿಗೆ ಕಟ್ಟಿಕೊಂಡು ಗೆಜ್ಜೆ ಮತ್ತು ಡೋಲಕ ಸಂಗೀತದ ಬೆಳಕು ಚೆಲ್ಲುತ್ತದೆ. ಹಾಡಿನೊಂದಿಗೆ ಸಂಗೀತ ಮುಂದುವರೆಯುತ್ತದೆ. ಈ ಮೇಳದಲ್ಲಿ ಮುಖ್ಯವಾಗಿ ಇಬ್ಬರಿರುತ್ತಾರೆ.

ಬಾರಮ್ಮ ಬಾ ತಾಯಿ

ಕಲ್ಲಮ್ಮ ಮಲ್ಲಮ್ಮ

ಬೇಗ ಬಾರಮ್ಮ

ಹಿಟ್ಟು ತಾರಮ್ಮ

## 3. ಡೊಳ್ಳು ಕುಣಿತ

ಡೊಳ್ಳು ಕುಣಿತ ಒಂದು ಗಂಡು ಕಲೆಯೆನಿಸಿದೆ. ಮಲ್ಲಣ್ಣನ ಭಕ್ತರು ದೊಡ್ಡ ಆಕಾರದ ಚರ್ಮ ವಾದ್ಯವೊಂದನ್ನು ಬಡಿಯುತ್ತಾ, ಪದಹಾಡುತ್ತಾ ಜಾತ್ರೆ ಉತ್ಸವ ಸಂದರ್ಭಗಳಲ್ಲಿ ಈ ಕಲೆ ಪ್ರದರ್ಶನ ಮಾಡುವರು. ಹಾಡುವರು ಹೆಚ್ಚಾಗಿ ಡೊಳ್ಳು ವಾದ್ಯ ನುಡಿಸುವವರು ಮತ್ತು ಹಾಡುವವರು ಕುರುಬರಾಗಿದ್ದಾರೆ.

ಹಾಡು ಹಾಡುವವನು ಒಬ್ಬನಾದರೆ, ಇನ್ನೂ ಮೂವರು ಡೊಳ್ಳು, ಜಾಗಟೆ, ತಾಳಬಾರಿಸುವವರು, ಮಿಕ್ಕವರು, ಹಿಮ್ಮೇಳದಲ್ಲಿರುತ್ತಾರೆ. ಹಾಡುವಾಗ ಡೊಳ್ಳಿನವರು ಬಹುಮೆಲ್ಲನೆ 'ದುಪ್ಪಾಂಗ್ ದುಪ್ಪಡ್ ದುಪ್ಪಾಂಗ್' ಎಂದು ನಾದದೊಂದಿಗೆ ತಾಳವನ್ನು ಅನುಸರಿಸುತ್ತಾರೆ. ಡೊಳ್ಳಿನ ಹಾಡುಗಳಲ್ಲಿ ದೈವಸ್ತುತಿ, ಶಿವಶರಣರ ಚರಿತ್ರೆ, ರಾಮಾಯಣ, ಮಹಾಭಾರತ ಪ್ರಸಂಗಗಳು ಲಾವಣಿಗಳು, ಬಿಡಿ-ಬಿಡಿ ಹಾಡುಗಳು ಕಂಡುಬರುತ್ತವೆ.

ದೇವ ದೇವತೆ ಕುರಿತು ತಮ್ಮ ನಿಲುವನ್ನು ವ್ಯಕ್ತಪಡಿಸುವಲ್ಲಿ ಪ್ರಥಮ ಸ್ಥಾನದಲ್ಲಿ ನಿಲ್ಲುತ್ತಾರೆ. ತಮ್ಮ ಇಷ್ಟ ದೇವತೆಯ ಸ್ವರೂಪ, ಲಕ್ಷ ಣ ಕುರಿತು ಆಯಾ ದೇವರುಗಳ ಮಹತ್ವ ಮುಂತಾದ ಸನ್ನಿವೇಶಗಳ ಬಗ್ಗೆ ಸಾಮೂಹಿಕವಾಗಿ ಹಾಡಿನ ಹಿನ್ನಲೆಯೊಂದಿಗೆ ಪ್ರಸಾರ ಮಾಡುವಲ್ಲಿ ಡೊಳ್ಳಿನ ಕಲಾವಿದರು ಯಶಸ್ವಿಯಾದಂತೆ ತೋರುತ್ತದೆ. ಹಾಡುಗಾರ ಬೀರುದೇವನನ್ನು ತನ್ನ ಗುರುವನ್ನಾಗಿ ಮಾಡಿಕೊಂಡು ಅವರ ಬಗ್ಗೆ ಕೊಂಡಾಡುತ್ತಿದ್ದಾನೆ. ನಿನ್ನ ಮಹಿಮೆ ಅಪಾರ, ನೂರಾರು ಕೋಟಿ ನಿನ್ನ ರೂಪ ನಿನ್ನನ್ನು ಎಷ್ಟು ಕೊಂಡಾಡಿದರು ಕಡಿಮೆ ಎನ್ನುವ ಬಗ್ಗೆ ಅಭಿಪ್ರಾಯವನ್ನು ತಾಳಿದ್ದಾನೆ.

## 4. ಚಕ್ರಿ ಭಜನೆ ಕುಣಿತ

ಆದಿ ಕಾಲದಿಂದಲೂ ದೇವರನ್ನು ಒಲಿಸಲು, ಆರಾಧಿಸಲು, ಮಠ–ಮಂದಿರಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ವಿಶೇಷವಾಗಿ ಭಕ್ತಿ ಸಂಗೀತ, ನೃತ್ಯ, ಭಜನೆ, ಕೀರ್ತನೆ, ನೃತ್ಯ–ನಾಟಕ ರೂಪಕಗಳು ಜನಪ್ರಿಯವಾಗಿ–ದೇವರ ಸನ್ನಿಧಿಯಲ್ಲಿ ಗುಡಿ–ಗುಂಡಾರ–ದೇವಸ್ಥಾನಗಳಲ್ಲಿ ವಿಶೇಷ ಆರಾಧನೆ, ಸಂಗೀತ, ನೃತ್ಯ ಕಛೇರಿ ನಡೆಯುತ್ತಿದ್ದವು ಇದರ ಉದೇಶ ದೇವರನ್ನು ಪ್ರಾರ್ಥಿಸಿ, ಆರಾಧಿಸಿ, ದೇವರನ್ನು ಒಲಿಸಲು ವಿಶೇಷ ಭಕ್ತಿ ಪ್ರದರ್ಶನಗಳು ಸಹ ನಡೆಯುತ್ತಿದ್ದವು. ಈ ಭವ್ಯ ಪರಂಪರೆಯ ಹಿನ್ನೆಲೆಯಲ್ಲಿ ಬೀದರ ಜಿಲ್ಲೆಯಲ್ಲಿಯು ಸಹ ವಿಶೇಷವಾಗಿ ಜಾನಪದ ಶೈಲಿಯಲ್ಲಿ ಭಕ್ತಿ ಸಂಗೀತ, ನೃತ್ಯ ರೂಪಕಗಳು, ಭಜನೆ, ಕೀರ್ತನೆಗಳು ಬೆಳೆದು ಬಂದವು. ಅಧ್ಯಾತ್ಮಿಕ ಕ್ಷೇತ್ರದಲ್ಲಿ ಭಕ್ತಿ ಭಾವದಿಂದ ನೃತ್ಯರೂಪಕದಿಂದ ಸಂಗೀತ ನೃತ್ಯ ಕಾರ್ಯಕ್ರಮಗಳು ಜರುಗುತ್ತಿದ್ದವು. ಈ ಹಿನ್ನೆಲೆಯಲ್ಲಿ ಶರಣರ ಕಲ್ಯಾಣ ನಾಡಿನ ಬೀದರ ಜಿಲ್ಲೆಯಲ್ಲಿ ಔರಾದ ತಾಲೂಕಿನ ಸಣ್ಣ ಗ್ರಾಮ 'ಬೆಳಕುಣಿ' ಚೌದ್ರಿಯು ತನ್ನದೆಯಾದ ಸಾಂಸ್ಕೃತಿಕ ಭವ್ಯ ಪರಂಪರೆ ಹೊಂದಿದೆ. ಈ ಗ್ರಾಮದಲ್ಲಿ ಬೆಳೆದು ಬಂದ ಜಾನಪದ ಶೈಲಿಯ ಚಕ್ರಿ ಭಜನೆ ಸಂಗೀತ ನೃತ್ಯವು, ಈ ಭಾಗದಲ್ಲಿ ವಿಶೇಷ ಸ್ಥಾನ ಪಡೆದುಕೊಂಡಿದೆ.

ಕೃಷಿ ಪ್ರಧಾನವಾದ, ಈ ಬೀದರ ಜಿಲ್ಲೆಯಲ್ಲಿ ಜಾನಪದ ಸಾಹಿತ್ಯ, ಸಂಗೀತ, ನೃತ್ಯ–ರೂಪಕಗಳು ವಿಶೇಷವಾದ ಸ್ಥಾನ ಪಡೆದಿವೆ. ಈ ಬೆಳಕುಣಿ ಚೌದ್ರಿ ಗ್ರಾಮವು ಕಳೆದ 200 ವರ್ಷಗಳಿಂದ, ಈ ಭಾಗದಲ್ಲಿ "ಚಕ್ರಿ ಭಜನೆ" ಸಾಂಸ್ಕೃತಿಕ–ಭವ್ಯ ಸಂಗೀತ–ನೃತ್ಯ–ಜಾನಪದ ಶೈಲಿಯಲ್ಲಿ ನಡೆಯುತ್ತಿರುವುದು ಒಂದು ಐತಿಹಾಸಿಕ ಹಿನ್ನೆಲೆ ಇದೆ. ಇಂದಿಗೂ, ಈ ಗ್ರಾಮದ ನುರಿತು, ಅನುಭವಿ, ಜಾನಪದ ಕಲಾವಿದರು– "ಚಕ್ರಿಭಜನೆ" ಪ್ರದರ್ಶನ ಮಾಡುತ್ತ ಬಂದಿದ್ದಾರೆ. ಭಾವುಕರಾಗಿ–ಭಕ್ತಿಯಲ್ಲಿ ಮಗ್ನರಾಗಿ–ಗೆಜ್ಜೆ ಕಟ್ಟಿ ಹೆಜ್ಜೆ ಹಾಕಿ ನೃತ್ಯ ರೂಪಕದಿಂದ ಸಂಗೀತ ವಾದ್ಯಗಳೊಂದಿಗೆ–ಭಜನೆ ಮಾಡುವ ಈ ಶೈಲಿಯು ಅತ್ಯಂತ ಪ್ರಭಾವಶಾಲಿ ಮತ್ತು ಅಧ್ಯಾತ್ಮಿಕ – ಸಾಂಸ್ಕೃತಿಕ ಮಹತ್ವ ಹೊಂದಿದೆ.

- ಇಲ್ಲಿಯ ಕಲೆ, ಭಕ್ತಿ ಸಂಗೀತ, ನೃತ್ಯ ಸಾಹಿತ್ಯವು ನಿಜವಾಗಿಯೂ ದೈವಿ ಶಕ್ತಿಯುಳ್ಳ ಸಂಪದ್ಭರಿತವಾಗಿದೆ.
- ಈ ಗ್ರಾಮದ ಕಲಾವಿದರ ತಂಡವು "ಚಕ್ರಿ ಭಜನೆ" ಯ ಪ್ರದರ್ಶನಗಳನ್ನು–ವೀರಭದ್ರೇಶ್ವರ ಹಾಗೂ ಇತರ ದೇವಸ್ಥಾನಗಳಲ್ಲಿ ಪ್ರದರ್ಶನ ನೀಡುತ್ತಾ, ಜನಮನ ಸೆಳೆದಿರುತ್ತಾರೆ.
- ಈ ಜನಪದ ಕಲಾವಿದರು ಕೃಷಿಯೇ ಜೀವನಾಧಾರವಾಗಿದ್ದು, ಮಳೆಯಾದಾರಿತ ಬೆಳೆಗಳ ಮೇಲೆಯೇ ಅವಲಂಬನೆಯಾಗಿದೆ.

## 5. ಕೋಲಾಟ ಕುಣಿತ

ಕರ್ನಾಟಕ ಅಷ್ಟೇ ಏಕೆ, ಇಡೀ ಭರತಖಂಡದ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಲಿತವಿರುವ ಒಂದು ಪ್ರಮುಖ ಕಲೆ ಕೋಲಾಟ, ಇಲ್ಲಿ ಕೋಲುಗಳೇ ಪ್ರಧಾನವಾದುದರಿಂದ 'ಕೋಲಾಟ' ಎಂಬ ಹೆಸರು ಅನ್ವರ್ಥವಾಗಿದೆ. ಹಾಡು ಮತ್ತು ಕುಣಿತವೂ ಬೆರೆತಿರುವುದರಿಂದ ಕಲೆಗೆ ಮತ್ತಷ್ಟು ಶೋಭೆ ಬಂದಿದೆ. ಕೋಲಾಟ ಒಂದು ಗಂಡು ಕಲೆ, (ಹೆಣ್ಣು ಮಕ್ಕಳು ಕೋಲಾಡುವುದು ಅಪರೂಪ) ಬಹುತೇಕ ಯುವಕರೇ ಸೇಇ ಪ್ರದರ್ಶಿಸುವ ಈ ಆಟದಲ್ಲಿ ದೇಹದ ಪತ್ರಿಯೊಂದು ಅಂಗವೂ ನಿರ್ದಿಷ್ಟಗತಿಗತ್ತುಗಳಲ್ಲಿ ಚಲಿಸುವುದರಿಂದ ಒಳ್ಳೆಯ ವ್ಯಾಯಾಮವೂ ದೊರೆಯುತ್ತದೆ.

ಗೋಕುಲದಲ್ಲಿ ಶ್ರೀಕೃಷ್ಣನ ಜನನವಾದಾಗ ಯಾದವರು ಕೋಲಾಟದ ಮೂಲಕ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದುದು ಮತ್ತು ಗೋಪಿಕಾ ಸ್ತ್ರೀಯರು ಶ್ರೀಕೃಷ್ಣನೊಂದಿಗೆ ಇವೆಲ್ಲ ಬಣ್ಣದ ಕೋಲುಗಳೊಂದಿಗೆ ಆಟವಾಡಿದುದು ಇವೆಲ್ಲ ಕೋಲಾಟ ಪ್ರಾಚೀನವಾದ ಕಲೆ ಎಂಬುದನ್ನು ಶೃತಪಡಿಸುತ್ತವೆ.

ನಮ್ಮ ಜನಪದ ಜೀವನದಲ್ಲಿ ಒಂದಾಗಿ ಬೆಳೆದು ಬಂದಿರುವ ಕೋಲಾಟದ ಪ್ರದರ್ಶನ ಸಂದರ್ಭಗಳು ಹಲವಾರು, ಹಬ್ಬ ಹುಣ್ಣಿಮೆ, ಜಾತ್ರೆ, ಉತ್ಸವ, ಮದುವೆ, ಮುಂಜಿ, ಸುಗ್ಗಿ ಸಮೃದ್ಧಿ ಹೀಗೆ ಅವರ ಎಲ್ಲ ಸಂತಸದ ಸಮಯದಲ್ಲಿ ಸಡಗರದ ಮನರಂಜನೆಯಾಗಿ ಕೋಲಾಟದ ಪ್ರದರ್ಶನ ನಡೆಯುತ್ತದೆ.

ಕೋಲಾಟಕ್ಕೆ ಸಾಧನಗಳು ಕೋಲು ಮತ್ತು ಗೆಜ್ಜೆ ಗಟ್ಟಿ ಬಿದಿರು, ಕಾರೆ, ತೇಗದಂತಹ ಯಾವುದಾದರೂ ಮರದಿಂದ ಮಾಡಿದ ಕೋಲುಗಳ ಉದ್ದ ಮುಕ್ಕಾಲು ಅಡಿಯಿಂದ ಒಂದೂವರೆ ಅಡಿ ಇರುತ್ತದೆ. ಹಿಡಿಯ ಕಡೆ ಸ್ವಲ್ಪ ದಪ್ಪವಾಗಿರುತ್ತವೆ. ಆಕರ್ಷಣೆಗಾಗಿ ಕೋಲುಗಳಿಗೆ ಬಣ್ಣವನ್ನು ಹಾಕಿರುವುದುಂಟು ಕೆಲವರು ಕೋಲಿನ ಹಿಡಿಯ ಕಡೆಯಲ್ಲಿ ಕಿರುಗೆಜ್ಜೆಗಳನ್ನು ಕಟ್ಟಿರುತ್ತಾರೆ.

ಸಾಮಾನ್ಯವಾಗಿ ಕೋಲಾಟದ ಕಲಾವಿದರ ವೇಷ ಚಡ್ಡಿ ಅಥವಾ ಮೊಣಕಾಲಿನವರೆಗೆ ಏರುಗಟ್ಟಿದ ಪಂಚೆ, ಒಳ ಅಂಗಿ ಮತ್ತು ಸೊಂಟಕ್ಕೆ ಕಟ್ಟಿದ ವಸ್ತ್ರ, ಹೆಂಗಸರಾದರೆ ಸೀರೆಯನ್ನು ಮೊಣಕಾಲಿನ ಎತ್ತರಕ್ಕೆ ಉಟ್ಟು ಸೆರಗನ್ನು ಸೊಂಟಕ್ಕೆ ಕಟ್ಟಿರುತ್ತಾರೆ. ಗಂಡಸರಾಗಲಿ ಹೆಂಗಸರಾಗಲಿ ಕಾಲಿಗೆ ಗೆಜ್ಜೆ ಇರಬೇಕು.

ಸಾಮಾನ್ಯವಾಗಿ ಗಂಡಸರೇ ಈ ಕಲಾ ಪ್ರದರ್ಶನ ನೀಡುವರಾದರೂ ಕೊಡವ ಮತ್ತು ಲಂಬಾಣಿ ಜನಾಂಗಗಳಲ್ಲಿ ಹೆಂಗಸರೇ ಪ್ರತ್ಯೇಕವಾಗಿ ಆಡುತ್ತಾರೆ. ಕರ್ನಾಟಕದಲ್ಲಿ ಈ ಕಲೆ ಕಾಡುಗೊಲ್ಲರು ಹಾಗೂ ಲಂಬಾಣಿ ಜನಾಂಗಗಳಲ್ಲಿ ಹೆಚ್ಚು ಪ್ರಚಲಿತವಿದೆ. ಕೃಷ್ಣಲೀಲೆಯನ್ನು ಹಾಡುತ್ತಾ ಆಡುವ ಗೊಲ್ಲರ ಕೋಲಾಟ ಹಾಗೂ ಹಬ್ಬ ಹರಿದಿನಗಳಲ್ಲಿ ವೈವಿಧ್ಯಮಯ ವರ್ಣದ ಬಟ್ಟೆಗಳನ್ನುಟ್ಟು ತಮ್ಮ ಕುಲದೇವತೆಯನ್ನು ಹೊಗಳಿ ಹಾಡಿ ಕುಣಿಯುವ ಲಂಬಾಣಿ ಹೆಂಗಸರ ಕೋಲಾಟ ತುಂಬ ಆಕರ್ಷಣೀಯ

ಉತ್ತರ ಕರ್ನಟಕದ ಕೆಲವು ಕಡೆ ಕೋಲಾಟ ದೈವೀಆರಾಧನೆಗಾಗಿ ಬೆಳೆದು ಬಂದಿದೆ. ಆಟಕ್ಕೆ ಕೋಲುಗಳನ್ನು ಸಿದ್ದಪಡಿಸುವುದರಿಂದ ಹಿಡಿದು (ಇದಕ್ಕೆ ಕೋಲು ಕಡೆಯುವುದು ಎನ್ನುತ್ತಾರೆ.) ಒಂದು ನಿರ್ದಿಷ್ಟ ಕಾಲದಲ್ಲಿ ಕೋಲಾಟವಾಡುವವರೆಗೆ ಸಂಪ್ರದಾಯಬದ್ದವಾದ ಕ್ರಮಗಳಿವೆ. ಕೋಲಾಟದ ಪ್ರದರ್ಶನಕ್ಕೆ 15 ದಿನಗಳ ಮುಂಚೆ ಆಶ್ವಯುಜ ಹುಣ್ಣಿಯೆಂದು ಕೋಲು ಕಡಿಯಲು ಕಾಡಿಗೆ ತೆರಳುವ ಪದ್ಧತಿಯಿದೆ. ಕೋಲು ಕಡೆ ಅಮಾವಾಸ್ಯೆಯ ದಿನವೂ ಈ ಕಾರ್ಯಕ್ಕೆ ಹೊರಡುತ್ತಾರೆ. ಇದಕ್ಕಾಗಿಯೇ ಮೊದಲಿನಿಂದ ಬಂದ ಕೆಲವು ಮನೆತನಗಳಿವೆ. ಸಾಮಾನ್ಯವಾಗಿ ಐದು ಜನ ಮರವನ್ನು ಪೂಜಿಸಿ ಸ್ತುತಿಸಿದ ಮೇಲೆ ಒಂದು ಮರದಿಂದ ಒಂದೇ ಜೊತೆ ಕೋಲುಗಳನ್ನು ಕಡಿಯುತ್ತಾರೆ. ಇಲ್ಲಿನ ಸಂಪ್ರದಾಯದಂತೆ ಕೋಲುಗಳನ್ನು ಗಂಧ, ಕೊಡಸು, ಬೈನೆ, ಹೊನ್ನೆ ಮರಗಳಿಂದಲೇ ಕಡಿಯಬೇಕು. ಈ ಕೆಲಸ ಗೋಧೊಳಿ ಲಗ್ನದಲ್ಲೇ ಆಗಬೇಕು. ಕಡಿಯುವವರು ಉಪವಾಸವಿರಬೇಕು. ನಂತರ ಮುಂದಿನ ಹದಿನೈದು ದಿನಗಳು ಕೋಲಾಟದ ಗುಂಪಿನ ಪ್ರಮುಖನ ನೇತೃತ್ವದಲ್ಲಿ ಅಭ್ಯಾಸ, ದೀಪಾವಳಿಯ ಮರುದಿನ ಪ್ರದರ್ಶನ ಮೊದಲು ಊರ ದೇವರ ಮುಂದೆ, ನಂತರ ಊರ ಪ್ರಮುಖರ ಮುಂದೆ ಕೋಲಾಟವಾದ ಮೇಲೆ, ಮನೆ ಮನೆಗೆ ತೆರಳಿ ಜನಮನವನ್ನು ತಣಿಸುತ್ತಾರೆ.

ಕೋಲಾಟದಲ್ಲಿ ಗಮನಿಸಬೇಕಾದ ಮೂರ ಮುಖ್ಯ ಅಂಶಗಳೆಂದರೆ, ಕ್ರಮಬದ್ಧವಾದ ಕೋಲಿನ ತಾಕಾಟ, ಗೆಜ್ಜೆ ಕಟ್ಟಿದ ಕಾಲಿನ ತಾಳ ಹಾಗೂ ಹಿನ್ನೆಲೆಯ ಹಾಡುಗಳು, ಇವುಗಳಲ್ಲಿ ಹಾಡಿಗೆ ಮಹತ್ವದ ಸ್ಥಾನ. ಹಾಡಿಲ್ಲದೆ ಕೋಲಾಟಕ್ಕೆ ಶೋಭೆಯಿಲ್ಲ. ಹಾಡು ಕೋಲಾಟದ ಅವಿಭಾಜ್ಯ ಅಂಗ. ಹಾಡಿನ ರಾಗ–ತಾಳಗಳಿಗೆ ಅನುಗುಣವಾಗಿ ಕೋಲು–ಕಾಲುಗಳ ಲಯಬದ್ಧವಾದ ಬದಲಾವಣೆಯಾಗುತ್ತದೆ. ಹಿಮ್ಮೇಳ–ಮುಮ್ಮೆಳದೊಂದಿಗೆ ಬರುವ ಕೋಲಾಟದ ಹಾಡುಗಳಲ್ಲಿ ನಮ್ಮ ಪುರಾಣ, ಮಹಾಕಾವ್ಯಗಳ ಕಥಾ

ಪ್ರಸಂಗಗಳಿಂದ ಹಿಡಿದು ಸಮಕಾಲಿನ ಜೀವನದ ಹತ್ತಾರು ಮುಖಗಳ ಪ್ರತೀಕವಾದ ಪ್ರೇಮ, ಹಾಸ್ಯ, ಕರುಣೆ ಮುಂತಾದ ಹಲವಾರು ರಸ ಪ್ರಕರಣಗಳು ಸ್ವಾರಸ್ಯವಾಗಿ ಪಡಿಮೂಡಿರುತ್ತವೆ.

ಕೋಲಾಟ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತದೆ. ಕೋಲು ಹಿಡಿಯುವ ಮುನ್ನ ಕಲಾವಿದರೆಲ್ಲ ವರ್ತುಲಾ ಕಾರವಾಗಿ ಸೇರಿ ಮಧ್ಯೆ ಕೋಲುಗಳನ್ನಿಟ್ಟು ಪೂಜೆಮಾಡಿ, ಕೋಲುಮೇಳದ ಪ್ರಮುಖ (ಗುರುವಿಗೆ) ನಿಗೆವಂದಿಸುತ್ತಾರೆ. ನಂತರ ಗಣಪತಿ ಇಷ್ಟ ದೈವ, ಗ್ರಾಮ ದೇವತೆ, ಪ್ರಕೃತಿ ಶರಣ ವೀರ– ಹೀಗೆ ಸ್ತುತಿಗೀತೆಗಳನ್ನು ಹಾಡಿ ತಮಗೆ ವಿಶಿಷ್ಟವಾದ ಕಲಾ ಪ್ರಕಾರಕ್ಕನುಗುಣವಾಗಿ ಪೌರಾಣಿಕ, ಐತಿಹಾಸಿಕ, ಲೌಕಿಕ ವಿಷಯಗಳನ್ನು ಕುರಿತ ಪ್ರಸಂಗವನ್ನು ಕೋಲಾಟದೊಂದಿಗೆ ಹಾಡುತ್ತಾರೆ.

ಕೋಲಾಟ ಆಡುವಾಗ ಮಧ್ಯೆ ಮಧ್ಯೆ 'ಥೈಯ್ಯ' ಉಡುದೈಯ್ಯ–ಎಂದು ಕಲಾವಿದರಲ್ಲಿ ಒಬ್ಬಿಬ್ಬರು ದನಿ ಮಾಡುತ್ತಾರೆ. ಪ್ರತಿ ಹಾಡು ಮತ್ತು ಕೋಲಾಟದ ಗತ್ತು ಮುಗಿಯುತ್ತಿದ್ದಂತೆ ಮುಗಿತಾಯದ ನುಡಿ ಹೇಳುತ್ತಾರೆ. "ತಾಕಿತು ತಗುಲಿತು ಯಾಕ್ಹಿಂಗಾಯಿತು, ಥೈಯ್ಯ ಥೈಯ್ಯ ಥಗಡದತ್ತೈಯ್ಯ" ಎಂದು ಕೋಲು ಮುಗಿಸುತ್ತಾರೆ.

ನಾಡಿನಾದ್ಯಂತ ಪ್ರಚಲಿತವಿರುವ ಪ್ರಮುಖವಾದ ಹಾಗೂ ಅತ್ಯಂತ ಜನಪ್ರಿಯವಾದ ಈ ಕಲೆಯಲ್ಲಿ ನಾನಾ ಪ್ರಾಕಾರಗಳಿವೆ.

ಗಣೇಶ ಸ್ತುತಿ ಕೋಲು

ಚಿತ್ತಾರ ಗೊಂಬೆ ಕೋಲು

ಮೂರಾಳು ಸುತ್ತಾಡುವ ಕೋಲು

ಗೀರು ಕೋಲು

ಚೆಂಡಾಡುವ ಕೋಲು

ತೇರು ಕೋಲು

ಕಾದಲುಗೋಪು ಕೋಲು

ಕುಕ್ಕರಗಾಲು ಕೋಲು

ಜಡೇ ಕೋಲು

ಎಳೆ ಕೋಲು

ಉಯ್ಯಾಲೆ ಕೋಲು

ಬಾಗ್ಗೋಲು

ದಂಡೆ ಕೋಲು

ಸೋಬಾನದ ಕೋಲು

ಶಿವಗಂಗೆ ಕೋಲು

ಕರೀಭಂಟನ ಕೋಲು

ಅಲವಣಿ ಕೋಲು

ಸುತ್ಕೋಲು

ನಿಲ್ ಕೋಲು

ಹರಿಗೋಲು

ಕಟ್ಟಿಗೆ ಕೋಲು

ಚಕ್ಕೆ ಕೋಲು

ಜೀರು ಕೋಲು

ಕಾಲು ಚಿಟ್ಲು

ಹಾರ್‌ಗಡ್ಡಿ

ತೇರ್ ಗೋಲು

ಉದ್ದಿ ಕೋಲು

ಚಿನ್ನಾಡಿ ಕೋಲು ಮೇಲಿನ ಒಂದೊಂದು ಬಗೆಯ ಆಟದಲ್ಲು ಕೋಲು ಹಾಕುವ ವಿಧಾನಗಳು ಬೇರೆ ಬೇರೆಯಾಗಿರುತ್ತವೆ. ಇವುಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದು.

ಗಣೇಶ ಸ್ತುತಿ ಕೋಲು :– ಪ್ರತಿಯೊಬ್ಬರೂ ಅವರವರ ಸ್ಥಳದಲ್ಲಿಯೇ ನಿಂತು ಕ್ರಮಬದ್ಧವಾಗಿ ಕೋಲು ಹುಯ್ಯುವುದು.

ಚಿತ್ತಾರದ ಕೋಲು:– ಪ್ರತಿಯೊಬ್ಬರೂ ಒಬ್ಬರ ಕೋಲಿಗೆ ಮತ್ತೊಬ್ಬರ ಕೋಲನ್ನು ತಾಕಿಸುತ್ತಾ ಸುತ್ತುವುದು.

ಮೂರಾಳು ಸುತ್ತಾಡುವ ಕೋಲು:– ಒಬ್ಬನಿಗೆ ಒಬ್ಬ ಸುತ್ತಾಡಿಕೊಂಡು ಕೋಲು ಹೊಡೆಯುತ್ತಾ ಪದ ಹಾಡುತ್ತ ವೃತ್ತದ ಒಳ ಹೊಕ್ಕು ಹೊರಬರುವುದು.

ಗೀರು ಕೋಲು:– ಪ್ರತಿಯೊಬ್ಬರೂ ನಿಂತು ಬಗ್ಗಿ ಒಳಗಡೆಯವನು ಹೊರಗೂ ಹೊರಗಿನವನು ಒಳಗೂ ನಾಲ್ಕು ಜನರಿಗೆ ಕೋಲನ್ನು ಕೊಡುತ್ತಾ ಪದ ಹೇಳಿಕೊಂಡು ಆಡುವುದು.

ಚೆಂಡಾಡುವ ಕೋಲು:– ಇದರಲ್ಲಿ ಎಂಟು ಮಂದಿ ಇರುತ್ತಾರೆ. ನಾಲ್ಕು ಜನ ಕೋಲು ಕೊಡುತ್ತಾ. ನಾಲ್ಕು ಮೂಲೆಯಲ್ಲಿ ನಿಂತಿರುತ್ತಾರೆ. ಉಳಿದ ನಾಲ್ಕು ಜನ ಒಳಗೆ ಕುಣಿದು ಅವರಿಗೆ ಕೋಲು ಕೊಟ್ಟು ಚೆಂಡಾಡುವ ರೀತಿಯಲ್ಲಿ ಕುಣಿದು ಹಾಡುತ್ತಾರೆ. ಇದು ಆಕರ್ಷಕ ಕೋಲಾಟಗಳಲ್ಲೊಂದು.

ತೇರು ಕೋಲು:– ಹನ್ನೆರಡು ಮಂದಿ ಸುತ್ತಿ ತಮ್ಮ ಕಾಲಡಿಯಲ್ಲಿ ಕೋಲನ್ನು ಹೊಡೆದು ಪುನಃ ಬೆನ್ನ ಹಿಂದುಗಡೆ ಮತ್ತೊಬ್ಬರಿಗೆ ಕೋಲನ್ನು ಕೊಟ್ಟು ಪದ ಹೇಳುತ್ತಾ ಕುಣಿಯುವುದು.

ಕಾದಲುಗೋಪು ಕೋಲು:– ಪ್ರತಿಯೊಬ್ಬರೂ ತಮ್ಮ ಒಂದೇ ಕೈಯಲ್ಲಿ ಜೊತೆ ಕೋಲನ್ನು ತಲೆಯ ಮೇಲೆ ಹಿಡಿದು ಹಿಂದಕ್ಕೂ ಮುಂದಕ್ಕೂ ಚಲಿಸುತ್ತಾ ಏಟು ಹೊಡೆದುಕೊಂಡು ಪದ ಹೇಳುತ್ತಾ ಕುಣಿಯುವುದು.

ಕುಕ್ಕರಗಾಲು ಕೋಲು:– ಕೋಲು ಹುಯ್ಯುವ ಪ್ರತಿಯೊಬ್ಬರೂ ಒಂದು ಸುತ್ತು ಬಂದು ಒಂದೇ ಸಲ ಎಲ್ಲರೂ ಕುಳಿತುಕೊಂಡು ಒಬ್ಬನಿಗೊಬ್ಬ ಕೋಲು ಕೊಟ್ಟು ಕೊಂಡು ಪದ ಹೇಳುತ್ತಾ ಕುಪ್ಪಳಿಸುತ್ತಲೇ ಕುಣಿಯುವುದು.

ಜಡೇ ಕೋಲು:– ಇದರಲ್ಲಿ ಎಂಟು ಮಂದಿ ಇರುತ್ತಾರೆ. ಕೆಲವು ಕಡೆ ಹನ್ನೆರಡರಿಂದ ಹದಿನಾರ ಮಂದಿಯ ವರೆಗೂ ಇರುತ್ತಾರೆ. ಒಂದು ಖಚಿತವಾದ ಅಂತರದಲ್ಲಿ ಎರಡು ಕೊಂಬೆಗಳನ್ನು ನೆಟ್ಟು

ಅವುಗಳ ಮೇಲೆ ಒಂದುಗಳುವನ್ನು ಅಡ್ಡ ಹಾಕುತ್ತಾರೆ. ಭೂಮಿಯಿಂದ ಸುಮಾರು ಹತ್ತು ಅಡಿ ಎತ್ತರದಲ್ಲಿ ಈ ಗಳು ಇರುತ್ತದೆ. ಎಂಟು ಹಗ್ಗಗಳನ್ನು ಈ ಗಳುವಿನ ಮಧ್ಯಭಾಗಕ್ಕೆ ಸೇರಿಸಿ ಒಟ್ಟಿಗೆ ಕಟ್ಟಿರುತ್ತಾರೆ. ಆ ಹಗ್ಗಗಳ ತುದಿಯನ್ನು ಕೋಲು ಹಾಕುವ ಹುಯ್ಯಲು ಆರಂಭಿಸುತ್ತಾರೆ. ಹೀಗೆ ಕೋಲು ಹಾಕುವವರು ಒಂದು ವರಸೆಯಲ್ಲಿ ತಿರುಗುವಾಗ ಹಗ್ಗ ಮೇಲಿಂದ ಹೆಣೆದುಕೊಂಡು ಜಡೆಯಂತಾಗುತ್ತದೆ. ನಂತರ ಕೋಲು ಹಾಕುವವರು ವರಸೆ ಬದಲಾಯಿಸಿದಾಗ ಜಡೆ ಬಿಚ್ಚಿಕೊಳ್ಳುತ್ತಾ ಮೊದಲಿನಂತಾಗುತ್ತದೆ. ಹೀಗೆ ಹಗ್ಗ ಜಡೆಯಂತೆ ಹೆಣೆದುಕೊಳ್ಳುವುದರಿಂದ ಇದನ್ನು 'ಜಡೆ' ಕೋಲು' ಎಂದು ಕರೆಯುತ್ತಾರೆ. ಇಲ್ಲಿ ಕಲಾವಿದರು ಹೆಜ್ಜೆ ಹಾಕುವಾಗ ಕ್ರಮವಾಗಿ ಚಮತ್ಕಾರವಾಗಿ ಹಾಕಬೇಕು. ಒಬ್ಬ ಕಲಾವಿದನ ಒಂದು ಹೆಜ್ಜೆ ತಪ್ಪಿದರೂ 'ಜಡೆ' 'ಸಿಕ್ಕಾ' ಗುವ ಸಂಭವ ಉಂಟು. ಹಾಕುವ ಹೆಣಿಕೆಗಳು ಒಂದೇ ತರಹ ಇರದೆ ಹಲವು ಬಗೆ ಇರುತ್ತವೆ:

ಜಡೆ

ಪಟಗಾಣೆ

ಬಾರಕೋಲು ಗಂಟು

ಸರಪಣಿ

ಕಲ್ಲಿ

ನೆಲವು

ಜೋಡಿ ಜಡೆ, ಇತ್ಯಾದಿ.

ಕೆಲವು ಪ್ರದೇಶದಲ್ಲಿ ಜಡೆಕೋಲಿಗೆ 'ಮಲಕಿನ ಕೋಲು' ಎಂದು ಕರೆದರೆ ಮತ್ತೆ ಕೆಲವು ಪ್ರದೇಶದಲ್ಲಿ 'ಲಾವಳ' ಹಾಕುವುದು ಎನ್ನುತ್ತಾರೆ. ಇದನ್ನೇ ಉತ್ತರ ಕನ್ನಡ ಭಾಗದಲ್ಲಿ 'ಗೋಪು ಹೆಣೆಯುವುದು' ಎಂದು ಕರೆಯುತ್ತಾರೆ.

ಕೊರವಂಜಿ ಕೋಲು:– ಇದೊಂದು ವೈವಿಧ್ಯಮಯ ಆಕರ್ಷಣೀಯವಾದ ಆಟ ನಾಲ್ಕು ಜನ ಒಂದು ಸಾಲಿನಲ್ಲಿ ಮತ್ತೆ ನಾಲ್ಕು ಮಂದಿ ಇನ್ನೊಂದು ಸಾಲಿನಲ್ಲಿ ನಿಂತುಕೊಳ್ಳುತ್ತಾರೆ. ಮಧ್ಯೆ ಓಣಿಯೋಪಾದಿಯಲ್ಲಿ ಸ್ವಲ್ಪ ಸ್ಥಳವಿರುತ್ತದೆ. ಎರಡು ಸಾಲಿನವರೂ ನಿಂತಲ್ಲಿಯೇ ನಿಂತು 'ತಾಳಗಟುಕು'

ಹಾಕುತ್ತಿರುತ್ತಾರೆ. ಈ ಎಂಟು ಮಂದಿಯಲ್ಲದೆ ಬೇರೆ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬ ಕೊರವಂಜಿ ವೇಷ ಹಾಕುತ್ತಾನೆ. ಮತ್ತೊಬ್ಬ ರುಕ್ಮಿಣಿ ವೇಷ ಹಾಕುತ್ತಾನೆ. ಕೊರವಂಜಿ ಓಣಿಯ ಒಂದು ತುದಿಯಲ್ಲಿದ್ದರೆ ರುಕ್ಮಿಣಿ ಮತ್ತೊಂದು ತುದಿಯಲ್ಲಿರುತ್ತಾಳೆ. ಕೈ ತಾರೆ ಕೈತಾರೆ ದುಂಡಿ' ಎಂದು ಹೇಳುತ್ತಾ ಕೊರವಂಜಿ ರುಕ್ಮಿಣಿಯನ್ನು ಹಿಡಿದು ಬಿಡುತ್ತಾಳೆ. ಕೊರವಂಜಿ ವೇಷದಲ್ಲಿ ಬಂದವನು ಕೃಷ್ಣ ಎಂಬುದು ಹಾಡಿನಿಂದ ವ್ಯಕ್ತವಾಗುತ್ತದೆ. ಇಲ್ಲಿ ಕೊರವಂಜಿಯದೇ ಪ್ರಧಾನ ಪಾತ್ರವಾಗಿರುವುದರಿಂದಲೂ ಹಾಡು ಸಹ ಕೊರವಂಜಿಯನ್ನು ಕುರಿತಾಗಿರುವುದರಿಂದಲೂ ಇದನ್ನು ಕೊರವಂಜಿ ಕೋಲು ಎಂಬುದಾಗಿ ಕರೆಯುತ್ತಾರೆ. ಈ ಕೊರವಂಜಿ ಕೋಲು ಜನಪದ ಕಲೆಗೆ ಸಂಬಂಧಿಸಿದರೆ, ಕೊರವಂಜಿ ಹಾಡು ಜನಪದ ಸಾಹಿತ್ಯದಲ್ಲಿ ಉಜ್ವಲ ಸ್ಥಾನ ಪಡೆದುಕೊಂಡಿದೆ.

ತುಮಕೂರು ಜಿಲ್ಲೆಯ ಕೆಲವು ಪ್ರದೇಶದಲ್ಲಿ ಕೋಲಾಟದ ವಿಧಗಳ ಜೊತೆಗೆ ಅನೇಕ ರೀತಿಯ ವರ್ಸೆ ಕಟ್ಟಿಗೆ ಪ್ರಕಾರಗಳಿವೆ (ಗೊಲ್ಲರಲ್ಲಿ ಕೋಲುಗಳನ್ನು ಕಟ್ಟಿಗೆ ಎನ್ನುತ್ತಾರೆ.)

ಗಣಸ್ತುತಿಗೆ ತಾಳಗಟಿಗೆ

ತ್ರಿಕಾಲಕ್ಕೆ ಎರಡನೇ ತಾಳ

ಚಿಟಿಗೆ ತಾಳ

ಹದಿನಾರು ವರ್ಸೆ ಬಿಚ್ಚು ಕಟಿಗೆ

ಆಡುಗೋಪು ಕಟಿಗೆ

ರಾಮಭದ್ರಿ ಕೋಪು ಕಟಿಗೆ

ಹದಿನೇಳು ವರ್ಸೆ ಬಿಚ್ಚುಕಟಿಗೆ

ಹದಿನಾರು ಚಿಟಿಗಾವ ಕಟಿಗೆ

ಏಳು ಚಿಟಗಿನ ಕಟಿಗೆ

ಜೋಡು ಬಾಗಿನ ಕಟಿಗೆ ಇತ್ಯಾದಿ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕೋಲಾಟದಲ್ಲಿ ಅನೇಕ ಇವುಗಳಲ್ಲಿ ಕೆಲವು ಪ್ರಮುಖವಾದ ಬಗೆಗಳನು ಇಲ್ಲಿ ಬಗೆಗಳನ್ನು ಕಾಣಬಹುದು.

ತೆಕ್ಕೆ ಗೋಲು

ಚಿಟ್ ಗೋಲು

ಆಳದಾಟು

ವಿಲಾಟ

ನಾಬಂದಿ

ಒಂಬತ್ತು ಚಿಟಗಿ

ರಂಡೆ ಆಟ

ಒಂಟಿ ಕೋಲು

ಪಗಡಿ ಕೋಲು

ಬಳ್ಳಿ ಕೋಲು

ಪಳತು ಕೋಲು

ಸುತ್ತು ಕೋಲು

ಕತ್ರಿಕೋಲು

ಚಿತ್ರಕೋಲು

ಅಂಗಡಿ ಕೋಲು

ಬೆನ್ನಾಳಿ ಕೋಳು

ಮೂರಾಳಿನ ಕೋಲು

ಮೂರಾಳಿನ ಹೆಜ್ಜೆ ಕೋಲು

ತಮಲಕು ಕೋಲು

ಬಾಗ್ಗೋಲು

ದಾವಣಿ ಗೋಲು

ಬಾಗ್ಗೋಲು

ಹೂವಿನ ಕೋಲು

ಬಿಚ್ಚು ಕೋಲು

ತೊಳಸು ಕೋಲು

ಕತ್ರಿ ಕೋಲು:– ಹದಿನಾರು ಮಂದಿ ಸುತ್ತಲೂ ವರ್ತುಲಾಕಾರದಲ್ಲಿ ನಿಂತು ಒಮ್ಮೆ ತಮ್ಮ ಎಡಗೈ ಕೋಲಿನಿಂದ ಬಲಗಡೆಯವನ ಬಲಗೈ ಕೋಲಿಗೆ, ಇನ್ನೊಮ್ಮೆ ತಮ್ಮ ಬಲಗೈಲಿ ಕೋಲಿನಿಂದ ಎಡಗಡೆಯವನ ಎಡಗೈ ಕೋಲಿಗೆ ಹೊಡೆಯುತ್ತಾ ಸುತ್ತುತ್ತಾರೆ.

ಅಂಗಡಿ ಕೋಲು:– ಎಂಟೆಂಟು ಮಂದಿ ಎರಡುಗುಂಪಾಗಿ ನಿಂತುಕೊಂಡು ಪ್ರತ್ಯೇಕವಾಗಿ ಸುತ್ತುತ್ತಾರೆ. ಒಂದರಿಂದ ಇನ್ನೊಂದು ಗುಂಪು ತೀರ ಹತ್ತಿರದಲ್ಲಿರುತ್ತದೆ. ಮೊದಲನೆಯ ಗುಂಪಿನ ಕೊನೆಯ ವ್ಯಕ್ತಿ ಎರಡನೇ ಗುಂಪಿನ ಕೊನೆಯವನಿಗೆ ಕೋಲು ಕೊಡುತ್ತಾನೆ. ಗುಂಪು ಸುತ್ತುತ್ತಿರುವುದರಿಂದ ಎರಡು ಕೊನೆಗಳಲ್ಲಿ ಪ್ರತಿಯೊಬ್ಬನೂ ಸಂಧಿಸುತ್ತಾರೆ ಹೀಗೆ ಸುತ್ತುತ್ತಿರುವಾಗ ಯಾರು ಎಲ್ಲೆಲ್ಲಿ ಸರಿಯುತ್ತಾರೆ. ಎಂಬುದನ್ನು ಪತ್ತೆ ಹಚ್ಚುವುದು ಕಷ್ಟವಾಗುತ್ತದೆ.

ಬೆನ್ನಾಳಿ ಕೋಲು:– ವರ್ತುಳಾಕಾರವಾಗಿ ಪ್ರತಿಯೊಬ್ಬರ ಬೆನ್ನಿನ ಹಿಂದೆ ಒಬ್ಬ ಬರುವಂತೆ ನಿಂತುಕೊಳ್ಳುತ್ತಾರೆ. ಕೋಲಿನ ಒಂದು ಪೆಟ್ಟನ್ನು ತಮ್ಮ ಬೆನ್ನ ಹಿಂದೆಯೇ ಕೊಟ್ಟುಕೊಳ್ಳುತ್ತಾರೆ. ಇನ್ನೊಂದನ್ನು ತಲೆಯ ಮೇಲೆ ಬರುವ ಕೋಲಿಗೆ ಕೊಟ್ಟು ಸುತ್ತುತ್ತಾರೆ. ಬೆನ್ನ ಹಿಂದೆ ಆಡುವ ಕೋಲಾದ್ದರಿಂದ ಇದಕ್ಕೆ 'ಬೆನ್ನಾಳಿ ಕೋಲು' ಎಂದು ಹೆಸರು ಬಂದಿದೆ.

ಮಲಕಿನ ಕೋಲು:– ಒಬ್ಬರ ಕಿರುಬೆರಳನ್ನು ಇನ್ನೊಬ್ಬರ ಕಿರುಬೆರಳಿಗೆ ಸಣ್ಣ ಹುರಿಯಿಂದ ಮಲಕು (ಗಂಟು) ಹಾಕುತ್ತಾರೆ. ಹೀಗೆ ಒಬ್ಬರಿಂದ ಇನ್ನೊಬ್ಬರು ಬೇರ್ಪಡದೆ ಎರಡೂ ಕೈಯಿಂದ ಕೋಲು ಹಿಡಿದು, ತಲೆಯ ಮೇಲ್ಗಡೆಯಿಂದ ಕೋಲು ತಂದು ಅಲ್ಲಿ ಬರುವ ಇತರರ ಕೋಲಿಗೆ ಹೊಡೆದು ಇಡೀ ದೇಹವನ್ನು ತಿರುಗಿಸಿ ಪುನಃ ಮೊದಲಿನ ಸ್ಥಿತಿಗೆ ಬರುತ್ತಾರೆ.

ಉದ್ದ ಕೋಲಿನಲ್ಲಿಯೂ ಅನೇಕ ಪ್ರಕಾರಗಳಿವೆ. ಬಲಗೈಯಲ್ಲಿ ಮಾತ್ರ ಕೋಲು ಇರುತ್ತದೆ. ಎಡಗೈಯಲ್ಲಿ ಬಣ್ಣದ ಬಟ್ಟೆಯನ್ನು ಹಿಡಿದಿರುತ್ತಾರೆ. ಗಿಡ್ಡ ಕೋಲಿನ ಪ್ರಕಾರಕ್ಕೆ ದಪ್ಪಿನ ಗತ್ತು ಇರುವುದಿಲ್ಲ. ಆದರೆ ಇದರ ಪ್ರತಿ ಪ್ರಕಾರಕ್ಕು ದಪ್ಪಿನ ಹಿನ್ನೆಲ ಬೇಕೇ ಬೇಕು. ದಪ್ಪು ಮತ್ತು ಕೋಲಿನ ತಾಳ ಮೇಳಗೂಡುವುದೇ ಇದರ ಸೊಗಸು

ಎಂಟು ಮಂದಿ ಎದುರು ಬದುರು ನಿಂತುಕೊಂಡು ಆಟದ ಪ್ರಾರಂಭಕ್ಕೆ ದಪ್ಪಿನ ನಿಧಾನವಾದ ಗತ್ತಿಗೆ ಹೆಜ್ಜೆಯನ್ನು ಏಕಪ್ರಕಾರವಾಗಿ ಹಿಂದೊಮ್ಮೆ ಮುಂದೊಮ್ಮೆ ಹಾಕುತ್ತಾ, ಟೊಂಕ ಬಳಸುತ್ತಾ ಎಡಗೈನ ಬಟ್ಟೆಯನ್ನು ಗತ್ತಿಗೆ ಸರಿಯಾಗಿ ಮೇಲಕ್ಕೊಮ್ಮೆ ಕೆಳಕ್ಕೊಮ್ಮೆ ಬೀಸುತ್ತಾ ಬಲಗೈ ಕೋಲನ್ನು ಹೆಬ್ಬೆರಳಿನ ಸಂದಿಯಿಂದಲೇ ಚಕ್ರಾಕಾರವಾಗಿ ತಿರುಗಿಸುತ್ತಾ ಒಯ್ಯಾರವಾಗಿ ಆಡಿಸುತ್ತಾರೆ. ತಂಡದ ನಾಯಕನಿಂದ ಸಂಜ್ಞೆ ಆಗುತ್ತಿದ್ದಂತೆಯೇ ಕೋಲು ಹಾಕುವ ತಾಳದ ಗತ್ತು ಹಾಗು ದಪ್ಪಿನ ಗತ್ತು ತೀವ್ರ ಗತಿಯನ್ನು ತಲಪುತ್ತವೆ. ಅದೇ ವೇಳೆಗೆ ಎದುರು ಬದುರಿನ ಸಾಲಿನವರು ಜೋಲಿ ಕೊಟ್ಟು ಬಂದು ಏಟನ್ನು ಪರಸ್ಪರ ಕೋಲಿಗೆ ಹೊಡೆದು ಒಬ್ಬರ ಸಂದಿಯಿಂದ ಇನ್ನೊಬ್ಬರು ತಪ್ಪಿಸಿಕೊಳ್ಳುತ್ತಾರೆ. ಆಗ ಆ ಕಡೆಯ ಸಾಲು ಈ ಕಡೆಗೂ, ಈ ಕಡೆಯ ಸಾಲು ಆ ಕಡೆಗೂ ಸರಿಯುತ್ತದೆ ಪುನಃ ಇದೇ ಮುಂದುವರಿಯುತ್ತದೆ. ಕೆಲವು ನಿಮಿಷಗಳ ಬಳಿಕ ನಿರ್ದಿಷ್ಟ ಸೂಚನೆ ಕೊಟ್ಟು 'ಗತ್ತು ಮುರಿ'ಯುತ್ತಾರೆ. ಆಗ ಎಲ್ಲರೂ ಮೊಣಕಾಲಿನ ಮೇಲೆ ಕೂತು ತಮ್ಮ ಎದುರಿನ ವ್ಯಕ್ತಿಯ ಕೋಲಿಗೆ ಸಣ್ಣದಾಗಿ ಏಟು ಕೊಟ್ಟು ಮುಕ್ತಾಯ ಮಾಡುತ್ತಾರೆ. ಉತ್ತರ ಕರ್ನಾಟಕದಲ್ಲಿ ರೂಢಿಯಲ್ಲಿರುವ ಹೆಜ್ಜೆಮೇಳದಲ್ಲೂ ಇಂತಹ ಕೋಲಾಟ ಆಡುತ್ತಾರೆ.

ಸುತ್ತು ಕೋಲು:– ಎರಡು ಸಾಲಿನಲ್ಲಿ ಒಬ್ಬರಿಗೊಬ್ಬರು ಬೆನ್ನು ಕೊಟ್ಟು ನಿಂತಿರುತ್ತಾರೆ. ಹಿಂದಿನ ಪ್ರಕಾರದಂತೆ ಗತ್ತಿಗೆ ಸರಿಯಾಗಿ ಕುಣಿತವಾದ ನಂತರ ಎರಡೂ ಸಾಲು ಎದುರು ಬದುರು ನಿಲ್ಲುತ್ತಾರೆ. ಕೋಲುಕಾರರು ಪರಸ್ಪರ ಕೋಲಿಗೆ ಗತ್ತಿಗೆ ಸರಿಯಾಗಿ ಏಟು ಕೊಟ್ಟು ತಿರುಗಿ ನಿಲ್ಲುತ್ತಾರೆ. ಮೊದಲು ಬೆನ್ನಿಗೆ ಬೆನ್ನಾದವನು ನಂತರ ಎದುರಾಗುತ್ತಾನೆ; ಕೋಲಿಗೆ ಏಟು ಕೊಟ್ಟು ಮುಂದೆ ಸರಿದು ಪುನಃ ತಿರುಗಿ ನಿಲ್ಲುತ್ತಾನೆ. ಹೀಗೆ 'ತಳಕು' ಹಾಕಿದ ರೀತಿಯಲ್ಲಿ ಮುಂದುವರಿದು ಮುಗಿಸುತ್ತಾರೆ.

ಪಳತು ಕೋಲು:– ಹಿಂದಿನ ಪ್ರಕಾರದಂತೆಯೇ ನಿಲ್ಲುತ್ತಾರೆ. ಆದರೆ ಇಲ್ಲಿ ಎರಡರಲ್ಲಿ ಒಂದು ಪೆಟ್ಟನ್ನು ಕಾಲುಗಳ ನಡುವಿನಿಂದ ಕೊಡುತ್ತಾರೆ. ಇದರಲ್ಲಿ ಹನ್ನೆರಡು ಮಂದಿ ಕಲಾವಿದರು ಭಾಗವಹಿಸುತ್ತಾರೆ. ಇಬ್ಬರು ಹಾಡನ್ನು ಹಾಡುತ್ತಾರೆ.

ಕೋಲಾಟ ಆಡುವವರು ನಡೆಸುವ ಒಂದು ಚಾಕ ಚಕ್ಯತೆಯ ಅಂಶವೆಂದರೆ ಕಲಾವಿದರು ಕಲಾ ಪ್ರದರ್ಶನದ ವೇಳೆಯಲ್ಲಿ. ಪ್ರೇಕ್ಷಕರು ನೆಲದ ಮೇಲೆ ಎಸೆದ ನಾಣ್ಯವನ್ನು 'ಕೋಲು ತಪ್ಪಿಸದೇ' ಕಾಲಿನಿಂದ ತೆಗೆದು ಕಿಸೆಗೆ (ಜೇಬಿಗೆ) ಸೇರಿಸಿಕೊಳ್ಳುವುದು ಮತ್ತು ನುಣ್ಣನೆಯ ಸುಲಿದ ತೆಂಗಿನ ಕಾಯಿಯನ್ನು ಸಹ ಕಾಲಿನಿಂದಲೇ ಎತ್ತಿಕೊಳ್ಳುವುದು. ಈ ಆಟವನ್ನು ನುರಿತ ಕಲಾವಿದರು ಮಾತ್ರ ಪ್ರದರ್ಶಿಸುತ್ತಾರೆ.

ಇದಲ್ಲದೆ ನೆಲಕ್ಕೆ ಹುಗಿದ ಅಚ್ಚಿನ ಮೇಲೆ ಗಾಡಿಯ ಚಕ್ರವನ್ನಿಟ್ಟು ಅದರ ಮೇಲೆ ಆರೆಕೋಲಿಗೆ ಒಬ್ಬರಂತೆ ನಿಂತು ಕೋಲು ಹೊಡೆಯುತ್ತಾರೆ. ಕೆಳಗಿನಿಂದ ಒಬ್ಬ ಆ ಚಕ್ರವನ್ನು ಹೊಡೆಯುತ್ತಾರೆ. ಕೆಳಗಿನಿಂದ ಒಬ್ಬ ಆ ಚಕ್ರವನ್ನು ತಿರುಗಿಸುತ್ತಿರುತ್ತಾನೆ. ಇನ್ನೊಂದು ರೋಮಾಂಚಕಾರೀ ಪ್ರಕಾರದಲ್ಲಿ ಪ್ರತಿಯೊಬ್ಬರೂ ತಮ್ಮ ಎರಡು ತೋಳುಗಳಿಗೆ ಎರಡೆರಡು ಹರಿತವಾದ ಕತ್ತಿಗಳನ್ನು ಕಟ್ಟಿಕೊಂಡು ಒಬ್ಬರ ನಡುವೆ ಒಬ್ಬರು ನುಸುಳೂತ್ತಾ ಕೋಲು ಹೊಡೆಯುವುದು ನಿಜಕ್ಕೂ ಅದ್ಭುತವಾದುದು.

ಉತ್ತರ ಕರ್ನಾಟಕ ಕೆಲವು ಪ್ರದೇಶದಲ್ಲಿ ಕೋಲಾಟದಲ್ಲಿ ಕೆಳಗಿನ ಗತ್ತುಗಳಿವೆ. ಅವುಗಳನ್ನು 'ವಿಧಿ' ಗಳೆಂದೂ ಕರೆಯುತ್ತಾರೆ.

ಎರಡು ಚುಟಿಕೆ

ಮೂರು ಚುಟಿಕೆ

ಏಳು ಚುಟಿಕೆ

ಎಡಮಗುಲ

ಬಲಮಗುಲ

ಕುಂತೇಳು ಚುಟುಗಿ

ನಿಂತೇಳು ಚುಟುಗಿ

ಶಾಲಿ

ಚಜ್ಜಲ ಗುಂಪು

ಕಾನಿಗೋಲು

ಸೂಜಿಗೋಲು

ಮೀಟುಗೋಲು

ಮಾಗೋಲು

ಬಲಿದು ಕೋಲು

ಪಾಟ್ಲೆಕೋಲು ಜಡೆಕೋಲು

ಬಾನು ಕೋಲು

ಎದೆಮ್ಯಾಲೆ ಕಡ್ಡಿ

ಆಳಿಗೆ ಆಳು ತಿರುಗ

ಮೆಣಸಿನ ಸಾಲು

ಏಳು ಆಳಿನ ಕೋಲು

ದಂಡೆ ಕೋಲು

ಮಲಕುಗೋಲು

ಸಾಲುಗೋಲು

ಕುಟ್ಟುಗೋಲು

ಕೊಡಲು ಜಿಲ್ಲೆಯಲ್ಲಿ ಹುತ್ತರಿ ಕೋಲಾಟವಿದೆ. ದೈವೀಆರಾಧನೆಯ ಹಿನ್ನೆಲೆಯಲ್ಲಿ ಈ ಕಲೆ ಚಂಡು ತೊರೆ ಕೋಲು, ಜಪ್ಪೈಕೋಲು ಪಾತುರೆ ಕೋಲು ಹೀಗೆ ಅನೇಕ ಬಗೆಗಳಿವೆ. ಕಲಾವಿದರು ಕೊಡವರ ವೇಷ ಧರಿಸುತ್ತಾರೆ. ಕೋಲುಗಳು ಸುಮಾರು ಮೂರರಿಂದ ಮೂರೂವರೆ ಅಡಿ ಉದ್ದವಿರುತ್ತವೆ. ಇವು ಬೆತ್ತದ ಕೋಲುಗಳು. ಬುಡದಲ್ಲಿ ದಪ್ಪವಾಗಿದ್ದು ಕೊನೆಯಲ್ಲಿ ಸಣ್ಣದಾಗಿರುತ್ತವೆ. ಕೋಲುಗಳ ಗಾತ್ರ ಒಂದು ಬೆರಳಿರಷ್ಟಿರುತ್ತದೆ. ವರ್ಷದಲ್ಲಿ ಒಂದು ಸಾರಿ, ಹುತ್ತರಿ ಹಬ್ಬದಲ್ಲಿ ಆಟ ಆಡಿ ಮುಚ್ಚಿಟ್ಟ ಕೋಲುಗಳನ್ನು ಮುಂದಿನ ಹುತ್ತರಿ ಹಬ್ಬದವರೆಗೂ ಹೊರಗೆ ತೆಗೆಯುವುದಿಲ್ಲ.

ಮಂಡ್ ಜಿಲ್ಲೆಯ ನಾಗಮಂಗಲದ ಕಡೆ ಕೆಲವು ಪ್ರಕಾರಗಳು ಪ್ರಚಲಿತವಿವೆ:

ಚದುರು ಭಾಗ

ಗುಡಾಳ ಗೋಪ್

ಚದುರ ಗೋಪ್

ಅ) ರೇಣುಗೋಪ್

ಆ) ವೇಣುಗೋಪ್

ಆಳು ಸುತ್ತುಗೋಲು

ಜಡೆಕೋಲು ಅಥವಾ ಪಾರಿಜಾತ

ಉಡಾಳಗೋಪ್–ಇತ್ಯಾದಿ.

ಲಂಬಾಣಿಯರ ಕೋಲಾಟದಲ್ಲಿ ಎಂಟರಿಂದ ಹತ್ತು ಮಂದಿ ಹೆಣ್ಣುಮಕ್ಕಳು ವರ್ತುಲಾಕಾರವಾಗಿ ನಿಂತು ಸುಮಾರು ಒಂದು ಮೊಳ ಉದ್ದದ ಎರಡು ಕೋಲು ಹಿಡಿದುಕೊಂಡು 'ಹಲಗೆ' ಯ ಗತ್ತಿನಲ್ಲಿ ಹಾಡುತ್ತಾ ಕುಣಿಯುತ್ತಾರೆ. ಈ ಆಟಕ್ಕೆ ಇವರು 'ಛತಿ' ಎಂದು ಕರೆಯುತ್ತಾರೆ. ಮಾರವಾಡೀ (ಲಂಬಾಣಿ) ಭಾಷೆಯಲ್ಲಿರುವ ಇವರ ಹಾಡು 'ವಾಲೀದೇವರ ಸ್ತುತಿ' ಪದವಾಗಿರುತ್ತದೆ. ಒಟ್ಟು ಮೂರು ಪ್ರಕಾರವಿರುವ ಕುಣಿತವನ್ನು ವರ್ಷದಲ್ಲಿ ದಸರಾ ಹಾಗೂ ಹೋಳಿ ಹುಣ್ಣಿಮೆಯ ಸಂದರ್ಭದಲ್ಲಿ ಮನೆ ಮನೆಗೆ ಹೋಗಿ ಮಾಡುವ ಪದ್ಧತಿಯಿದೆ.

# 6 ಮೊಹರಂ ಕುಣಿತ

ಇದು ಮೊಹರಮ್ ತಿಂಗಳಿನ ಹತ್ತನೆಯ ದಿನ ಮುಸ್ಲಿಮರು ಆಚರಿಸುವ 'ಅಲಾವಿ' ಹಬ್ಬದ ಕುಣಿತವಾಗಿದೆ. ಇದರಲ್ಲಿ ಹಿಂದೂಗಳೂ ಭಾಗವಹಿಸುವುದುಂಟು. ಹಿಂದೂಗಳನ್ನು ಆಕರ್ಷಿಸುವ ಸಲುವಾಗಿ ಭಾರತದ ಮುಸಲ್ಮಾನ ರಾಜರು ಇದಕ್ಕೆ ವಿಶಿಷ್ಟವಾದ ರೂಪವನ್ನು ಕೊಟ್ಟು ಆಚರಣೆಯಲ್ಲಿ ತಂದರು ಎಂದು ಕೆಲವರ ಅಭಿಪ್ರಾಯವುಂಟು. 'ಅಲಾವಿ' ಎಂದರೆ ಕೆಂಡದಿಂದ ಮಾಡಿದ ಕೊಂಡ. ಆ ಕೊಂಡದ ಸುತ್ತ ಕುಣಿಯುವುದರಿಂದ ಇದಕ್ಕೆ 'ಅಲಾವಿ' (ಅಲಾವಿ) ಕುಣಿತವೆಂದು ಹೆಸರು ಬಂದಿದೆ.

ಹಿಂದಿನ ವರ್ಷದ ಹಬ್ಬದ ಕೊಂಡದ ಬೂದಿಯನ್ನು ರಾಶಿ ಮಾಡಿ, ಅದರ ಮೇಲೆ ಮಣ್ಣನ್ನು ಏರಿಸಿ ಇಟ್ಟಿರುತ್ತಾರೆ. ಮೊಹರಮ್ಮ್ ಚಂದ್ರ ದರ್ಶನವಾದ ಮೇಲೆ, ಈ ಸುದ್ದಿಯನ್ನು ಬಿತ್ತರಿಸುವ ಮುಜಾವರನು 'ಚಂದ್ರ ದರ್ಶನವಾಗಿದೆ ಬನ್ನಿ ಎಂದು ಊರಿನ ಜನರನ್ನು ಕರೆಯುತ್ತಾನೆ. ಮನೆಗೊಬ್ಬನಂತೆ ಬಂದು, ಗುದ್ದಲಿಯಿಂದ ಒಂದೇ ಸಲ ಹೊಡೆದು ಮಣ್ಣು ತೆಗೆಯುತ್ತಾರೆ. ಹೀಗೆ ಮಣ್ಣು ತೆಗೆದ ಸ್ಥಳದಲ್ಲಿ ಅಗಲವಾದ ಒಂದು ಗುಂಡಿಯಾಗುತ್ತದೆ. ಆಮೇಲೆ ಗಾಡಿಗಟ್ಟಲೆ ಕಟ್ಟಿಗೆಯನ್ನು ತಂದು ಅಲಾಬಿ ಗುಂಡಿಯಲ್ಲಿ ರಾಶಿ ಹಾಕುತ್ತಾರೆ.

ಮೊಹರಮ್ ತಿಂಗಳ ಏಳನೆಯ ದಿವಸ ಮಹಮ್ಮದ್ ಪೈಗಂಬರರ ಮೊಮ್ಮಗ ಹುಸೇನರು ಕರ್‌ಬಲ್ ಮರು ಭೂಮಿಯ ಮೈದಾನದಲ್ಲಿ ತಮ್ಮ ಅರವತ್ತು ಜನ ಅನುಯಾಯಿಗಳೊಂದಿಗೆ ಯಜೀದನ ಸೈನ್ಯದೊಡನೆ ಯುದ್ದ ಮಾಡುತ್ತ ಪ್ರಾಣ ಬಿಟ್ಟರು. ಆ ಐತಿಹಾಸಿಕ ಬಲಿದಾನದ ಸ್ಮರಣೆ ಈ ನೃತ್ಯದಲ್ಲಿಯೂ ಉಂಟು. ಮೊಹರಮ್ ತಿಂಗಳ ಐದನೆಯ ದಿವಸದಿಂದ ರಾತ್ರಿಯಲ್ಲಿ ಕರ್ಬಲಾ ಪದಗಳನ್ನು ಹೇಳುತ್ತ ಅಲಾವಿ ಗುಂಡಿಯ ಸುತ್ತಲೂ ತಿರುಗುತ್ತಾರೆ. ಹತ್ತನೆಯ ದಿನ ಕೊಂಡದ ಬೆಂಕಿಯನ್ನು ಮಾಡಿ ಕೊಂಡದ ಸುತ್ತಲೂ ಕುಣಿಯುವುದು ನಡೆಯುತ್ತದೆ. ಉತ್ತರ ಕನ್ನಡದಲ್ಲಿ ಈ ಹತ್ತನೆಯ ದಿನ ಕೆಂಡ ಹಾಯುತ್ತಾರೆ. ಕೆಲವು ಕಡೆ ಈ ಕುಣಿತ ಒಂಬತ್ತನೆಯ ದಿನವೇ ನಡೆಯುತ್ತದೆ. ಅಲ್ಲಿ ಅದೇ ಈ ಹಬ್ಬದ ಕೊನೆಯ ದಿನ. ಆ ಹತ್ತನೆಯ (ಅಥವಾ ಕೆಲವೆಡೆ ಒಂಬತ್ತನೆಯ) ದಿನಕ್ಕೆ 'ಅಲಾವಿಯಾ' ಎಂದು ಹೆಸರಿದೆ.

ಕೆಲವು ಕಡೆ ಬಾಬಯ್ಯನ ಹಬ್ಬದ ಸಂದರ್ಭದಲ್ಲಿ ಅಲಾವಿ ಕುಣಿತವನ್ನು ಪ್ರದರ್ಶಿಸುತ್ತಾರೆ. ಬಾಬಯ್ಯನ ಹಬ್ಬಕ್ಕೆ ಒಂದು ತಿಂಗಳಿರುವಾಗ, ಒಬ್ಬನು ಹಬ್ಬದ ಆಗಮನವನ್ನು ತಿಳಿಸುತ್ತಾನೆ. ಅವನಿಗೆ

ಹಳ್ಳಿಗರು 'ಲಾಡಿಸಾಬ್' ಎನ್ನುತ್ತಾರೆ. ಅವನು ಸೊಂಟಕ್ಕೆ ಕೆಂಪು ದಾರ (ಲಾಡಿ) ಕಟ್ಟಿ ಕೊಳ್ಳುವುದರಿಂದಲೇ ಈ ಹೆಸರು ಬಂದಿದೆ ಎನ್ನುತ್ತಾರೆ (ಇವನೇ ಮುಜಾವರ). ಮುಖಕ್ಕೆ ಬಿಳಿ ಮತ್ತು ಕಪ್ಪು ಬೊಟ್ಟುಗಳನ್ನಿಟ್ಟು ಕೊಂಡು ಗೆಜ್ಜೆ ಕಟ್ಟಿಕೊಂಡ ಈತನು ಒಂದು ದೊಣ್ಣೆಯನ್ನು ಕೈಯಲ್ಲಿ ಹಿಡಿದುಕೊಂಡು ಮನೆ ಮನೆಗೆ ಹೋಗಿ, ಅದನ್ನು ನೆಲಕ್ಕೆ ಬಡಿಯುತ್ತಾ, "ಲಾಯ್‌ತೋಯ್ ಧುಯ್" ಎಂದು ಹೇಳಿಕೊಂಡು (ಇದುಯಾ ಇಮಾಮ್ ಧೀನ್' ಎಂಬ ವಾಕ್ಯದ ಅಜ್ಞಾನ ಮೂಲಕವಾದ ರೂಪವಾಗಿರಬಹುದೆಂದು ಮುಸಲ್ಮಾನ ರೊಬ್ಬರು ಹೇಳುತ್ತಾರೆ. 'ಯಾ' ಎಂದರೆ 'ಓ' ಎಂದು ಕರೆವ ಶಬ್ದ. 'ಇಮಾಮ್' ಎಂದರೆ ಮುಂದಾಳು 'ಧೀನ್' ಎಂದರೆ ಧರ್ಮ "ಧರ್ಮವನ್ನು ರಕ್ಷಿಸಿರಿ ಇಮಾಮರೆ" ಎಂದು ಇದರ ಅರ್ಥ) ಮನೆಗಳವರಿಂದ ದವಸಧಾನ್ಯ ಪಡೆಯುತ್ತಾನೆ.

ಇದಾದ ಹದಿನೈದು ದಿನಗಳ ಅನಂತರ ಮುಸಲ್ಮಾನರು ವಾಸವಾಗಿರುವ ಊರಿನಲ್ಲಿ ಹಿರಿಯರು ಒಂದೆಡೆ ಸೇರಿ ಹಬ್ಬವನ್ನು ಎಂದು ಮಾಡಬೇಕೆಂದು ನಿರ್ಧರಿಸಿ, ಅದು ವರೆಗೂ ಪೆಟ್ಟಿಗೆಯಲ್ಲಿ ಮುಚ್ಚಿಟ್ಟಿದ್ದ ಸಾಂಕೇತಿಕ ಆಕೃತಿಗಳನ್ನು ಹೊರತೆಗೆದು, ಅವನ್ನು ಚೆನ್ನಾಗಿ ಬೆಳಗಿ, ಅದಕ್ಕಾಗಿಯೇ ನಿರ್ಮಿಸಿರುವ ಊರ ಮುಂದಿನ ಚಾವಡಿಯಲ್ಲಿ ನೆಲಕ್ಕೆ ನೆಡುತ್ತಾರೆ. ಬಣ್ಣ ಬಣ್ಣದ ಬಟ್ಟೆಗಳಿಂದ ತ್ರಿಶೂಲವನ್ನು ಹೋಲುವ ಆಕೃತಿಗಳನ್ನು ಸಿಂಗರಿಸಿರುತ್ತಾರೆ.

ಈ ಆಕೃತಿಗಳು ಕೆಲವು ಕಡೆಗಳಲ್ಲಿ ಸ್ವಲ್ಪ ಬೇರೆಯಾಗಿರುವುದೂ ಉಂಟು. ಕೆಲವೆಡೆಗಳಲ್ಲಿ ಹೊಂಡ ತೋಡಿ, ಗೂಟ ಹುಗಿದು, ನಿರಿಗೆ ನಿರಿಗೆಯಾಗಿ ಕಾಣುವಂತೆ ಬಣ್ಣ ಬಣ್ಣದ ಬಟ್ಟೆಗಳನ್ನು ಆ ಗೂಟ ಕಾಣದಂತೆ ಅದಕ್ಕೆ ಸುತ್ತಿ, ತ್ರಿಶೂಲದಂತೆ ಕಾಣುವ ಆಕೃತಿಯನ್ನು ಗೂಟಕ್ಕೆ ಕೂಡಿಸಿರುತ್ತಾರೆ. ಮೆರವಣಿಗೆಯಲ್ಲಿ ಆಕೃತಿ ಸಮೇತ ಗೂಟವನ್ನು ಎತ್ತಿಕೊಂಡು ಹೋಗುತ್ತಾರೆ.

ಕೆಲವು ಕಡೆ ಅದರ ಬದಲಿಗೆ, ಇಸ್ಪೀಟ್ "ಆಟಿನ್" ಆಕಾರದ ಎಲೆ ಚಿಹ್ನೆಯಂತೆ ಕಾಣುವ ಬೆಳ್ಳಿಯಿಂದ ಮಾಡಿದ ಆಕೃತಿಯಿರುತ್ತದೆ. ಕೆಲವು ಕಡೆ ಐದು ಬೆರಳು ಗಳಿರುವ ಹಸ್ತದ ಆಕೃತಿಯನ್ನು ಇಡುವುದುಂಟು. ಅವು 'ಪಂಜತನ್ ಪಾಕ್' ಐದು ಪವಿತ್ರ ಆತ್ಮಗಳ ಪ್ರತೀಕ ಹಜರತ್ ಮಹಮ್ಮದ್ ಪೈಗಂಬರ, ಹಜರತ್ ಅಲಿ, ಪೈಗಂಬರರ ಮಗಳು ಫಾತಿಮಾ (ಅಲಿಯ ಪತ್ನಿ) ಮತ್ತು ಪೈಗಂಬರರ ಮೊಮ್ಮಕ್ಕಳಾದ ಹಸನ ಮತ್ತು ಹುಸೇನ ಇವರೇ ಆ ಐವರು ಪವಿತ್ರಾತ್ಮರು.

ತ್ರಿಶೂಲ ಆಕಾರವು ಮುಸ್ಲಿಂ ಸಂಪ್ರದಾಯದಂತೆ ಬಲಿದಾನ ಹೊಂದಿದ ಅಲಿ ಹಸನ್ ಮತ್ತು ಹುಸೇನ್ ಅಥವಾ ಹಸನ್ ಹುಸೇನ್ ಮತ್ತು ಅವರ ಮಲತಮ್ಮ ಇಮಾಮ್ ಖಾಸಿಮರ ಸಂಕೇತವಾಗಿರಬಹುದು. ಅಂತೂ ಅದು ಮಹಮ್ಮದೀಯರಲ್ಲಿನ ಮೂವರು ಹುತಾತ್ಮರ ಸಂಕೇತವೆನ್ನುವುದು ಒಪ್ಪುವಂಥ ವಿಷಯ. ಆ ಆಕೃತಿಯ ಜೊತೆಗೆ, ಕೆಲವು ಕಡೆ ಸೂರ್ಯ ಚಂದ್ರರ ಆಕೃತಿಗಳನ್ನು ಸೇರಿಸುತ್ತಾರೆ. ಇದು ಬಹುಶಃ ಬಲಿದಾನ ಹೊಂದಿದವರ ನೆನಪು ಸೂರ್ಯ ಚಂದ್ರ ರಿರುವವರೆಗೂ ಇರಲಿ ಎಂಬ ಸಂಕೇತ ವಿರಬಹುದು.

'ಅಲಾವಿ ಕುಣಿತ' ನಡೆಯುವುದು ಅಲಾವಿ ಗುಂಡಿಯ ಸುತ್ತ ಕುಣಿತದವರು ಕಾಲಿಗೆ ಗೆಜ್ಜೆ ಕಟ್ಟಿಕೊಂಡಿರುತ್ತಾರೆ. ಕೆಲವು ಕಡೆ ಒಂದು ಕೈಯಲ್ಲಿ ದೊಣ್ಣೆಯನ್ನೂ ಮತ್ತೊಂದು ಕೈಯಲ್ಲಿ ಬಣ್ಣದ ಕರವಸ್ತ್ರವನ್ನೂ ಹಿಡಿದು. ತಪ್ಪಡೆ ವಾದ್ಯದ ಗತ್ತಿಗೆ ವಿವಿಧ ಭಂಗಿಗಳಲ್ಲಿ ಹೆಜ್ಜೆ ಹಾಕುತ್ತಾ ಕುಣಿಯುತ್ತಾರೆ. ಈ ತಪ್ಪಡೆಗೆ ಮುಸಲ್ಮಾನೀ ಭಾಷೆಯಲ್ಲಿ 'ಡಾಯರಾ' ಎಂದೂ ಕೆಲವು ಕಡೆ ಹೇಳುತ್ತಾರೆ. ಅದನ್ನು ಒಬ್ಬನು ಬಾರಿಸುತ್ತಿದ್ದರೆ. ಉಳಿದವರು ಒಂದು ಕೈಯಲ್ಲಿ ಕರವಸ್ತ್ರವನ್ನು ಹಿಡಿದುಕೊಂಡು ಮತ್ತೊಂದು ಕೈಯಿಂದ ಇನ್ನೊಬ್ಬನ ಕೈ ಹಿಡಿದುಕೊಂಡು ಅಲಾವಿ ಗುಂಡಿಯ ಸುತ್ತ ತಿರುಗಿ ಕುಣಿಯುತ್ತಾರೆ. ರಾತ್ರಿ ಹತ್ತು ಗಂಟೆಯಿಂದ ಬೆಳಗಾಗುವವರೆಗೂ ಈ ಕುಣಿತ ನಡೆಯುತ್ತದೆ.

ಕಲಾವಿದರು ಕುಣಿಯುವಾಗ ಮಧ್ಯೆ ಮಧ್ಯೆ 'ಲಾಯ್ ತೋಯ್ ಧುಯ್' (ಯಾ ಇಮಾಮ್ ಧೀನ್) ಮತ್ತು "ಯಾ ಹುಸೇನ್, ಯಾ ಹುಸೇನ್" ಎಂದು ಕೂಗುತ್ತಾರೆ.

ಬೇರೆ ಬೇರೆ ಕಡೆ ಅಲಾಬಿ ಕುಣಿತದ ಕ್ರಮದಲ್ಲಿ ವ್ಯತ್ಯಾಸಗಳಿದ್ದರೂ ಭಾರತದಲ್ಲೆಲ್ಲಾ ಈ ಕುಣಿತ ಮುಸ್ಲಿಮರಲ್ಲಿ ಪ್ರಚಾರದಲ್ಲಿದೆ.

ಉತ್ತರ ಕರ್ನಾಟಕ ಭಾಗದಲ್ಲಿ ಪ್ರಚಲಿತವಿರುವ ನಂಬಿಕೆ ಪ್ರಕಾರ. ಅಲಾವಿ ಕುಣಿತವು ಹಸನ್–ಹುಸೇನ್ ಎಂಬ ವೀರ ಯುವಕರು ಧರ್ಮಯುದ್ಧದಲ್ಲಿ ಭಾಗವಹಿಸಿ ವೈರಿಗಳನ್ನು ಗೆದ್ದು ಬಂದ ಸಂಕೇತವಾಗಿದೆ. ಕತ್ತಲ ರಾತ್ರಿ ಅಥವಾ ಖತಲ್ ರಾತ್ (ಕೊಲೆ ಮಾಡಿದ ರಾತ್ರಿ) ನಲ್ಲಿ ದೇವರುಗಳನ್ನು ಹೊತ್ತು ಮನೆ ಮನೆಗಳನ್ನು ಊರೂರುಗಳನ್ನು ಸಂಚರಿಸುತ್ತಾರೆ. 'ಚೊಂಗೆ' ಎಂಬ ವಿಶೇಷ ರೀತಿಯ ರೊಟ್ಟಿ ಆಕಾರದ ಸಿಹಿ ತಿಂಡಿ ತಯಾರಿಸಿ ಬಂದ ಭಕ್ತರಿಗೂ ಹಂಚುತ್ತಾರೆ. ಗುಗ್ಗುಳ–ಲೋಬಾನ ಹಾಕುವ ಬೆಂಕಿ ಹಾಕಿದ ಮಣ್ಣಿನ ದೀಪವನ್ನು ಕೊಂಡೊಯ್ಯುತ್ತಾರೆ. ದೇವರುಗಳನ್ನು ಚಾವಡಿಯಲ್ಲಿ ನಾಲ್ಕಾರು

ದಿನ ಕೂಡಿಸಿ ಅದರ ಮುಂದೆ ಅಗ್ನಿಕುಂಡ ನಿರ್ಮಿಸಿ, ಭಕ್ತಿ–ರಭಸಗಳಿಂದ ದೇವರನ್ನು ಹೊತ್ತು ಮೈದುಂಬಿದವರಂತೆ ಕುಣಿಯುತ್ತಾರೆ. ಅಗ್ನಿಕುಂಡ ಹಾಯತ್ತಾರೆ. ಕೊನೆಯ ದಿನ ಸಮೀಪದ ಹಳ್ಳಕ್ಕೆ ದೇವರುಗಳನ್ನು ಒಯ್ದು ಸ್ನಾನ ಮಾಡಿಸಿ ವಿಸರ್ಜನೆ ಶಾಸ್ತ್ರ ಮಾಡಿ, ದುಃಖದ ಹಾಡುಗಳನ್ನು ಹಾಡುತ್ತಾ ಹಿಂತಿರುಗುತ್ತಾರೆ. ಹಸನ್–ಹುಸೇನ್‌ರ ತ್ಯಾಗ, ವೀರ, ಆದರ್ಶಗಳನ್ನು ಈ ಹಾಡುಗಳು ವರ್ಣಿಸುತ್ತವೆ. ಇವುಗಳನ್ನೇ ಕರ್ಬಲ ಹಾಡುಗಳು ಎಂದು ಕರೆಯುತ್ತಾರೆ. ಉತ್ತರ ಕರ್ನಾಟಕದಲ್ಲಿ ಈ ಹಾಡುಗಳು ವಿಶೇಷ ಪ್ರಚಾರದಲ್ಲಿದೆ.

## 7 ಅಲಾಯಿ ಹೆಜ್ಜೆ ಕುಣಿತ

ಮೊಹರಂ ಹಬ್ಬದ ಸಂದರ್ಭದಲ್ಲಿ ಪ್ರದರ್ಶಿಸುವ ಕಲೆಗಳಲ್ಲಿ 'ಅಲಾಯಿ ಹೆಜ್ಜೆ ಕುಣಿತ' ಆಕರ್ಷಕವಾದುದು, ಮೊಹರಂ ಹಬ್ಬದಲ್ಲಿ ದೇವರ ಹಸ್ತದ ಮುಂದೆ ಒಂದು ಗುಂಡಿಯನ್ನು ತೋಡಿ "ಬೆಂಕಿ" ಹಾಕುತ್ತಾರೆ ಇದಕ್ಕೆ 'ಅಲಾವಿ' ಎಂದು ಕರೆಯುತ್ತಾರೆ. (ಅಲಾಬಿ ಕುಣಿತ' ದ ಲೇಖನದಲ್ಲಿ ವಿವರಣೆ ಕೊಟ್ಟಿದೆ.)

'ಅಲಾಯಿ ಹೆಜ್ಜೆ' ಕುಣಿತದಲ್ಲಿ ಹಿಂದೂಗಳು ಭಾಗವಹಿಸುವರು. ಕಲಾವಿದರು ಮೊಣಕಾಲಿನವರೆಗೆ ಏರು ಕಟ್ಟಿದ ಕಚ್ಚೆ ಪಂಚೆ, ಲುಂಗಿ ಧರಿಸಿರುತ್ತಾರೆ. ಸಾಮಾನ್ಯವಾಗಿ ಈ ಪ್ರದರ್ಶನದಲ್ಲಿ 20–30 ಜನ ಕಲಾವಿದರು ಭಾಗವಹಿಸುತ್ತಾರೆ. ಇದರಲ್ಲಿ 24 ಜನ ಹೆಜ್ಜೆ ಹಾಕಿದರೆ ಮಿಕ್ಕವರು ವಾದ್ಯವನ್ನು ನುಡಿಸಿ ಹಾಡು ಹೇಳಿಕೊಡುತ್ತಾರೆ.

ಸುಮಾರು 15 ರಿಂದ 20 ಅಡಿ ಉದ್ದವಿರುವ ಎರಡು ಬಿದಿರು ಕಂಬಗಳನ್ನು ಸುಮಾರು 10 ಅಡಿ ಅಂತರದಲ್ಲಿ ನೆಡುತ್ತಾರೆ. ಅಡ್ಡಲಾಗಿ ಒಂದು ಬಿದಿರು ಕಂಬವನ್ನು ಕಟ್ಟಿರುತ್ತಾರೆ. ಈ ಅಡ್ಡಕಂಬಿಯನ್ನು ಬಣ್ಣದ ಕಾಗದಗಳಿಂದ ತೋರಣ ಕಟ್ಟಿದಂತೆ ಸುಂದರವಾಗಿ ಅಲಂಕರಿಸಿರುತ್ತಾರೆ. ಇದರ ಮಧ್ಯಭಾಗದಲ್ಲಿ ಸಿಕ್ಕಿಸಿದ ಹಲಗೆಯ ಕೊಂಡಿಗಳಿಗೆ ಹಗ್ಗಗಳನ್ನು ಕಟ್ಟಿ ಇಳಿಬಿಟ್ಟಿರುತ್ತಾರೆ. ಹೀಗೆ ಇಳಿಬಿಟ್ಟ ಒಂದೊಂದು ಹಗ್ಗವನ್ನು ಒಬ್ಬೊಬ್ಬ ಕಾಲಾವಿದ ಹಿಡಿದುಕೊಂಡು ವೃತ್ತಾಕಾರವಾಗಿ ನಿಲ್ಲುತ್ತಾನೆ. ಅವರ ಮಧ್ಯಭಾಗದಲ್ಲಿ ನಾಯಕನು ಹಾಡುಗಾರರ ಜೊತೆಯಲ್ಲಿ ನಿಲ್ಲುತ್ತಾರೆ. ವಾದ್ಯಗಾರರು ಹಾರ್ಮೋನಿಯಂ ಮುಖವೀಣೆ, ತಬಲ (ಮೃದಂಗ) ತಾಳವನ್ನು ಬಳಸುತ್ತಾರೆ.

ಹಗ್ಗವನ್ನು ಹಿಡಿದುಕೊಂಡಿರುವ ಕಲಾವಿದರು ನಾಯಕರು ಹೇಳಿಕೊಡುವ ಹಾಡನ್ನು ಹಾಡುತ್ತಾ, ಒಂದು ಲೆಕ್ಕಾಚಾರದ ಹೆಜ್ಜೆ ಹಾಕುವುದರಲ್ಲಿ ಮೊದಲನೆ ಹೆಜ್ಜೆ, ಎರಡನೆ ಹೆಜ್ಜೆ (ಇದನ್ನು 'ಮಕವಸ್ತ್ರ' ಹೀಗೆ ಅನೇಕ ಗತ್ತುಗಳಿವೆ. ಈ ಕಲೆ 'ಜಡೆಕೋಲಾಟ' ಮತ್ತು ಉತ್ತರ ಕನ್ನಡ ಜಿಲ್ಲೆಯ 'ಗೋಪು ಹೆಣೆಯುವ ಕಲೆ' ಯನ್ನು ಹೋಲುತ್ತದೆ.

ಕಲಾವಿದರು ಪೈಗಂಬರರನ್ನು ಕುರಿತು ಹಾಡುವುದಲ್ಲದೆ ಶರಣರ ಪದಗಳನ್ನು ಹಾಡುತ್ತಾರೆ.

## 8. ಕರಡಿ ಮಜಲು ಕುಣಿತ

ಉತ್ತರ ಕರ್ನಾಟಕ ಭಾಗದಲ್ಲಿ ಕಂಡುಬರುವ ಜನಪ್ರಿಯ ಕಲೆ 'ಕರಡಿ ಮಜಲು' ಇದನ್ನೇ ದಕ್ಷಿಣ ಕರ್ನಾಟಕದ ಕಡೆ ಕರಡಿ ಮೇಳ' ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಗಂಡು ದೇವರ ಉತ್ಸವಾದಿ ಕಾರ್ಯಗಳ ಸಂದರ್ಭದಲ್ಲಿ ಈ ಮೇಳ ನಡೆಯುತ್ತದೆ. ಇದು ಉದ್ಯೋಗಿ ಕಲೆಯಾಗಿ ಬೆಳೆದು ಬಂದಿದೆ.

ಜಾತ್ರೆ ಉತ್ಸವಗಳಲ್ಲಿ ದೇವರ ಪೂಜಾ ಸಮಯದಲ್ಲಿ ಮತ್ತು ಧಾರ್ಮಿಕ ಗುರುಗಳನ್ನು ಊರೊಳಗೆ ಬರಮಾಡಿಕೊಳ್ಳುವಾಗ ಕರಡಿ ವಾದ್ಯ ಬಳಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಮದುವೆ. ಹೂ ಮುಡಿಸುವ ಕಾರ್ಯ, ನಾಮಕರಣ ಮುಂತಾದ ಮಂಗಳ ಕಾರ್ಯಗಳಲ್ಲೂ ಬಳಕೆಯಲ್ಲಿದೆ. ಕರಡಿ ವಾದ್ಯದ ಜೊತೆಯಲ್ಲಿ ಸನಾದಿ, ಶೃತಿ, ತಾಳಗಳನ್ನು ಬಳಸಿದರೆ, ಮತ್ತೆ ಕೆಲವು ಕಡೆ ದಿಮ್ಮು, ಚೌಗಡಗಳನ್ನು ಬಳಸುತ್ತಾರೆ.

ಕರಡಿ ವಾದ್ಯದ ಕಲಾವಿದರು ಕಾಸೆಪಂಚೆ ಕಸೆ ಅಂಗಿ, ತಲೆಗೆ ಪೇಟ, ಹಣೆಗೆ ವಿಭೂತಿ ಧರಿಸಿರುತ್ತಾರೆ. ನಡುವಿಗೆ ಕೆಂಪು ವಸ್ತ್ರವನ್ನು ಕಟ್ಟಿರುತ್ತಾರೆ. ನಂದೀಧ್ವಜ ಕುಣಿತಕ್ಕ ಕರಡಿ ವಾದ್ಯದ ಮೇಳ ಬೇಕೇ ಬೇಕು. ಬಡಿತದಲ್ಲಿ ಆದಿ ತಾಳ, ಏಕತಾಳ, ಜಂಪತಾಳ, ಚೌತಾಳ, ಚಾಲು ಬಾರಿಸುವುದು ದೃವತಾಳ, ಸಂಕೀರ್ಣತಾಳ ಮುಂತಾದ ಬಗೆಗಳಿವೆ.

ಕಲಾವಿದರು ಸಾಮಾನ್ಯವಾಗಿ ಅರ್ಧ ವೃತ್ತಾಕಾರವಾಗಿ ನಿಂತು ಹಿಂದಕ್ಕೆ ಮುಂದಕ್ಕೆ ಬಾಗುತ್ತಾ ವಾದ್ಯಗಳನ್ನು ನುಡಿಸುವ ರೀತಿ ರಂಜನೀಯ ನಿಧಾನವಾಗಿ ಪ್ರಾರಂಭವಾದ ಕರಡಿಮಜಲಿನ ಗತ್ತು–ಗತಿಗಳು ಹಂತ ಹಂತವಾಗಿ ಏರಿ ಕ್ರಮೇಣ ಅದೇ ಗತಿಯಲ್ಲಿ ನಿಧಾನವಾಗಿ ಮುಕ್ತಾಯವಾಗುತ್ತವೆ. ಇದರಲ್ಲಿ ಒಂದ್ಹೆಜ್ಜೆ ಕುಣಿತ, ಎರಡ್ಹೆಜ್ಜೆ ಕುಣಿತ ಮೂರ್ಹೆಜ್ಜೆ ಕುಣಿತ, ಮಂಡಲ ಕುಣಿತ ಮುಂತಾದ ಗತ್ತುಗಳಿವೆ. ಕೆಲವು ಕಲಾವಿದರು ಕುಳಿತು ಬಾರಿಸುವುದು, ಮಂಡಿ ಬಡಿತ ಮುಂತಾದ ಪ್ರಕಾರಗಳನ್ನು ತೋರಿಸುತ್ತಾರೆ.

## 9. ಕೀಲು ಕುದುರೆ

ಕರ್ನಾಟಕ ನಾನಾ ಭಾಗಗಳಲ್ಲಿ ಪ್ರಚಲಿತವಿರುವ ಜನಪ್ರಿಯ ಕುಣಿತವಿದು ಕೊಡಗಿನಲ್ಲಿ ಇದನ್ನು 'ಪೊಯ್ ಕುದುರೆ' ಎನ್ನುತ್ತಾರೆ. ಜನಪದ ಕಥೆಗಳಲ್ಲಿ ರಾಜಕುಮಾರ ತಾನು ಪ್ರಿಯತಮೆಯನ್ನು ಗುಟ್ಟಾಗಿ ಸಂದರ್ಶಿಸುವಾಗ, ಇಲ್ಲವೆ ಆಕೆಯನ್ನು ಅಪಹರಿಸಿಕೊಂಡು ಹೋಗುವಾಗ ಕೀಲು ಕುದುರೆಯನ್ನುಬಳಸುವ ಕಲ್ಪನೆಯಿದೆ. ಏಳು ಉಪ್ಪರಿಗೆ ಅರಮನೆ ಮೇಲೆ ಸುರಕ್ಷಿತಳಾಗಿರುವ ರಾಜಕುಮಾರಿ ಸಾಮೀಪ್ಯವನ್ನು ಆಕೆಯ ಪ್ರಿಯತಮ ಅಂತರಿಕ್ಷೆ ಮಾರ್ಗವಾಗಿ ಬಂದು ಸೇರಲು ಕೀಲುಕುದುರೆಯನ್ನು ಉಪಯೋಗಿಸುತ್ತಾನಂತೆ! ಕೀಲುಕುದುರೆಯನ್ನು ಮುಖ್ಯವಾಗಿ ತೆಳುವಾದ ಬಿದಿರಿನ ದಬ್ಬೆಗಳಿಂದ ಹೆಣೆದು ರೂಪಿಸುತ್ತಾರೆ. ತಲೆ ಮತ್ತು ಕತ್ತನ್ನು ಮಾತ್ರ ಆಯಾ ಪ್ರದೇಶದ ಗ್ರಾಮ ಕಲಾವಿದರು. ಸಾಮಾನ್ಯವಾಗಿ ಅಕ್ಕಸಾಲಿಗರು ಇಲ್ಲವೆ ಚಿತ್ರಗಾರರು ಮಾಡಿಕೊಡುತ್ತಾರೆ. ಕುದುರೆಯ ತಲೆಯನ್ನು ಕಾಗದದ ಹಿಟ್ಟಿನಿಂದ ರಚಿಸಿರುತ್ತಾರೆ. ಇದು ಟೊಳ್ಳಾಗಿರುತ್ತದೆ. ತಲೆಯ ಭಾಗಕ್ಕೆ ಸ್ವಾಭಾವಿಕವಾದ ಬಣ್ಣ ಹಚ್ಚಿ ಬಿದಿರಿನ ಮುಂಡಕ್ಕೆ ಸೇರಿಸಿರುತ್ತಾರೆ. ಕುಣಿಯುವಾಗ ಕುದುರೆ ನಾಲಿಗೆ ಮೇಲಕ್ಕೆ ಕೆಳಕೆ ಆಡುವಂತೆ ಕೀಲನ್ನು ಅಳವಡಿಸಿರುತ್ತಾರೆ. ಕೀಲು ಕುದುರೆ ಕುಣಿಸುವವ ಮರಗಾಲು ಕಟ್ಟಿಕೊಂಡಿರುತ್ತಾನೆ. ಈ ಮರದ ಕಾಲುಗಳನ್ನು ಎರಡು ಅಡಿ ಉದ್ದದ ಹಗುರು ಮರದಿಂದ ಮಾಡಿ ಅದರ ಮೇಲೆ ಕಲಾವಿದರ ಕಾಲುಗಳನ್ನು ಕೂರಿಸಲು ಅನುಕೂಲವಾಗುವಂತೆ ಕಂಡು ಮಾಡಿರುತ್ತಾರೆ. 'ಕೋಡಿನ' ಭಾಗವನ್ನು ಕಾಲಿಗೆ ಮಧ್ಯೆ ಒತ್ತದಂತೆ ಬಟ್ಟೆ ಇಟ್ಟು ಬಿಗಿಯಾಗಿ ಕಟ್ಟಿರುತ್ತಾರೆ. ಕುದುರೆಯ ಆಕೃತಿಗೆ ಹೊದಿಸುವ ಉದ್ದವಾದ ಗೌನು ಬಣ್ಣ ಬಣ್ಣದ್ದಾಗಿರುತ್ತದೆ. ಅದು ಕುದುರೆಯ ದೇಹದ ಜೊತೆಗೆ ನರ್ತಕನ ಮರದ ಕಾಲುಗಳನ್ನು ಮುಚ್ಚಿರುತ್ತದೆ.

ವೇಷಭೂಷಣ ಧರಿಸಿದ ಕಲಾವಿದ ಈ ಕುದುರೆಯ ಬೆನ್ನಿನಲ್ಲಿ ಸೇರಿ ತನ್ನೆರಡು ಹೆಗಲುಗಳಿಗೆ ಕುದುರೆಯ ದಬ್ಬೆಯ ದೇಹವನ್ನು ಬಿಗಿದುಕೊಳ್ಳುತ್ತಾನೆ. ಲಗಾಮು ಕೈಯಲ್ಲಿ ಹಿಡಿದುಕೊಂಡು ಅದರ ತಲೆ ಬಾಲಗಳನ್ನು ಆಡಿಸುತ್ತ ಹಿಂದು ಮುಂದು ಮಾಡಿ ಕುಣಿದಾಗ ಕುದುರೆಯೇ ಸಹಜ ಭಂಗಿಯಲ್ಲಿ ಕುಣಿದಂತೆ ಕಾಣುತ್ತದೆ.

ಕೀಲುಕುದುರೆ ಕಲಾವಿದರು ರಾಜ ರಾಣಿಯರಂತೆ ಕಿರೀಟ, ಭುಜಕೀರ್ತಿ ಎದೆಹಾರ, ನಡುಬಿಲ್ಲೆ ವೀರಗಾಸೆ ಇತ್ಯಾದಿ ರಾಜಯೋಗ್ಯವಾದ ವೇಷಭೂಷಣ ತೊಟ್ಟಿರುತ್ತಾರೆ. ಮುಖಕ್ಕೆ ಬಣ್ಣ ಬಳಿದುಕೊಂಡು ಕಾಲಿಗೆ ಗೆಜ್ಜೆ ಕಟ್ಟಿ ಕುಣಿಯುತ್ತಾರೆ. ಸಾಮಾನ್ಯವಾಗಿ ಈ ಕುಣಿತದಲ್ಲಿ ಒಬ್ಬರು ಗಂಡು, ಒಬ್ಬರು ಹೆಣ್ಣು

ವೇಷ ಹಾಕಿ ಜೊತೆಯಾಗಿ ಕುಣಿಯುವ ರೂಢಿಯಿದೆ. ಕೆಲವು ಭಾಗಗಳಲ್ಲಿ ಕೀಲು ಕುದುರೆಯ ಜೊತೆಗೆ ನವಿಲಿನ ಆಕೃತಿಗಳನ್ನು ತಗಲಿಸಿಕೊಂಡ ನರ್ತಕರು ಸೇರಿಕೊಳ್ಳುವುದುಂಟು.

ನಾಗಸ್ವರ ಡೋಲು ತಮಟೆ ಇವು ಪಕ್ಕ ವಾದ್ಯಗಳು, ಕರಡಿ ಮಜಲನ್ನೂ ಬಳಸುವುದುಂಟು ಇತ್ತೀಚೆಗೆ ಬ್ಯಾಂಡ್ ಸೆಟ್ ಉಪಯೋಗವು ಕಂಡುಬರುತ್ತದೆ. ಹಬ್ಬ ಹರಿದಿನಗಳಲ್ಲಿ ಹಳ್ಳಿಯ ಬಯಲಲ್ಲಿ ದೇವರ ಉತ್ಸವ, ಮದುವೆ, ಮೆರವಣಿಗೆ ಮುಂತಾದ ಸಂತೋಷ ಸಮಾರಂಭಗಳಲ್ಲಿ ಪ್ರದರ್ಶನ ನಡೆಯುತ್ತದೆ.

# 10. ದುಮ್ಮಾಲಿ ಮೇಳ ಕುಣಿತ

ಉತ್ತರ ಕರ್ನಾಟಕದ ಬೋವಿ ಸಮಾಜದಲ್ಲಿ ಪ್ರಚಲಿತವಿರುವ ಕಲೆ 'ದುಮ್ಮಾಲಿ' ಮೇಳ ಇದನ್ನು 'ದಿಮ್ಮಿ ಮೇಳ' ಎಂದು ಕರೆಯುವುದೂ ಉಂಟು. ವಂಶಪಾರಂಪರ್ಯವಾಗಿ ಬೆಳೆದು ಬಂದಿರುವ ಈ ಮೇಳ ಕಲಾವಿದರು ದೃಷ್ಟಿಯಲ್ಲಿ ದೈವೀ ಆರಾಧನೆಯ ಕಲೆ. ಇದನ್ನು 'ಶಿವಭಜನೆ' ಎಂದು ಕರೆಯುತ್ತಾರೆ.

ಮುರುಗಮ್ಮ ತಾಯಿ ಇವರ ಆರಾಧ್ಯ ದೇವತೆ, ಮುರುಗಮ್ಮನಿಗೆ ಇರುವುದು ಒಂದು ಸಣ್ಣ ಗುಡಿ. ಆ ಗುಡಿಯ ಮುಂದೆ ಕಲಾವಿದರು ಪ್ರತಿನಿತ್ಯವೂ ಸಂಜೆ ಸೇರಿ ದೇವಿಯ ಸಮ್ಮುಖದಲ್ಲಿ ದಿಮ್ಮಿ ಹಿಡಿದು ಹಾಡಿ ಕುಣಿಯುತ್ತಾರೆ. ದಿಮ್ಮಿಗಳೊಂದಿಗೆ ಹಾಡಿ ಕುಣಿಯುವುದರಿಂದ ಇದು 'ದುಮ್ಮಾಲಿ ಮೇಳ'ವಾಗಿದೆ. ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಮದುವೆ ಮುಂತಾದ ಮಂಗಳ ಕಾರ್ಯಗಳಲ್ಲಿ ಕಲಾಪ್ರದರ್ಶನ ನೀಡುತ್ತಾರೆ. ಸಾಮಾನ್ಯವಾಗಿ ಪ್ರದರ್ಶನದಲ್ಲಿ ಹತ್ತು ಹನ್ನೆರಡು ಮಂದಿ ಇದ್ದು ಪ್ರತಿಯೊಬ್ಬರೂ ಒಂದೊಂದು ದಿಮ್ಮಿಯನ್ನು ಹಿಡಿದಿರುತ್ತಾರೆ.

ಕಲಾವಿದರೆಲ್ಲರೂ ಬಿಳಿಯ ಸಮವಸ್ತ್ರವನ್ನು ಧರಿಸಿ ಕಾಲಿಗೆ ಗೆಜ್ಜೆ ಕಟ್ಟಿರುತ್ತಾರೆ. ತಂಡದ ನಾಯಕ ವಿಶೇಷವಾದ ಉಡುಪನ್ನು ಧರಿಸಿರುತ್ತಾನೆ. ಭುಜದಿಂದ ಅಡ್ಡವಾಗಿ ಟೊಂಕಕ್ಕೆ ಬರುವಂತೆ ಒಂದು ಬಣ್ಣದ ಜರಿಯ ವಸ್ತ್ರದ ಪಟ್ಟಿ ಕಟ್ಟಿಕೊಂಡಿರುತ್ತಾನೆ. ಮೇಳದ ನಿರ್ದೇಶಕ ಈ ಮುಖ್ಯಸ್ಥನೇ. ವಿನೋದಕ್ಕಾಗಿ ಒಬ್ಬನು ಹೆಣ್ಣಿನ ವೇಷಧರಿಸಿ ಕುಣಿಯುವುದೂ ಉಂಟು. ನಾಯಕ ಕೃಷ್ಣನೆಂದೂ, ಹೆಣ್ಣು ವೇಷಧಾರಿ 'ರಾಧೆ'ಯೆಂದೂ ಅವರ ನಂಬಿಕೆ.

ಕುಣಿತಕ್ಕೆ ದಿಮ್ಮಿಯನ್ನು ಕೈಯಲ್ಲಿ ಹಿಡಿದ ಕಲಾವಿದರು ವೃತ್ತಾಕಾರವಾಗಿ ನಿಲ್ಲುತ್ತಾರೆ. ನಾಯಕ ದಿಮ್ಮಿಯನ್ನು ಹೊಟ್ಟೆಗೆ ಕಟ್ಟಿಕೊಂಡು ಎರಡೂ ಕೈಗಳಿಂದ ಬಾರಿಸುತ್ತಾನೆ. ಇವನ ನಿರ್ದೇಶನದಲ್ಲಿ ಉಳಿದ ಕಲಾವಿದರು ಹಾಡುತ್ತಾ ವಾದ್ಯದ ಗತ್ತಿಗೆ ತಕ್ಕಂತೆ ಹೆಜ್ಜೆ ಹಾಕುತ್ತಾ ಕುಣಿಯುತ್ತಾರೆ. ಹಾಡಿನಲ್ಲಿ ತಮ್ಮ ಆರಾಧ್ಯ ದೇವತೆಯನ್ನು ಸ್ಮರಿಸುತ್ತ, 'ಮುರುಗಮ್ಮ ತಾಯಿಯೇ ನಮ್ಮನ್ನೆಲ್ಲ ರಕ್ಷಿಸುವವಳು ಅವಳ ಕರುಣೆಯಿಂದ ಸರ್ವರೋಗಗಳು ನಾಶವಾಗುವುವು. ಮಳೆ ಬೆಳೆಯಾಗಿ ದೇಶ ಸುಭಿಕ್ಷವಾಗುವುದು. ಎಂದು ದೇವಿಯ ಮಹಿಮೆಯನ್ನು ಕೊಂಡಾಡುತ್ತಾರೆ. ಕುಣಿತದ ಹತ್ತಾರು ಗತ್ತುಗಳಲ್ಲಿ ಲೇಜಿಮ ಹೆಜ್ಜೆ, ಶವಪಾತ, ಕುದುರೆ ಹೆಜ್ಜೆ. ಸುಲಾಪುರದ ಹಜ್ಜೆ ಮೊದಲಾದವು ಪ್ರಮುಖವಾದವು.

ದುಮ್ಮಿ ವಾದ್ಯಕ್ಕೆ ಹದ ಮಾಡಿದ ಎಳೆಯ ಕೋಣದ ಚರ್ಮವನ್ನು ಬಳಸುತ್ತಾರೆ. ಈ ಚರ್ಮವನ್ನು ಕಬ್ಬಿಣದ ಬಳೆಗೆ ಬಿಗಿದು ಭದ್ರಪಡಿಸುವುದರಿಂದ ಇಂಪಾದ ನಾದ ಮೂಡಿಬರುತ್ತದೆ. ದಿಮ್ಮಿಯನ್ನು ಬಡೆಯುವ ಕಡ್ಡಿಗೆ **'ಕೊಳಪ'** ಎಂದು ಹೆಸರು. **'ಖಣಿ'** ಎಂದು ಕರೆಯುವುದೂ ಉಂಟು.

# 11. ನಂದೀಧ್ವಜ ಕುಣಿತ

ಶೈವ ಸಂಪ್ರದಾಯದ ನೃತ್ಯಗಳಲ್ಲಿ 'ನಂದೀಧ್ವಜ ಕುಣಿತ' ಒಂದು ಗಂಡು ಕಲೆ. ಕೊಡಗು ಕರಾವಳಿ ಪ್ರದೇಶವನ್ನು ಬಿಟ್ಟರೆ ಕರ್ನಾಟಕದ ಬಹುತೇಕ ಭಾಗಗಳಲ್ಲಿ ಈ ಕಲೆ ರೂಢಿಯಲ್ಲಿದೆ. ಕಲಾವಿದರು 'ಶಿವಭಕ್ತಿ' ಸಂಪ್ರದಾದವರು.

ನಂದೀಧ್ವಜದ ಉಗಮಕ್ಕೆ ಕಲಾವಿದರು ಹೇಳುವ ಪೌರಾಣಿಕ ಹಿನ್ನೆಲೆ ಹೀಗಿದೆ: ದಕ್ಷಯಾಗವನ್ನು ಧ್ವಂಸ ಮಾಡಲು ಬಂದ ವೀರ ಮಹಾರುದ್ರ (ವೀರಭದ್ರ) ಯಾಗದ ಅಧ್ವರ್ಯುಗಳನ್ನು ಖಂಡಿಸಿ ರುಂಡ ಹಾರಿಸಿದ. ದಕ್ಷನ ಪರಿವಾರವೆಂದು ಅವರನ್ನೆಲ್ಲ ಕೊಂದ ಬಳಿಕ ಅವರು ಶಿವ ಭಕ್ತರೆಂದು ತಿಳಿಯುತ್ತದೆ. ಆಗ ಅವರಿಗೆ ಶ್ರೇಷ್ಠ ಸ್ಥಾನ ಕೊಡಬೇಕೆಂದು ಯೋಚಿಸಿ. ವ್ಯಾಸನ ತೋಳನ್ನು ಕೋಲನ್ನಾಗಿ ಮಾಡಿ, ಅದಕ್ಕೆ ಶಿವನ ವಾಹನವಾದ ನಂದಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿದ, ಋಷಿಗಳ ರುಂಡಗಳನ್ನು 'ಹಂಡೆ'ಗಳಾಗಿ ಮಾಡಿ ಆ ನಂದೀ ಕೋಲಿಗೆ ತೊಡಿಸಿದ ಮಹಾದ್ವಾರದಲ್ಲಿದ ಸಿಂಹವನ್ನು ತಂದು ಅದರ ಚರ್ಮದಲ್ಲೇ ಧ್ವಜ ಹೀಗೆ ರೂಪುಗೊಂಡ ಧ್ವಜವನ್ನೇ ಮುಂದುಮಾಡಿಕೊಂಡು ವಿಜಯಘೋಷದೊಂದಿಗೆ ಕೈಲಾಸಕ್ಕೆ ಹಿಂತಿರುಗಿದ ಅಂದಿನಿಂದ 'ನಂದೀಧ್ವಜ' ಶಿವಭಕ್ತರ 'ಧರ್ಮಧ್ವಜ'ವೂ ಆಯಿತು.

ನಂದೀ ಧ್ವಜಕ್ಕೆ ನಂದೀ ಕೋಲು' ನಂದೀ ಕಂಬ 'ಬಿರಡೆ ಕಂಬ' ವ್ಯಾಸಗೋಲು' ಎಂದು ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯುವುದೂ ಉಂಟು. ಉದ್ದದ ಕೋಲು ಅಥವಾ ಕಂಬಕ್ಕೆ ಹಿತ್ತಾಳೆಯ ಬಿರಡೆಗಳನ್ನು ಅಲಂಕರಿಸುವುದರಿಂದ 'ಬಿರಡೆ ಕಂಬ' ಎಂದು ಕರೆಯುತ್ತಾರೆ.

ಶಾಸ್ತ್ರೀ ನಂದೀಧ್ವಜದ ಕೋಲು ಹದಿನೆಂಟು ಮೊಳ ಎತ್ತರವಿರುತ್ತದೆ. ಒಂದೊಂದು ಮೊಳವೂ ಒಂದೊಂದು ಧರ್ಮದ ಸಂಕೇತ ಎನ್ನುತ್ತಾರೆ. ನಂದೀ ಕೋಲು ಒಂದು ಬಿದಿರಿನ ಬೊಂಬು. ಅದರ ವ್ಯಾಸ ಮೂರರಿಂದ ನಾಲ್ಕು ಅಂಗುಲ ಇರುತ್ತದೆ. ಬೊಂಬಿಗೆ ಹಿತ್ತಾಳೆಯ 'ಹಂಡೆ' ಗಳನ್ನು ತೊಡಿಸಿರುತ್ತಾರೆ. ಪ್ರತಿ ಎರಡು ಹಂಡೆಗಳ ಮಧ್ಯೆ ಒಂದು ಹಿತ್ತಾಳೆಯ ಕೊಳಗ ವಿರುತ್ತದೆ. ಈ ಹಂಡೆ–ಕೊಳಗಗಳ (ಇವಕ್ಕೆ 'ಹರಡಿ'–ಗಗ್ಗರ' ಎಂದು ಕರೆಯುತ್ತಾರೆ.)ಸಂಖ್ಯೆಯೂ ತಲಾ ಹದಿನೆಂಟಿರಬೇಕು ಎನ್ನುತ್ತಾರೆ. ಇವುಗಳ ಮಧ್ಯೆ ಅಲ್ಲಲ್ಲಿ ಹಿತ್ತಾಳೆ ಕುಚ್ಚಿನ ತಟ್ಟೆಗಳೂ ಇರುತ್ತವೆ. ಇವು ಪ್ರತ್ಯೇಕವಾಗಿದ್ದರೂ ಇರಬಹುದು ಇಲ್ಲವೇ ಹಂಡೆ ಅಥವಾ ಕೊಳಗಗಳಿಗೆ ಹೊಂದಿಕೊಂಡಿರಬಹುದು. ಕಂಬದ ತುದಿಗೆ

ಕಟ್ಟುವ ಕಾವಿ ಬಣ್ಣದ ರೇಷ್ಮೆ ಬಟ್ಟೆಯೇ ಪಟ ಅಥವಾ ಧ್ವಜ. ಇದೂ ಹದಿನೆಂಟು ಮೊಳವಿರುತ್ತದೆ. ನಂದೀ ಕೋಲಿನ ತಟ್ಟ ತುದಿಯಲ್ಲಿ ಹಿತ್ತಾಳೆ ಅಥವಾ ಬೆಳ್ಳಿಯ ಛತ್ರಿ ಜೋಡಿಸಲ್ಪಟ್ಟಿರುತ್ತದೆ. ಈ ಛತ್ರಿಯ ತುದಿಯೇ ನಂದೀ ಕೋಲಿಗೆ ಕಳಸ. ಧ್ವಜದ ತುದಿಯಂಚಿಗೆ ರೇಷ್ಮೆ ದಾರದ ಕುಚ್ಚಿನ ಅಲಂಕಾರ ವಿರುತ್ತದೆ. ಬುಡದಿಂದ ಮೂರು ನಾಲ್ಕು ಅಡಿ ಬಿಟ್ಟರೆ ನಂದೀ ಕೋಲಿನ ಬೊಂಬು ಪೂರ್ಣವಾಗಿ ಈ ತೊಡಿಗೆಗಳಿಂದ ತುಂಬಿಕೊಂಡಿರುತ್ತದೆ. ಕಂಬದ ಸುಮಾರು ಐದಾರು ಅಡಿ ಎತ್ತರದಲ್ಲಿ ಹಲಗೆಯನ್ನು ಬಂಧಿಸಿ ಬೆಳ್ಳಿಯ ಕವಚ ತೊಡಿಸಿದ ನಂದಿ ಮೂರ್ತಿಯನ್ನು ಸ್ಥಾಪಿಸಲಾಗಿರುತ್ತದೆ. ಇದಕ್ಕೆ ವೀರಭದ್ರನ ಹಲಗೆ' ಎಂದೂ ಹೇಳುತ್ತರೆ. ನಂದೀ ಧ್ವಜದ ಈ ರಚನೆಯನ್ನು ಗಮನಿಸಿದಾಗ ಕಲಾವಿದುರು ಹೇಳುವ ಪೌರಾಣಿಕ ಹಿನ್ನೆಲಗೆ ಅರ್ಥವಿದೆಯೆಂದೆನಿಸುತ್ತದೆ.

ಉತ್ತರ ಕರ್ನಾಟಕದ ಕೆಲವು ಕಡೆ ನಂದೀ ಕೋಲಿನ ರಚನೆಯೇ ಬೇರೆ ಸುಮಾರು 25 ರಿಂದ 30 ಅಡಿ ಉದ್ದದ ಬಿದಿರಿನ ಗಳಕ್ಕೆ ಕಪ್ಪು ಅಥವಾ ನೀಲಿ ಬಣ್ಣ ಬಳಿದಿರುತ್ತದೆ. ಅದಕ್ಕೆ ಹಂಡೆ ಕೊಳಗ, ರೇಷ್ಮೆ ಬಟ್ಟೆಗಳ ಅಲಂಕಾರವೇನೂ ಇರುವುದಿಲ್ಲ. ಕೋಲಿಗೆ ಅಲ್ಲಲ್ಲಿ ಬೆಳ್ಳಿಯ ಕಟ್ಟುಗಳನ್ನು ಹೋಲುವಂತೆ ಬಿಳಿಯ ಬಣ್ಣದ ಸುತ್ತು ಪಟ್ಟೆಗಳಿರುತ್ತವೆ. ತುದಿಯಲ್ಲಿ ಒಂದು ಸಣ್ಣ ಮಂಟಪ ಗೋಪುರ ರಚಿಸಿ ಅದಕ್ಕೆ ಹೂವಿನ ಸಿಂಗಾರ ಮಾಡಿರುತ್ತಾರೆ.

ಗಂಡುಗಚ್ಚೆಯ ಪಂಚೆ ಅಥವಾ ಧೋತ್ರ, ಕಸೆಯಂಗಿ, ತಲೆಗೆ ಪೇಟ ಅಥವಾ ರುಮಾಲು ಹಣೆಗೆ ವಿಭೂತಿ ಇದಿಷ್ಟು ನಂದೀಧ್ವಜ ಕುಣಿತದವರ ವೇಷಭೂಷಣ ಕುಣಿಯುವಾತ ಸೊಂಟದ ಸಮೀಪಕ್ಕೆ ಬರುವಂತೆ ಒಂದು ಪಟ್ಟಿ ಚೀಲವನ್ನು ಹೆಗಲಿನಿಂದ ಇಳಿಬಿಟ್ಟುಕೊಳ್ಳುತ್ತಾನೆ. ಇದರ ಹೆಸರು 'ನವಾರ' ನಂದೀ ಕೋಲು ಹಿಡಿದಿಟ್ಟುಕೊಳ್ಳಲು ಇದೇ ಆಧಾರ. ನಂದೀ ಕೋಲಿನ ಬುಡವನ್ನು ನವಾರದಲ್ಲಿ ಸಿಕ್ಕಿಸಿ ಕೈಗಳಿಂದ ಕೋಲನ್ನು ಸಮತೂಕದಲ್ಲಿ ಹಿಡಿದು ಬಿದ್ದರೆ ಕುಣಿಯುವವನ ಮನೆತನಕ್ಕೂ ಸಮಾಜಕ್ಕೋ ಕೇಡಾಗುವುದೆಂಬ ನಂಬಿಕೆ ಇರುವುದರಿಂದ ಮಣಗಟ್ಟಲೆ ಭಾರವಿದ್ದರೂ ನಂದೀ ಕೋಲನ್ನು ಬಹು ಎಚ್ಚರಿಕೆಯಿಂದ ಹೊತ್ತು ಹಿಡಿದಿರುತ್ತಾರೆ. ಸಮತೂಕ ತಪ್ಪುವ ಸಂದರ್ಭವಿದ್ದಾಗ ಅನಿಕೆಗೆ ನೆರವಾಗಲು ಅಕ್ಕಪಕ್ಕದಲ್ಲಿ ಒಬ್ಬೊಬ್ಬರಿರುತ್ತಾರೆ. ಇದಕ್ಕಾಗಿ ಕೋಲಿನ ಮಧ್ಯ ಭಾಗಕ್ಕೆ ಉದ್ದ ಹಗ್ಗ ಕಟ್ಟಿ ಎಳೆದು ಹಿಡಿದುಕೊಳ್ಳುವುದೂ ಉಂಟು.

ನಂದೀಧ್ವಜ ಕುಣಿತಕ್ಕೆ ಶಕ್ತಿಯಷ್ಟೇ ಯುಕ್ತಿಯೂ ಬೇಕು. ಕೆಲವು ಕಡೆ ಹತ್ತು ಹನ್ನೆರಡು ವರ್ಷದ ಹುಡುಗರೂ ಅದನ್ನು ಹಿಡಿದು ಕುಣಿಯುವುದನ್ನು ನೋಡಿದಾಗ ಶಕ್ತಿಗಿಂತ ಯುಕ್ತಿಯೇ ಹೆಚ್ಚು

ಬೇಕೆಂದೆನಿಸುತ್ತದೆ. ವಾದ್ಯಗಳ ಗತ್ತಿಗೆ ಸರಿಯಾಗಿ ಹೆಜ್ಜೆ ಹಾಕುತ್ತ ಕೋಲನ್ನು ಸಮತೂಕದಲ್ಲಿ ನಿಲ್ಲಿಸಿಕೊಂಡು ಕುಣಿಯುವುದಕ್ಕೆ ಸಾಕಷ್ಟು ಅಭ್ಯಾಸ ಬೇಕು. ಕೆಲವು ಅನುಭವಿ ಕಲಾವಿದರು ನಂದೀ ಕೋಲು ಅಷ್ಟು ಭಾರವಿದ್ದರೂ ಎದೆ, ಹೆಗಲು, ಹಣೆ ಅಂಗೈಗಳ ಮೇಲೆ ನಿಲ್ಲಿಸಿಕೊಂಡು ಲೀಲಾಜಾಲವಾಗಿ ಕುಣಿಯುವುದನ್ನು ನೋಡಿದರೆ ಸೋಜಿಗವೆನಿಸುತ್ತದೆ. ಎರಡೆರಡು ನಂದೀ ಧ್ವಜಗಳನ್ನು ಒಬ್ಬರೇ ಹೊತ್ತು ಕುಣಿಯುವ ಸಾಹಸಿಗಳೂ ಇದ್ದಾರೆ.

ನಂದೀಧ್ವಜ ಹೊತ್ತು ಕುಣಿಯುವಾಗ ನಂದೀ ಕೋಲಿನಲ್ಲಿ ಸಿಂಗಾರವಾದ ಹಿತ್ತಾಳೆ ಹಂಡೆಗಳು, ಕೊಳಗಗಳು ಕುಚ್ಚುಪಟ್ಟೆಗಳು ತಾಳ ಹಾಕಿದಂತೆ ಸದ್ದು ಮಾಡುತ್ತವೆ. ಕುಣಿತದ ಬೆಡಗಿರುವುದೇ ಈ ಸದ್ದಿನಲ್ಲಿ ಶಾಸ್ತ್ರೀಯ ನಂದೀಧ್ವಜ ಕುಣಿತಕ್ಕೆ ಕರಡೆ, ಚಮ್ಮೇಳ, ನಗಾರಿ, ನಾಗಸ್ವರಗಳ ಹಿಮ್ಮೇಳವಿರುತ್ತವೆ. ಉತ್ತರ ಕರ್ನಾಟಕದ ಕೆಲವು ಕಡೆ ತಾರಸಿ. ತಮಟೆ ಅಥವಾ ಹಲಗೆ ಬಾರಿಸುತ್ತಾರೆ.

ನಂದೀಧ್ವಜ ಹಿಡಿಯುವವರು ಸಾಮಾನ್ಯವಾಗಿ ಸ್ನಾನಮಾಡಿ ಮಡಿಯುಟ್ಟು ಬಂದು ಮೊದಲು ನಂದೀ ಕಂಬಕ್ಕೆ 'ಸನಿ' ಮಾಡಿ (ಎರಡೂ ಕೈ ತುದಿ ಬೆರಳುಗಳಿಂದ ಕಂಬವನ್ನು ಮುಟ್ಟಿ ಆ ಬೆರಳುಗಳನ್ನು ಹಣೆಗೆ ಒತ್ತಿಕೊಳ್ಳುವುದು ಹೀಗೆ ಮೂರು ಸಲ ಮಾಡುತ್ತಾರೆ.) ನಂತರ ಅದನ್ನು ನವಾರದಲ್ಲಿ ಇಟ್ಟುಕೊಂಡು ಕುಣಿಯತೊಡಗುತ್ತಾರೆ. ಒಮ್ಮೊಮ್ಮೆ ವಾದ್ಯಗಳ ದನಿ ತ್ವರಿತ ತಾರಕಕ್ಕೆ ಹೋದಾಗ ಕಲಾವಿದನ ಮೈಯಲ್ಲಿ ಆವೇಶ ತುಂಬಿಕೊಳ್ಳುತ್ತದೆ. ಅವನ ಕುಣಿತದ ಗತಿಯೂ ಅಷ್ಟೇ ತೀವ್ರಗೊಳ್ಳುತ್ತದೆ. ಆ ದೃಶ್ಯ ನಿಜಕ್ಕೂ ರೋಮಾಂಚಕಾರಿ ನಂದೀಧ್ವಜ ಕುಣಿತದಲ್ಲಿ ಒಂದ್ದೆಜ್ಜೆ, ಎರಡ್ಡೆಜ್ಜೆ ಮೂರೆಜ್ಜೆ ನಾಲ್ಕೆಜ್ಜೆ, ತಿರುಣಿ ಹೀಗೆ ನಾಲ್ಕೈದು ಗತ್ತುಗಳಿವೆ. ಈ ಗತ್ತುಗಳಿಗೆ ತಕ್ಕಂತೆ ವಾದ್ಯಗಳ ರಾಗ ಬಡಿತಗಳೂ ವ್ಯತ್ಯಾಸವಾಗುತ್ತವೆ.

ಜಾತೆ ಉತ್ಸವಗಳಲ್ಲಿ ನಂದೀಧ್ವಜಕ್ಕೆ ಮುಂಚೂಣಿ ಸ್ಥಾನ ಮುಂದೆ ನಂದೀಧ್ವಜ ಇದ್ದರೇ ಮೆರವಣಿಗೆಗೆ ಸೊಬಗು ಎತ್ತರದಲ್ಲಿ ಎದ್ದು ಕಾಣುವ ನಂದೀಧ್ವಜ ಘನತೆ ಗೌರವಗಳ ಸಂಕೇತ: ಆತ್ಮಾಭಿಮಾನದ ಪ್ರತೀಕ ವೀರಶೈವ ಸಂಪ್ರದಾಯದಲ್ಲಿ ಧಾರ್ಮಿಕ ಗುರುಗಳನ್ನು ಸ್ವಾಗತಿಸುವಾಗಲೂ ನಂದೀಧ್ವಜ ಕುಣಿತ ಪ್ರದರ್ಶಿಸುವುದುಂಟು.

# 12. ಪಂಡರಿ ಭಜನೆ

ಹಿಂದೆ ಪಾಂಡುರಂಗನ ದರ್ಶನಕ್ಕಾಗಿ ಪಂಡರಾಪುರಕ್ಕೆ ಹೋಗಲು ಭಕ್ತರು ಬಹಳ ದೂರ ನಡೆಯಬೇಕಾಗಿತ್ತು. ಬಸ್ಸು ರೈಲು ಮುಂತಾದ ಸಂಚಾರ ಸೌಲಭ್ಯಗಳಿಲ್ಲದಿದ್ದ ಆ ಕಾಲದಲ್ಲಿ ಪಯಣವನ್ನು ಸಾಗಿಸಲು ಅವರು ಅಲ್ಲಲ್ಲಿ ತಂಗುತ್ತಿದ್ದರು. ಯಾತ್ರಾರ್ಥಿಗಳಾಗಿ ಹೊರಟ ಭಕ್ತರ ಗುಂಪೇ ಒಂದು ಭಜನಾ ಮೇಳವಾಗುತ್ತಿತ್ತು. ಹೀಗೆ ಯಾತ್ರೆಗೆ ಗುಂಪಿನಲ್ಲಿ ಹೊರಟ ಭಜನಾ ಮೇಳಕ್ಕೆ 'ದಿಂಡಿ' ಎಂಬ ಹೆಸರಿದೆ. ನಿಯಮಿತವಾಗಿ ಯಾತ್ರೆ ಹೊರಡುವುದಕ್ಕೆ 'ವಾರಿ' ಎಂದೂ ಯಾತ್ರಿಕರಿಗೆ 'ವಾರಕರಿ' ಎಂದೂ ಹೇಳುತ್ತಾರೆ. ಇವರು ದಾರಿಯಲ್ಲಿ ತಂಗಿದ್ದ ಸ್ಥಳಗಳಲ್ಲಿ ಪಾಂಡುರಂಗನನ್ನು ಕುರಿತು ಭಜನೆ ಮೇಳವನ್ನು ಕೈಗೊಳ್ಳುತ್ತಿದ್ದರು. ಈ ಭಜನೆ ಮುಂದೆ ಒಂದು ಸಂಪ್ರದಾಯವಾಗಿ ಬೆಳೆದು. ಹಳ್ಳಿ ಹಳ್ಳಿಗಳಲ್ಲಿ ಅಂತಹಾ ಭಜನಾ ತಂಡಗಳು, ಮಂಡಳಿಗಳು ರೂಪುಗೊಂಡವು. ಇದು ಇಂದಿನ 'ಪಂಡರಿ ಭಜನೆ' ಗೆ ಮೂಲ.

ಕರಾವಳಿ ಪ್ರದೇಶ ಬಿಟ್ಟರೆ ಬಹುತೇಕ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ ಪಂಡರಿ ಭಜನಾ ತಂಡಗಳಿವೆ.

ಪಂಡರಿ ಭಜನೆ ಪ್ರದರ್ಶನ ತಂಡದಲ್ಲಿ ಇಂತಿಷ್ಟೇ ಜನರಿರಬೇಕೆಂಬ ನಿಯಮವಿಲ್ಲ 10–12 ಜನರಿಂದ 30–40 ಜನರವರೆಗಿನ ಗುಂಪುಗಳು ಪ್ರದರ್ಶನ ನೀಡುತ್ತವೆ. ಕಲಾವಿದರಿಗೆ ಜಾತಿ ಮತಗಳ ಕಟ್ಟಾಗಲಿ ವಯಸ್ಸಿನ ಮಿತಿಯಾಗಲಿ ಇಲ್ಲ. ಎಲ್ಲ ಮತಗಳು, ಎಲ್ಲ ವಯಸ್ಸಿನ ಹೆಣ್ಣು ಗಂಡಾದಿಯಾಗಿ ಕಲೆಯಲ್ಲಿ ಭಾಗವಹಿಸುತ್ತಾರೆ.

ಈ ಕಲೆ ಪ್ರಚಲಿತವಿರುವ ಕಡೆಗಳಲ್ಲಿ ಪ್ರಮುಖವಾಗಿ ಬೇಸಾಯಗಾರರು. ಉಳಿದ ಗುಂಪು ಮಾಡಿಕೊಂಡು ಇದನ್ನು ಒಂದು ಹವ್ಯಾಸಿ ಕಲೆಯನ್ನಾಗಿ ಬೆಳಸಿಕೊಂಡು ಬಂದಿದ್ದಾರೆ. ಕಲಾವಿದರು ಸಾಮಾನ್ಯವಾಗಿ ಪ್ರತಿಫಲ ನಿರೀಕ್ಷಿಸುವುದಿಲ್ಲ. ಆದರೆ ಕಲೆಯನ್ನು ಕಲಿಸುವ ಗುರುವಿಗೆ ಸಂಭಾವನೆ ಕೊಡಬೇಕಾಗುತ್ತದೆ. ಏಕೆಂದರೆ ಅವನಿಗೆ ಇದೇ ವೃತ್ತಿ.

ಪಂಡರಿ ಭಜನೆಯವರು ಸಾಮಾನ್ಯವಾಗಿ ಸಮವಸ್ತ್ರ ಧರಿಸುತ್ತಾರೆ. ಹಸಿರು ಕೆಂಪು ಅಥವಾ ಹಳದಿ ಬಣ್ಣದ ಸಡಿಲವಾದ ಮೇಲಂಗಿ, ಬಿಳಿಯ ಪೈಜಾಮ ಅಥವಾ ಕಾಶೀದೋತ್ರ ಉಡುತ್ತಾರೆ. ಅಂಗಿಯನ್ನು ಮೇಲೆ ಬಿಟ್ಟು ಸೊಂಟಕ್ಕೆ ಕೆಂಪು. ಹಸಿರು ಅಥವಾ ನೀಲಿ ಬಣ್ಣದ ಚೌಕ ಅಥವಾ ಮುಕುಟವನ್ನು ಕಟ್ಟಿ ಪಕ್ಕಕ್ಕೆ ಚುಂಗುಬಿಡುತ್ತಾರೆ. ಹಣೆಗೆ ನಾಮ. ಕೊರಳಿಗೆ ಹೂವಿನ ಹಾರ. ಕಾಲಿಗೆ ಗೆಜ್ಜೆ ಏರುಮುಡಿ ಕಟ್ಟಿದ

ಹೂವಿನ ಹಾರ. ಕಾಲಿಗೆ ಗೆಜ್ಜೆ ಏರುಮುಡಿ ಕಟ್ಟಿದ ತಲೆ. ಕೈಯಲ್ಲಿ ರುದ್ರಾಕ್ಷಿ, ಹೆಗಲಿಗೆ ತಗಲಿಹಾಕಿಕೊಂಡ ಬಣ್ಣದ ಸಣ್ಣ ಬಿಲ್ಲು ಕೈಯಲ್ಲಿ ಒಂದೇ ಬಣ್ಣದ ಚಿಕ್ಕ ಬಾವುಟ– ಇವು ಸಾಮಾನ್ಯ ವೇಷಭೂಷಣ ಭಜನೆಯ ವಿಷಯ ವೈವಿಧ್ಯವನ್ನನುಸರಿಸಿ ಯಶೋಧ–ಕೃಷ್ಣ ಗೋಪಿ–ಮಕರಂದ ಮುಂತಾದ ಪಾತ್ರಗಳಿಗೊಪ್ಪುವ ವೇಷಗಳನ್ನು ಆಳವಡಿಸಿಕೊಳ್ಳುವುದೂ ಉಂಟು ಸಂತರ ಅಭಂಗಗಳನ್ನು ವಾಡಿಕೆಯಾಗಿ ಬಳಸಿಕೊಳ್ಳಲಾಗುತ್ತದೆ.

ಹಿನ್ನೆಲೆಯಲ್ಲಿ ಬಳಸುವ ವಾದ್ಯ ವಿಶೇಷಗಳಲ್ಲಿ ಹಾರ್ಮೋನಿಯಂ ತಾಳ, ತಬಲ, ಗೆಜ್ಜೆ, ಡಕ್ಕೆ, ಮದ್ದಳೆ ಮುಖ್ಯವಾದವು ಹಬ್ಬ, ಹುಣ್ಣಿಮೆ, ಸುಗ್ಗಿ ಮುಂತಾದ ಸಂದರ್ಭಗಳಲ್ಲಿ ಮನರಂಜನೆಯ ಸಾಧನವಾಗಿ ಪಂಡರಿ ಭಜನೆ ಪ್ರದರ್ಶನವಾಗುತ್ತದೆ. ತಗ್ಗು–ತಿಟ್ಟಿಲ್ಲದ ಸಮತಲದ ವಿಶಾಲವಾದ ಸ್ಥಳದಲ್ಲಿ ಮಧ್ಯೆ ಪಾಂಡುರಂಗನ ಭಾವಚಿತ್ರ, ದೀವಿಗೆ ತುಂಬಿದ ತಂಬಿಗೆ ಇಟ್ಟು ಪೂಜೆ ಸಲ್ಲಿಸಿದ ನಂತರ ಆಯಾ ಪ್ರದರ್ಶನಕ್ಕೆ ತಕ್ಕಂತೆ ಕಲಾವಿದರು ವೃತ್ತಾಕಾರದಲ್ಲಿ ಬಾವುಟಗಳನ್ನು ಹಿಡಿದು ನಿಲ್ಲುತ್ತಾರೆ. ಮಧ್ಯೆ ನಿಲ್ಲುವ ಗುರು(ಕಲೆಯ ನಿರ್ದೇಶಕ) ವಿನ ಮಾರ್ಗ ದರ್ಶನದಲ್ಲಿ ಗಣಪತಿ ಶಾರದೆ ಸ್ತುತಿಯಾದ ಮೇಲೆ ಪಾಂಡುರಂಗನ ಸ್ತುತಿ ಆರಂಭವಾಗುತ್ತದೆ. ನಿರ್ದೇಶಕ ಹೇಳಿದ ಮುಮ್ಮೇಳದ ಸೊಲ್ಲಿಗೆ ಅನುಗುಣವಾಗಿ ಉಳಿದ ಕಲಾವಿದರ ಲಯಬದ್ದ ಕಾಲುಗೆಜ್ಜೆ ಕೈಯತಾಳ ಗುಂಪುಹಾಡು ಮೇಳಗೂಡುತ್ತದೆ.

ಕೋಲಾಟದ ಮಾದರಿಯಲ್ಲಿ ವಿವಿಧ ಭಾವಭಂಗಿಗಳ ಕುಶಲ ಅಭಿನಯಗಳೂ ಈ ಕಲೆಯಲ್ಲಿ ಕೂಡಿಕೊಂಡಿವೆ. ಕೆಲವು ಕಲಾ ತಂಡದವರು ಒಂದೆರಡು ಘಂಟೆಗಳಿಂದ ಹಿಡಿದು ಇಡೀ ರಾತ್ರಿ ಹಾಡಿ ಅಭಿನಯಿಸುವಂತಹ ಪ್ರಸಂಗಗಳನ್ನು ರೂಢಿಮಾಡಿಕೊಂಡಿರುತ್ತಾರೆ. ಒಂದೇ ವಯಸ್ಸಿನ, ಒಂದೇ ಎತ್ತರದ ಮಕ್ಕಳನ್ನೇ ಕೂಡಿಸಿ ತರಬೇತು ಕೊಟ್ಟು ತೋರಿಸುವ ಪಂಡರೀ ಭಜನೆಯ ಪ್ರದರ್ಶನ ತುಂಬ ಆಕರ್ಷಕವಾಗಿರುತ್ತದೆ.

ಪಂಡರಿ ಭಜನೆ ವಾರಕ್ಕೊಮ್ಮೆ ಅಥವಾ ಅವಕಾಶವಾದರೆ ಪ್ರತಿದಿನ ಸಂಜೆ ಊರ ದೇವರ ಗುಡಿಯಲ್ಲಿ ನಡೆಯುತ್ತದೆ. ತೇರು ಜಾತ್ರೆಗಳಲ್ಲಿ ವಿಶೇಷ ಪ್ರದರ್ಶನಗಳಿರುತ್ತವೆ. ಗ್ರಾಮಕ್ಕೊದಗಿದ ಸಾಂಕ್ರಾಮಿಕ ಪಿಡುಗುಗಳು, ಅತಿವೃಷ್ಟಿ, ಅನಾವೃಷ್ಟಿಗಳ ಪರಿಹಾರಕ್ಕಾಗಿಯೂ ಪಂಡರಿ ಭಜನೆ ಏರ್ಪಡಿಸುವುದುಂಟು ಪ್ರತಿ ಏಕಾದಶಿ ಪಂಡರಿ ಭಜನೆಯವರಿಗೆ (ವಾರಿಕಾರರು) ಶುಭದಿನವಾಗಿದ್ದರೂ ಆಷಾಢ–ಕಾರ್ತಿಕ ಏಕಾದಶಿಗಳು ವಿಶೇಷ.

ಪಂಡರಿ ಭಜನೆ ಪಾಂಡುರಂಗನ ಆರಾಧನೆ, ಪಾಂಡುಗಂಗನೆಂದರೆ ಶಿವ–ವಿಷ್ಣು ಇಬ್ಬರ ಸಂಗಮ, ಲೌಕಿಕರ ಕಲ್ಯಾಣವನ್ನು ಚಿಂತಿಸುವ ಸಲುವಾಗಿ ಕೃಷ್ಣನು ರುಕ್ಮಿಣಿ ಸಮೇತನಾಗಿ ಚಂದ್ರಬಾಗೆಯೆನಿಸಿರುವ ಭೀಮಾತೀರದಲ್ಲಿ ನೆಲೆಸಿದ್ದಾನೆ ಎಂಬ ನಂಬಿಕೆ ಸಂತರಲ್ಲಿದೆ.

## 13. ಪುಗಡಿ ಕುಣಿತ

ಉತ್ತರ ಕನ್ನಡ ಜಿಲ್ಲೆಯ ಕಾರವಾರ ಅಂಕೋಲಾ, ಕುಮಟಾ ಮೊದಲಾದ ಕರಾವಳಿ ತಾಲ್ಲೂಕುಗಳಲ್ಲಿ ಕ್ಷತ್ರಿಯ ಕುಮಾರ ಪಂತ್, ಹರಪಂತ್, ಅಂಬಿಗ ಈ ವರ್ಗದ ಮಹಿಳೆಯರಲ್ಲಿ 'ಪುಗಡಿ' ಕುಣಿತ ಕಂಡು ಬರುತ್ತದೆ. ಬರಿದಾದ ನೀರಿನ ಕೊಡವನ್ನು ಬಾಯ ಬಳಿ ಹಿಡಿದು 'ಪೊವ್, ಪೊವ್' ಎಂದು ಶ್ವಾಸ ಬಿಟ್ಟು ಕೊಡದ ಒಳಗೆ ಪ್ರತಿಧ್ವನಿಸುವಂತೆ ಊದುತ್ತ ಕುಣಿಯುವುದೇ 'ಪುಗಡಿ ಕುಣಿತ'

ಕೃಷ್ಣಾಷ್ಟಮಿ–ಗಂಗಾಷ್ಟಮಿ, ಗಣೇಶ ಚತುರ್ಥಿ, ಶಿವ ರಾತ್ರಿ ಮುಂತಾದ ಹಬ್ಬಗಳಲ್ಲಿ ಮಗು ಜನಿಸಿದ 11ನೇ ದಿನ ಮಗುವನ್ನು ತೊಟ್ಟಿಲಿಗೆ ಹಾಕುವಾಗ ಈ ಕಲೆಯನ್ನು ಪ್ರದರ್ಶಿಸುತ್ತಾರೆ. ಬೆಳಗಾಂ ಜಿಲ್ಲೆಯಲ್ಲಿ ಪ್ರಚಲಿತವಿರುವ ಕೊಡದ ಕುಣಿತ'ವನ್ನೇ ಹೋಲುತ್ತಿದ್ದರೂ ಪುಗಡಿ ಕುಣಿತದಲ್ಲಿ ಪಾಲುಗೊಳ್ಳುವವರೆಲ್ಲ ಮಹಿಳೆಯರೇ.

ನಿತ್ಯದ ಉಡುಪಿನಲ್ಲಿ ಭಾಗವಹಿಸುವ ಕಲಾವಿದೆಯರು ಹಾಡು ಹೇಳಿಕೊಂಡು ಕುಣಿಯುತ್ತಾರೆ. ಹಾಡು ಹೇಳುತ್ತಾ ಕುಣಿಯುವಾಗ ಹಿನ್ನೆಲೆಯಾಗಿ ಬಳಸುವ ವಾದ್ಯಗಳೆಂದರೆ ಮನೆಯಲ್ಲಿ ಮರಿಗೆ ಮತ್ತು ಕಂಚಿನ ಬಟ್ಟಲುಗಳು. ಪ್ರದರ್ಶನದಲ್ಲಿ ಭಾಗವಹಿಸುವ ಪ್ರತಿಯೊಬ್ಬರ ಕೈಯಲ್ಲೂ ಒಂದೊಂದು ಕೊಡ ಇರಬೇಕಾಗುತ್ತದೆ. ಮರದ ಮರಿಗೆ ಸುಮಾರ 15 ರಿಂದ 20 ಅಂಗುಲ ಅಗಲ, ಮೂರು ಅಡಿ ಉದ್ದವಿರುವ ಮರದ ಕಾಂಡವನ್ನು ತೋಡಿ ತೆಗೆದು ಸಿದ್ಧಗೊಳಿಸಿದ ಒಂದು ಸಾಧನ. ಇದರ ಎರಡು ತುದಿ ಅರ್ಧ ವರ್ತುಲಾಕಾರವಾಗಿ ಇಲ್ಲವೇ ಚೌಕಾಕಾರವಾಗಿದ್ದು ಎರಡು ತುದಿಯನ್ನು ಹಿಡಿದುಕೊಂಡು ಎತ್ತಲು ಅನುಕೂಲವಾಗುವಂತೆ ತೊಟ್ಟು (ಹಿಡಿಕೆ) ಗಳಿರುತ್ತವೆ. ದೊಡ್ಡ ದೊಡ್ಡ ಔತಣ ಸಮಾರಂಭದಲ್ಲಿ ಅನ್ನ ಬಸಿಯಲು ಈ ಮರಿಗೆಯನ್ನು (ಇದಕ್ಕೆ ಅನ್ನ ಬಸಿಯುವ ಮರಿಗೆ ಎಂದು ಕರೆಯುತ್ತಾರೆ.) ಬಳಸುತ್ತಾರೆ. ಕಂಚಿನ ಬಟ್ಟಲು ಜಾಗಟೆ ಯಾಗುತ್ತದೆ. ಕೆಲವು ಕಡೆ ಸುಗ್ಗಿ ಕುಣಿತದಲ್ಲಿ ಬಳಸುವ 'ಗುಮಟೆ' ಯನ್ನು ಬಳಸುವುದು ಉಂಟು.

'ಕುಮಾರ ಪಂತ್'ರಲ್ಲಿ ಮಗುವನ್ನು ತೊಟ್ಟಿಲಿಗೆ ಹಾಕುವಾಗ ರಾತ್ರಿಯ ವೇಳೆಯಲ್ಲಿ ಈ ಕುಣಿತ ನಡೆಯುತ್ತದೆ. ಸಾಂಪ್ರದಾಯಕವಾದ ಈ ಪ್ರದರ್ಶನ ನಡೆಯುವುದು ಬಾಣಂತಿಯ ಕೋಣೆಯಲ್ಲಿ. ಈ ಕುಣಿತವನ್ನು ನೋಡಲು ಗಂಡಸರಾರಿಗೂ ಅವಕಾಶವಿಲ್ಲದಿದ್ದರೂ ಕುತೂ ಹಲಿಗಳಾದ ಕೆಲವರು ಹೇಗಾದರೂ ಮಾಡಿ ಕುಣಿತವನ್ನು ನೋಡುವ ಅವಕಾಶವನ್ನು ಕಲ್ಪಿಸಿಕೊಳ್ಳುತ್ತಾರೆ.

ಮಗುವನ್ನು ತೊಟ್ಟಿಲಿಗೆ ಹಾಕುವ ರಾತ್ರಿ ನೆರೆ–ಹೊರೆಯ ಹೆಂಗಸರೆಲ್ಲ ಬಾಣಂತಿ ಕೋಣೆಯಲ್ಲಿ ಸೇರುತ್ತಾರೆ. ಪ್ರಾರಂಭದಲ್ಲಿ ಪೂಜೆ, ನೈವೇದ್ಯ ನಡೆದ ಮೇಲೆ, ಬಾಣಂತಿಯೇ ಸಿದ್ದ ಪಡಿಸಿದ ಅನ್ನ ಪಾಯಸವನ್ನು ಊಟ ಮಾಡುವ ಆಕೆಯ ನಾದಿನಿ, ಅತ್ತಿಗೆಯರಿಗೆ ಉಡುಗರೆಯಿತ್ತು ಗೌರವಿಸುತ್ತಾರೆ. ನಂತರ ಕುಣಿತ ಆರಂಭವಾಗುತ್ತದೆ.

ಒಬ್ಬಳು ಕಂಚಿನ ಬಟ್ಟಲನ್ನು ಬಲಗೈಯಲ್ಲಿ ಹಿಡಿದು, ಎಡಗೈಯಲ್ಲಿ ಚಿಕ್ಕ ಕೋಲನ್ನು ಹಿಡಿದು ಜಾಗಟೆಯಂತೆ ಬಾರಿಸಿದರೆ, ಇನ್ನೊಬ್ಬಳು ಮರಿಗೆಯನ್ನು ದಬ್ಬು ಹಾಕಿಕೊಂಡು ಅದರ ಬೆನ್ನು ಭಾಗದ ಮೇಲೆ ಚಿಕ್ಕ ಕೋಲಿನಿಂದ ಉಜ್ಜತೊಡಗುತ್ತಾಳೆ. ಅದರಿಂದ ಒಂದು ರೀತಿಯ ನಾದ ಹೊಮ್ಮುತ್ತದೆ. ಈ ಹಿಮ್ಮೇಳದ ಗತ್ತಿಗೆ ಉಳಿದವರು ಕುಣಿಯುತ್ತಾರೆ.

ಕುಣಿತದಲ್ಲಿ ಎಷ್ಟು ಜನ ಕಲಾವಿದೆಯರು ಬೇಕಾದರೂ ಭಾಗವಹಿಸಬಹುದು. ಕೈಯಲ್ಲಿ ಕೊಡವನ್ನು ಹಿಡಿದು ಅದರ ಬಾಯನ್ನು ತಮ್ಮ ಬಾಯ ಬಳಿ ಹಿಡಿದು 'ಪೋವ್ ಪೊವ್' ಎಂದು ಊದುತ್ತ ಲಯಬದ್ಧವಾಗಿ ತಾಳ ತಪ್ಪದಂತೆ ಕತ್ತು ಸೊಂಟಗಳನ್ನು ಬಾಗಿಸಿ ಬಳುಕಿಸುತ್ತಾ ಹಲವು ಭಂಗಿಗಳಲ್ಲಿ ಕುಣಿಯುತ್ತಾರೆ. ಈ ಕುಣಿತದಲ್ಲಿ ಮಹಿಳೆಯರೇ ಭಾಗವಹಿಸುವುದರಿಂದ ನಿಸ್ಸಂಕೋಚದಿಂದ ಸ್ವಚ್ಛಂದವಾಗಿ ಕುಣಿಯುತ್ತ ಮೈಮರೆಯುತ್ತಾರೆ. ಎಷ್ಟೋ ವೇಳೆ ಕುಣಿತದ ಮಧ್ಯೆ ಕೆಲವರು ಪ್ರಜ್ಞೆ ತಪ್ಪಿ ಬೀಳುವುದೂ ಉಂಟು ಈ ರೀತಿ ಪ್ರಜ್ಞೆ ತಪ್ಪಿ ಬೀಳುವುದಕ್ಕೆ 'ಶೆಟ್ಟಿ ಬರುವುದು' ಎನ್ನುತ್ತಾರೆ. ಪ್ರಜ್ಞೆ ತಪ್ಪಿ ಬಿದ್ದವಳನ್ನು ಬಾಣಂತಿಯು ತನ್ನ ಕೈಯಿಂದ ಸ್ಪರ್ಶಿಸಿದರೆ ತಕ್ಷಣ ಎಚ್ಚರ ಬರುತ್ತದಂತೆ

ಈ ಕುಣಿತ ಗುಂಪಿನಲ್ಲಿ ನಡೆದಂತೆ ಬೇರೆ ಬೇರೆಯಾಗಿ ಒಬ್ಬೊಬ್ಬರೇ ಸುತ್ತಿ ತಿರುಗುತ್ತಾ ಕುಣಿಯುವುದೂ ಉಂಟು. ಇಂತಹ ಒಂಟಿ ಕುಣಿತದ ಜೊತೆಗೆ ಹಾಡು ಹಾಡುವುದಿಲ್ಲ. ಕುಣಿಯುವವರು ಕುಣಿ ಕುಣಿದು ಸಾಕಾಗಿ ದಣಿದು ಇಲ್ಲವೇ ಮನಸ್ಸಿಗೆ ತೃಪ್ತಿಯಾದಾಗ ನಿಲ್ಲಿಸುತ್ತಾರೆ.

ಕೆಲವು ಕಡೆ ಗಣೇಶ ಚತುರ್ಥಿಯ ಸಂದರ್ಭದಲ್ಲಿ ಚೌತಿ ಪಂಚಮಿಗಳಂದು ಹಾಡು ಹೇಳಿಕೊಂಡು ಕೈ ಕೈ ಹಿಡಿದು ವೃತ್ತಾಕಾರವಾಗಿ ತಿರುಗುತ್ತ ವೈವಿಧ್ಯಮಯವಾಗಿ ಕುಣಿಯುತ್ತಾರೆ. ಕುಣಿತಕ್ಕೆ ಹಿನ್ನೆಲೆಯಾಗಿ ಗುಮಟೆ, ತಾಸಮಾರು, ತಾಳ ಹಾಗೂ ತೆಂಬರೆಗಳನ್ನು ಬಾರಿಸುವುದೂ ಉಂಟು,

ಈ ಕುಣಿತದವರು ತಂಡ ಕಟ್ಟಿಕೊಂಡು ಊರಿನಲ್ಲಿರುವ ಮನೆ ಮನೆಗೆ ಹೋಗಿ ಪ್ರದರ್ಶನ ನೀಡುವುದು ರೂಢಿಯಲ್ಲಿದೆ.

# 14. ಲಂಬಾಣಿ ಕುಣಿತ

ಕರ್ನಾಟಕದಲ್ಲಿ 'ಲಂಬಾಣಿ' ಒಂದು ವಿಶಿಷ್ಟ ಜನಾಂಗ ರಾಜಾಸ್ಥಾನದ ಪರಂಪರೆಯವರೆಂದು ಹೇಳಲಾಗುವ ಈ ಜನ ಕರ್ನಾಟಕದ ನಾನಾ ಭಾಗಗಳಲ್ಲಿ ಹರಡಿಕೊಂಡಿದ್ದಾರೆ. ಇವರಿಗೆ 'ಬಂಜಾರ' ಬಂಜಾಲಿಗ' ಸುಕಾಲಿಗ' 'ಲಮಾಣಿ' ಎಂಬ ಹೆಸರುಗಳೂ ಇವೆ.

ಲಂಬಾಣಿಗಳು ಕಷ್ಟ ಜೀವಿಗಳು, ಇವರು ಸಾಮಾನ್ಯವಾಗಿ ತಮ್ಮದೇ ಆದ ವಸತಿ ತಾಣ ಮಾಡಿಕೊಂಡು ಇರುವುದೇ ಹೆಚ್ಚು ಇಂತಹ ವಸತಿ ತಾಣಗಳೇ 'ಲಂಬಾಣಿ ತಾಂಡ್ಯ' ಗಳು, ಸೇವಾಬಾಯಿ' ಇವರ ತಾಂಡ್ಯಕ್ಕೆ ರಕ್ಷಾದೇವತೆ, ಲಂಬಾಣಿಗಳು ಸ್ವಾಭಿಮಾನಿಗಳು; ಭಿಕ್ಷೆ ಬೇಡುವುದು ಇವರ ಧರ್ಮಕ್ಕೆ ವಿರುದ್ದ ತಮ್ಮ ಸಮಾಜದ ಕಟ್ಟು ಕಟ್ಟಳೆಗಳನ್ನು ಇವರು ಬಿಟ್ಟವರಲ್ಲ. ಪರಸ್ಪರ ವಿರಸ ತಲೆ ದೋರಿದಾಗ ತಮ್ಮಲ್ಲಿಯೇ ಪರಿಹರಿಸಿಕೊಳ್ಳುವ ವಿವೇಕ ಶಾಲಿಗಳು. ತಾಂಡ್ಯದ ನಾಯಕನೇ ಇವರ ನ್ಯಾಯಾಧೀಶ

ಲಂಬಾಣಿಗಳು ಎಷ್ಟು ಕಷ್ಟ ಜೀವಿಗಳೋ ಅಷ್ಟೇ ಸರಸಿಗಳು, ಇವರ ತಾಂಡ್ಯಕ್ಕೆ ಹೋದರೆ ಆ ಸರಸದ ಸಂಭ್ರಮ ನೋಡಬಹುದು ಲಂಬಾಣಿ ಮಹಿಳೆಯರ ಕುಣಿತ ಈ ಜನಾಂಗದ ಸಾಂಸ್ಕೃತಿಕ ಪರಂಪರೆ. ತಾಯಿ 'ಸೇವಾಬಾಯಿ' ಯನ್ನು ಕೊಂಡಾಡುತ್ತಾ ನೊರೆಂಟು ಹಾಡು ಹೇಳಿಕೊಂಡು ಇವರು ಕುಣಿಯುವ ಬೆಡಗು ಕಣ್ಣಿಗೆ ಹಬ್ಬ

ವೇಷಭೂಷಣಗಳಲ್ಲಿ ಲಂಬಾಣಿ ಮಹಿಳೆಯರು ಇತರರಿಗಿಂತ ಪ್ರತ್ಯೇಕವಾಗಿಯೇ ನಿಲ್ಲುತ್ತಾರೆ. ಕೆಂಪು ಬಣ್ಣದ ಲಂಗ (ಪೇಟಿಯಾ) ಅದರ ಮೇಲೆ ಮತ್ತು ಅಂಚಿನಲ್ಲಿ ಸೊಗಾಸಾದ ಕಸೂತಿ ಕೆಲಸ. ಲಂಗದ ಬಡಲಿನಲ್ಲಿ ಸೇರಿಸಿ ಹೊಲಿದಿರುವ ಗಾಜಿನ ಬಿಲ್ಲೆಗಳು, ಬಟ್ಟೆಯ ತುಂಡುಗಳನ್ನು ಕಲಾತ್ಮಕವಾಗಿ ಹೊಂದಿಸಿ ಕಸೂತಿ ಹಾಕಿದ ಕುಪ್ಪಸ (ಕಾಂಚೋಳಿ) ತಲೆಯ ಮೇಲಿಂದ ಮೇಲು ಸೆರಗಿನಂತೆ ಇಳಿಬಿಟ್ಟ (ರುಂಡ ಮತ್ತು ಮುಂಡದ ಹಿಂಭಾಗವನ್ನು ಅವರಿಸುವ) ರಂಗು ರಂಗಿನ ಮೇಲುವಸ್ತ್ರ (ಚಾಂಟ್ಯ) ಈ ಮೇಲು ವಸ್ತ್ರಕ್ಕೂ ಗಾಜಿನ ಬಿಲ್ಲೆಗಳು ಹಾಗೂ ಕುಸುರಿ ಕೆಲಸದ ಅಲಂಕಾರದ ಜೊತೆಗೆ ಅದರ ಅಂಚಿನಲ್ಲಿ ಚಿಕ್ಕ ಬೆಳ್ಳಿ ಗೆಜ್ಜೆಗಳ ಸರ ಜೋಡಿಸಲ್ಪಟ್ಟಿರುತ್ತದೆ. ಸಾಮಾನ್ಯವಾಗಿ ಕೆಂಪು ಅಥವಾ ನೀಲಿ ಇವರ ಬಟ್ಟೆಯ ಬಣ್ಣ.

ಇನ್ನು ಇವರ ಭೂಷಣಗಳೆಂದರೆ ಕೈಗಳಿಗೆ ಅಗಲ ಪಟ್ಟಿಯ ದಂತದ ಬಳೆಗಳು, ಇವಕ್ಕೆ ಧಾರವಾಡದ ಕಡೆ 'ಭಲ್ಯ' ಎಂದು ಕರೆದರೆ ಗುಲ್ಬರ್ಗದವರು ಚೂಡಿ ಎನ್ನುತ್ತಾರೆ. ಕೆಲವು ಕಡೆ 'ಮಾಡ್ಯ' ಎನ್ನುವ ಕಂಚಿನ ಬಳೆ ಧರಿಸಿರುತ್ತಾರೆ. ಕೈಕಾಲು ಬೆರಳುಗಳಿಗೆ ಬೆಳ್ಳಿ ನಾಣ್ಯ ಬೆಸೆದು ಮಾಡಿದ ಉಂಗುರ, ಇವಕ್ಕೆ 'ವೀಂಟೀ' ಚಾಲಾ ವೀಂಟೀ' ಪೂಲಾ' ಎಂಬ ಹೆಸರುಗಳೂ ಇವೆ. ಕೊರಳಲ್ಲಿ ಧರಿಸುವ ಲೋಹದ ಹಾರಗಳಲ್ಲಿ ರಫಿಯಾಹಾರ' ಎಂಬ ಸರ ಬಹಳ ಮುಖ್ಯವಾದುದು, ಇನ್ನೊಂದು ಎದೆಹಾರಕ್ಕೆ ಬಳಿ ಚಂದ್ರ' ಅಥವಾ ವಾಂಕ್ಯ' ಎನ್ನುತ್ತಾರೆ. ಬೇಸರಿ ಅಥವಾ 'ಪುರಿ' ಎಂದು ಕರೆಯಲಾಗುವ ಮೂಗುತಿ ಲಂಬಾಣಿ ಮಹಿಳೆಯರ ಮುಖದ ಸೊಗಸಿಗೆ ಮತ್ತಷ್ಟು ಬೆಡಗುಂಟುಮಾಡುತ್ತದೆ. ಸಾಮಾನ್ಯವಾಗಿ ಈ ಮೂಗುತಿ ಹಿತ್ತಾಳೆ ಅಥವಾ ಬೆಳ್ಳಿಯದು. ಇದರ ಅಂಚಿಗೆ ಮುತ್ತು ಬಿಗಿದಿರಬಹುದು: ಇಲ್ಲವೇ ಅದೇ ಲೋಹವನ್ನು ಮುತ್ತಿನಾ ಕೃತಿಯಲ್ಲಿ ಬಿಡಿಸಿರಬಹುದು.

ಎರಡು ಬದಿಯ ಕೆನ್ನೆಗಳ ಮೇಲೆ ಇಳಿಬಿಟ್ಟ ಕೂದಲಿನ ಕುಚ್ಚಿಗೆ ಹೆಣೆದು ಜೋಡಿಸಿರುವ ಕೆನ್ನೆಗೆಜ್ಜೆ (ಚೋಟ್ಲೆ) ಹಣೆಯ ಮೇಲೆ 'ಟೀಕಿ' ತಲೆಗೆ ಗುಗ್ಗರಿ,' ಚಾಟಿಯಾ' ಸಿಂಗಾರ ಕಾಲಿಗೆ ದೊಡ್ಡ ಆಕಾರದ ಬೆಳ್ಳಿಯ ಕಾಲುಗಡಗ ಈ ಕಾಲುಗಡಗಕ್ಕೆ ಧಾರವಾಡದ ಕಡೆ ಕೋಲ್ಪ' ಎಂದೂ ಬಳ್ಳಾರಿ ಕಡೆ ಗ್ಯಾಂಜೆ' ಎಂದೂ ಗುಲ್ಬರ್ಗದ ಕಡೆ 'ಕಲ್ಡ' ಎಂದೂ ಕರೆಯುತ್ತಾರೆ. ಕಾಲುಗಡಗದ ಜೊತೆಗೆ ದಂತದ ಬಳೆಗಳು ಇರುತ್ತವೆ. ಕಾಲುಬೆರಳಿಗೆ, ಬೆಳ್ಳಿ ಯುಂಗುರ ಸೊಂಟಕ್ಕೆ ಕಸೂತಿಯ ಕಡಿವಸ್ತ್ರ (ವಾಡಾರ್) ರಟ್ಟೆಗೆ 'ಕಸೋಲಿಯೇ' ಎನ್ನುವ ಒಂದು ರೀತಿಯ ಬಳೆ, ಕಾಲಿಗೆ ಸಣ್ಣ ಗೆಜ್ಜೆ ಸರ, ಸೊಂಟದಲ್ಲಿ ಎಲೆ ಅಡಿಕೆ ಇಟ್ಟುಕೊಳ್ಳುವ ಚೀಲ (ಪೂತಡಿಯಾ), ಇಷ್ಟೆಲ್ಲಾ ವೇಷಭೂಷಣಗಳ ಜೊತೆಗೆ ಲಂಬಾಣಿ ಮಹಿಳೆಯರು ತೋಳು, ಹಣೆ ಮತ್ತು ಕೆನ್ನೆಗಳಲ್ಲಿ ಕಲಾತ್ಮಕ 'ಅಚ್ಚೆ' ಯನ್ನು ಹುಯಿಸಿಕೊಂಡಿರುತ್ತಾರೆ.

ವೇಷಭೂಷಣಗಳೇ ಕಣ್ಣಿಗೆ ಇಷ್ಟೊಂದು ಹಬ್ಬವುಂಟು ಮಾಡಿದರೆ ಇನ್ನು ಅವರ ಕುಣಿತವೆಂದರೆ ಕೇಳಬೇಕೆ? ಸಂಜೆಯಾದರೆ ತಮ್ಮ 'ಹಟ್ಟಿ'ಯಲ್ಲಿ ಸುತ್ತುಕಟ್ಟಿಕೊಂಡು ಹಾಡಿ ಕುಣಿಯುತ್ತಾರೆ. ಕುಣಿತಕ್ಕೆ ಇಷ್ಟೆ ಜನರಿರಬೇಕೆಂಬ ನಿಯಮವೇನೂ ಇಲ್ಲ. ಮೂರು ನಾಲ್ಕರಿಂದ ಮುವ್ವತ್ತು ನಲವತ್ತು ಜನರವರೆಗೂ ಇರಬಹುದು. ಸಾಮಾನ್ಯವಾಗಿ ಸರಿ ಸಂಖ್ಯೆಯಲ್ಲೇ ಕೂಡಿಕೊಳ್ಳುವುದು ರೂಢಿ. ಕುಣಿತಕ್ಕೆ ಇವರು ನಿಲ್ಲುವುದು ವೃತ್ತಾಕಾರದಲ್ಲಿ. ಹಾಡಿಲ್ಲದೆ ಲಂಬಾಣಿ ಕುಣಿತವೇ ಇಲ್ಲ. ತಂಡದ ಒಬ್ಬಿಬ್ಬರು ಮೊದಲು ಹಾಡುತ್ತಾರೆ. ಉಳಿದವರು ಪ್ರತಿ ಸೊಲ್ಲಿನ ನಂತರ ಪಲ್ಲವಿಯನ್ನು ಪುನರುಚ್ಚರಿಸುತ್ತಾರೆ. ಸಮಾಜ ದೇವತೆ

ಸೇವಾಬಾಯಿಯ ಪ್ರಾರ್ಥನೆಯಿಂದ ಆರಂಭವಾಗುವ ಅವರ ಕುಣಿತ ಮುಂದೆ ವಿವಿಧ ಹಾಡುಗಳೊಂದಿಗೆ ಬದಲಾಯಿಸುತ್ತಾ ಹೋಗುತ್ತದೆ.

ಕುಣಿತಕ್ಕೆ ಸುತ್ತುಕಟ್ಟಿ ನಿಂತರೆ ಭದ್ರ ಕೋಟೆಯಂತಿರುತ್ತದೆ. ಈ ಸುತ್ತು ಕುಣಿತ ಈ ಜನರ ಒಗ್ಗಟ್ಟಿನ ಸಂಕೇತ ಸುತ್ತ ಸಾಲು ಇವರ ಸಂಸ್ಕೃತಿ ಸಂಪ್ರದಾಯಗಳ ರಕ್ಷಣೆಗೆ ಹಾಕಿದ ಸುತ್ತು ಬೇಲಿ; ಆ ಬೇಲಿ ದಾಟುವುದು ಅಷ್ಟು ಸುಲಭದ ಮಾತಲ್ಲ.

ಲಂಬಾಣಿ ಮಹಿಳೆಯರ ಕುಣಿತದ ರೀತಿ ಬಹು ಅಕರ್ಷಣೀಯ ಕುಣಿತದಲ್ಲಿ ಕೈ ಕಾಲು ಮತ್ತು ಸೊಂಟಗಳಿಗೆ ಹೆಚ್ಚು ಕೆಲಸ. ಎರಡೂ ಕೈಗಳನ್ನು ಮೇಲಕ್ಕೆತ್ತಿ, ಹಾಗೆಯೇ ಎಡಕ್ಕೂ ಬಲಕ್ಕೂ ಮುಖ ತಿರುಗಿಸುತ್ತಾ. ಒಂದೊಂದೇ ಕೈಯನ್ನು ನೇರವಾಗಿ ನೆಲದವರೆಗೆ ಇಳಿಸಿ ಮತ್ತೆ ಮೇಲಕ್ಕೆತ್ತುತ್ತಾರೆ. ಈ ಚಲನೆಗೆ ತಕ್ಕಂತೆ ಸೊಂಟವೂ ಬಳುಕುತ್ತಿರುತ್ತದೆ. ಕೈ ಚಲನೆಯೊಂದಿಗೆ ಹೆಜ್ಜೆಗಳನ್ನು ಹಿಂದಕ್ಕೆ ಮುಂದಕ್ಕೆ ಹಾಕುತ್ತಾ ಚಪ್ಪಾಳೆ ತಟ್ಟುತ್ತಾರೆ. ಈ ಚಲನವಲನಗಳು ಒಂದು ದಿಕ್ಕಿನಲ್ಲಿ ನಡೆಯುತ್ತಿದ್ದಂತೆ, ಕುಣಿತದ ತಂಡ ಅದೇ ವೃತ್ತಾಕಾರದಲ್ಲೇ ಇನ್ನೊಂದು ದಿಕ್ಕಿನಲ್ಲಿ ಸುತ್ತುತ್ತದೆ. ವಿವಿಧ ಭಂಗಿಗಳಲ್ಲಿ ಕೈಯಾಡಿಸಿ, ನಡುವಾಡಿಸಿ ಹಿಂದೆ ಮುಂದೆ ಚಲಿಸಿ ಸುತ್ತಿನಲ್ಲಿ ಕುಣಿಯುವುದಕ್ಕೆ ತಕ್ಕಂತೆ ಕಲಾವಿದರ ಕಂಠದಿಂದ ವೈವಿಧ್ಯಪೂರ್ಣ ಹಾಡುಗಳು ಹರಿದು ಬರುತ್ತವೆ.

ಕೆಲವು ಕಡೆ ಕುಣಿತಕ್ಕೆ ಹಿಮ್ಮೇಳವಾಗಿ ಹಲಗೆ (ತಮ್ಮಟೆ) ಬಾರಿಸುವುದೂ ಉಂಟು. ಕೈಯಲ್ಲಿ ತಪ್ಪಡಿ (ಫಗರಿ) ಹಿಡಿದು ಬಡಿಯುತ್ತ ಕುಣಿಯುವುದೂ ಕೆಲವು ಕಡೆ ಬಳಕೆಯಲ್ಲಿದೆ. ಲಂಬಾಣಿ ಮಹಿಳೆಯರು ಮನ ತುಂಬಿ ಕುಣಿಯುವಾಗ ಕೇಳಿಬರುವ ಕಾಲುಗೆಜ್ಜೆಯ ಸದ್ದು ಕೈಯಾಡಿಸುವಾಗ ಬರುವ ದಂತದ ಬಳೆಗಳ ಸಪ್ಪಳ ಗುಂಪು ಹಾಡಿಕೆಯ ಇಂಪು ದನಿ. ಬಾಗಿ ಕುಣಿಯುವಾಗ ಇಳಿ ಬೀಳುವ ಮುಂಗೂದಲಿನ ಕುಚ್ಚುಗಳ ಸೊಗಸು ಕೈ ಬೀಸಿ ಆಡುವಾಗ ಉಂಟಾಗುವ ಮೇಲು ಹೊದಿಕೆ ಹಾಗೂ ಕವಡೆ ಸರಗಳ ಚೆಲ್ಲಾಟ, ಹಾಡಿನ ಸೊಲ್ಲು ತಪ್ಪಿದಾಗ ನಾಯಕಿಯ ಮುಖದಲ್ಲಿ ಕಾಣುವ ನಸುಗೋಪ ಸೊಲ್ಲು ಸರಿಯಾದಾಗ ಎಲ್ಲರ ಮುಖದಲ್ಲೂ ಮಿಂಚುವ ನಗೆ–ಇವನ್ನೆಲ್ಲ ಪ್ರತ್ಯಕ್ಷ ಕೇಳಿ, ನೋಡಿಯೇ ಆನಂದಿಸಬೇಕು ಲಂಬಾಣಿ ಕುಣಿತದ ನೋಟದ ಸೊಬಗನ್ನು ಚಂದ್ರನ ಬೆಳಕಿನಲ್ಲಿ ಅನುಭವಿಸಬೇಕು ಒಟ್ಟಿಗೆ ಜೋಡಿಸಿದ ಗಾಜಿನ ಜಿಲ್ಲೆಗಲ ಹೊಳಪು ಅವುಗಳಲ್ಲಿ ಕಾಣುವ ಚಂದ್ರನ ಪ್ರತಿಬಿಂಬ ಕುಣಿತದ ಸೊಬಗಿಗೆ ಮೆರಗು ತಂದುಕೊಡುತ್ತವೆ.

ಲಂಬಾಣಿ ಕುಣಿತದಲ್ಲಿ ಕೋಲಾಟವು ಉಂಟು. ಆದರೆ ಸಾಮಾನ್ಯವಾಗಿ ಲಂಬಾಣಿ ಪುರುಷರು ಕೋಲಾಟದಲ್ಲಿ ಪರಿಣಿತರು ಮಹಿಳೆಯರು ಕೋಲು ಹಿಡಿಯದೇ ಕುಣಿಯವುದೇ ಹೆಚ್ಚು ಇವರ ಕೋಲಾಟದಲ್ಲಿ ಒಳಾಟ, ಹೋರಾಟ, ಚಿಕ್ಕಿ ಕೋಲಾಟ ಬಾಗು ಕೋಲಾಟ ಮೊದಲಾದ ವಿಧಗಳಿರುತ್ತವೆ.

ಲಂಬಾಣಿ ಮಹಿಳೆಯರು ತಮ್ಮ ಹಟ್ಟಿಗಳಲ್ಲಿ ಸ್ಥಾನಂದಕ್ಕಾಗಿ ಪ್ರತಿ ಸಂಜೆ ಅಥವಾ ಆಗಾಗ ಕುಣಿದರೂ ಹಬ್ಬ ಉತ್ಸವಗಳಲ್ಲಿ ತೇರು ಜಾತ್ರೆಗಳಲ್ಲಿ ಹೊಸ ವೇಷಭೂಷಣ ಧರಿಸಿ, ಹರ್ಷೋರ್ತ್ಸಾಹಗಳಿಂದ ಕುಣಿಯುವ ಚಂದವೇ ಚಂದ, ಕಾಮನ (ಹೋಳಿ) ಹಬ್ಬದಲ್ಲಂತೂ ಇವರ ಕುಣಿತ ಒಂದು ಮೋಜು ಪ್ರತಿಷ್ಟಿತ ವ್ಯಕ್ತಿಗಳನ್ನು ಸುತ್ತುಕಟ್ಟಿ ತಮ್ಮ ಕಲಾಕುಶಲತೆ ತೋರಿ, ಅವರ ಹೆಸರು ಹಿಡಿದು ಹೊಗಳಿ ಅವರನ್ನು ಮೆಚ್ಚಿಸಿ ಬಹುಮಾನ ಗಿಟ್ಟಿಸುವ ಅವರ ಜಾಣ್ಮೆಯೇ ಜಾಣ್ಮೆ ಸರಸವೇ ಸರಸ "ಆಡಿ ಆಡಿ ಬಾಪುರೇ, ಗ್ವಾಡಿ ಹತ್ತಿ ನೋಡಿರೇ" ಎಂಬ ಪಲ್ಲವಿ ಬಹುಜನರಿಗೆ ಪರಿಚಿತವಾಗಿದೆ.

ಲಂಬಾಣಿ ಜನರ ಭಾಷೆಗೆ ಲಿಪಿಯಿಲ್ಲ. ಈ ಭಾಷೆ ಮರಾಠಿ, ರಾಜಾಸ್ಥಾನಿ ಮೊದಲಾದ ನಾನಾ ಭಾಷೆಗಳ ಪ್ರಭಾವದಿಂದ ಸಂವೃದ್ದಿಗೊಂಡಂತೆ ಕಾಣುತ್ತದೆ. ಲಂಬಾಣಿ ಮಹಿಳೆಯರು ತಮ್ಮ ಭಾಷೆಯ ಗೀತೆಗಳೊಂದಿಗೆ ಕನ್ನಡದ ಹಾಡುಗಳನ್ನೂ ಹಾಡುತ್ತಾರೆ. ಇವರ ಗೀತೆಗಳೆಲ್ಲ ಸಾಮಾನ್ಯವಾಗಿ 'ಬಾಯಿಯೇ... ' ಎಂಬ ನಡಿಯೊಂದಿಗೆ ಆರಂಭವಾಗುತ್ತವೆ. ರಾಮಾಯಣ ಮಹಾಭಾರತ ದಂತಹ ಪುರಾಣ ಪ್ರಸಂಗಗಳೂ ಇವರ ಹಾಡುಗಳಲ್ಲಿ ಬರುತ್ತವೆ. ಸಮಕಾಲೀನ ಸಂಗತಿಗಳನ್ನು ಸೇರಿಸಿಕೊಂಡು ಹಾಡುವುದರಲ್ಲಿ ಇವರು ನಿಪುಣರು.

## 15. ವೀರಭದ್ರನ ಕುಣಿತ

ಕೊಡಗು ಜಿಲ್ಲೆಯಲ್ಲಿ ಒಂದೆರಡು ಕಡೆ ಕಂಡುಬರುವ ಅಪರೂಪದ ಕಲೆ ವೀರಭದ್ರನ ಕುಣಿತ. ಈ ಕುಣಿತಕ್ಕೂ 'ವೀರಗಾಸೆ'ಯಲ್ಲಿ ಬರುವ ಪೌರಾಣಿಕ ಪ್ರಸಂಗಕ್ಕೂ ಯಾವ ಸಂಬಂಧವೂ ಇದ್ದಂತೆ ಕಾಣುವುದಿಲ್ಲ. ಇದು ಕೇವಲ ಮನರಂಜನೆಯ ಕಲೆಯಾಗಿ ಉಳಿದುಬಂದಿದೆ.

ಕಲಾವಿದ ತನ್ನ ನಿತ್ಯದ ಉಡುಪಿನಲ್ಲಿಯೇ ಇದ್ದು ಬೆನ್ನಿಗೆ ಅಡಿಕೆ ಅಥವಾ ಬಿದಿರ ದಬ್ಬೆಗಳಿಂದ ಮಾಡಿದ ಸೂರ್ಯ ಕಿರಣಾಕಾರದ ರಚನೆಯೊಂದನ್ನು ಕಟ್ಟಿಕೊಂಡಿರುತ್ತಾನೆ. ರಚನೆಯ ಪ್ರತಿಯೊಂದು ಕಡ್ಡಿಯ ತುದಿಗೂ ಎಣ್ಣೆಯಬಟ್ಟೆಯನ್ನು ಸುತ್ತಿದ್ದು, ಕೈಯಲ್ಲಿ ಅಂತಹುದೇ ಕಡ್ಡಿಯೊಂದನ್ನು ಹಿಡಿದಿರುತ್ತಾನೆ. ಎಣ್ಣೆ ಬಟ್ಟೆ ಸುತ್ತಿದ ಸೂರ್ಯ ಕಿರಣಾ ಕಾರದ ದಬ್ಬೆಗಳ ತುದಿಗೆ ಪ್ರದರ್ಶನದ ಸಮಯದಲ್ಲಿ ಬೆಂಕಿ ಹೆಚ್ಚುತ್ತಾರೆ. ಬಹುತೇಕ ಬಹಳ ಆಕರ್ಷಕವಾಗಿ ಕಾಣುತ್ತದೆ. ಕುಣಿತಕ್ಕೆ ಹಿನ್ನೆಲೆಯಾಗಿ ತಮಟೆಯನ್ನು ಬಳಸುತ್ತಾರೆ.

## 16. ವೇಷಗಾರರು

ಜೀವನ ನಿರ್ವಹಣೆಗಾಗಿ ವಿವಿಧ ವೇಷಗಳನ್ನು ಹಾಕುವವರು 'ವೇಷಗಾರರು' ಇವರನ್ನು 'ಬಹುರೂಪಿ' ಗಳೆಂದೂ 'ರೂವಾರಿ'ಗಳೆಂದೂ ಕರೆಯುತ್ತಾರೆ. ಬಹುತೇಕವಾಗಿ ಕಬ್ಬಲಿಗ (ಗಂಗೆಮಕ್ಕಳು) ರಲ್ಲಿ ಈ ಕಲೆ ಹೆಚ್ಚು ಪ್ರಚಲಿತ, ಇದು ಪೂರ್ಣವಾಗಿ ವೃತ್ತಿ ಕಲೆ.

ವೇಷಗಾರರು ಅಲೆಮಾರಿಗಳ ಗುಂಪಿಗೆ ಸೇರಿದವರು, ಸಂಸಾರ ಸಮೇತ ಊರಿಂದ ಊರಿಗೆ ತಿರುಗುತ್ತಾರೆ. ಊರಿನಲ್ಲಿರುವ ಚಾವಡಿ, ಹಳೆಯ ದೇವಸ್ಥಾನ, ಮಠದ ಜಗಲಿ, ಮರದ ಕೆಳಗೆ ಇವರ ಬಿಡಾರ, ಕೆಲವರು ಊರ ಹೊರಗಿನ ಬಯಲಿನಲ್ಲಿ ಡೇರೆ (ಗುಡಾರ)ಗಳನ್ನು ಹೂಡಿ ಕೊಳ್ಳುತ್ತಾರೆ. ಸಾಮಾನ್ಯವಾಗಿ ಒಂದು ಊರಿನಲ್ಲಿ 15–20 ದಿನಗಳವರೆಗೂ ಬೀಡು ಬಿಡುತ್ತಾರೆ.

ವೇಷಗಾರರು ಬೆಳಗಿನಿಂದ ಮಧ್ಯಾಹ್ನದವರೆಗೆ ಪ್ರತಿದಿನವೂ ಒಂದೆರಡು ವೇಷಗಳನ್ನು ಹಾಕಿಕೊಂಡು ಮನೆ ಮನೆಯ ಮುಂದೆ ಹೋಗಿ ಅಭಿನಯಿಸುತ್ತಾರೆ. ಇಂತಹ ಕಲಾಪ್ರದರ್ಶನಕ್ಕೆ ಜನರು ಕಾಣಿಕೆಯಾಗಿ ಏನಾದರೂ ಕಾಳು ಕಡಿ ಕೊಡಬಹುದು. ಆದರೆ ಈ ಪ್ರದರ್ಶನದ ಮುಖ್ಯ ಉದ್ದೇಶ ಭಿಕ್ಷೆಯಲ್ಲ: ಪ್ರಚಾರ ಅವರು ನಾಲ್ಕಾರು ದಿನ ಹೀಗೆ ಊರಾಡಿದ ನಂತರ ಸಾರ್ವಜನಿಕರ ಅಪೇಕ್ಷೆಯ ಮೇಲೆ ನಾಲ್ಕೈದು ರಾತ್ರಿ ನಿರ್ದಿಷ್ಟ ಸ್ಥಳದಲ್ಲಿ ಸಂಪೂರ್ಣ ಪ್ರದರ್ಶನ ನಡೆಸುತ್ತಾರೆ. ಆ ಸಾರ್ವಜನಿಕ ಪ್ರದರ್ಶನದ ನಂತರವೇ ವಾಸ್ತವವಾಗಿ ಜನರು ವೇಷಗಾರರಿಗೆ ಮೆಚ್ಚಿಗೆಯ ಕಾಣಿಕೆ ಕೊಡುವುದು ಕಲಾವಿದರು ಸಾರ್ವಜನಿಕ ಪ್ರದರ್ಶನಕ್ಕೆ ಪೌರಾಣಿಕ ಕಥಾ ಪ್ರಸಂಗಗಳನ್ನು ಆರಿಸಿಕೊಳ್ಳುವುದೇ ಹೆಚ್ಚು. ಸಾಮಾನ್ಯ ಸಂಗೀತ ನಾಟಕದಂತೆಯೇ ಇರುವ ಈ ನಾಟಕಗಳಲ್ಲಿ ಬರುವ ಕೆಲವು ಪಾತ್ರಗಳನ್ನೇ ವೇಷಗಾರರು ಊರಾಡುವಾಗ ಅಭಿನಯಿಸುವುದು.

ವೇಷಗಾರರು ಸಾಮಾನ್ಯವಾಗಿ ಹಾಕುವ ವೇಷಗಳೆಂದರೆ, ಭಸ್ಮಾಸುರ, ನರಕಾಸುರ, ಹರಿಶ್ಚಂದ್ರ, ದೇವೇಂದ್ರ, ವಶಿಷ್ಟ, ವಿಶ್ವಾಮಿತ್ರ, ಜಂಗಮರು, ಅಣ್ಣ ತಮ್ಮ, ಭೀಮ, ಜಟಾಸುರ, ರಾಮ–ಲಕ್ಷ್ಮಣ, ಮಾರುತಿ, ಸಿಂಧುರ ಲಕ್ಷ್ಮಣ ಸೂರದಾಸ, ಬ್ರಾಹ್ಮಣನ ವೇಷ, ಲಂಬಾಣಿ ವೇಷ, ಕಂಸ, ಕಳ್ಳರ ವೇಷ ಇತ್ಯಾದಿ. ಇವೆಲ್ಲ ಅವರು ಪ್ರದರ್ಶಿಸುವ ನಾಟಕಗಳಲ್ಲಿ ಬರುವ ಪಾತ್ರಗಳೇ. ಬಹುತೇಕ ಪೌರಾಣಿಕ ಕಥೆಗಳಿಂದ ಆಯ್ದ ಈ ಪಾತ್ರಗಳನ್ನು ತಮಗನುಕೂಲವಾಗುವ ರೀತಿಯಲ್ಲಿ ಬದಲಾವಣೆ ಮಾಡಿಕೊಳ್ಳುವುದು ಉಂಟು.

ಸಾಮಾನ್ಯವಾಗಿ ಒಂದು ತಂಡದಲ್ಲಿ ಎಂಟು ಹತ್ತು ಜನರಿರುತ್ತಾರೆ. ನಾಲ್ಕಾರು ದಿನ ಒಂದು ಊರಿನಲ್ಲಿ ಕಲಾ ಪ್ರದರ್ಶನವನ್ನು ನಡೆಸಿದ ನಂತರ ಕೊನೆಯ ದಿನ ದವಸ ಧಾನ್ಯ, ಬಟ್ಟೆ, ಹಣ ಮೊದಲಾದ ಕೊಡುಗೆಗಳನ್ನು ಸಂಗ್ರಹಿಸುತ್ತಾರೆ. ಕೊಡುಗೈಗಳಿದ್ದರೆ ಅವರ ಬೇಡಿಕೆಯೇನೂ ಕಡಿಮೆಯಿಲ್ಲ. ಒಬ್ಬ ಎಮ್ಮೆ ಕರುವನ್ನು ಕೇಳಿದರೆ, ಮೊತ್ತೊಬ್ಬ ತೊಡುವ ಬಟ್ಟೆ, ತನ್ನ ಹೆಂಡತಿಗೆ ರೇಷ್ಮೆ ಪೀತಾಂಬರ ಕೇಳುತ್ತಾನೆ. ಮಗದೊಬ್ಬ 'ನೀವು ಊರಿಗೆ ಗೌಡ್ರು, ಒಂದು ಚೀಲ ಜೋಳ ಕೊಡಿ. ನಿಮ್ಮ ಹೆಸರು ಹೇಳಿ ಉಣ್ತೇವಿ" ಎಂದು ಕೇಳುತ್ತಾನೆ. ಕಲಾವಿದರು ಈ ಕೊಡುಗೆಗಳ ಸಂಗ್ರಹಕ್ಕಾಗಿ ಎಲ್ಲಾ ಮನೆಗಳಿಗೂ ಹೋಗುತ್ತಾರೆ. ವೇಷಗಾರರ ಕಲಾಪ್ರತಿಭೆಯನ್ನು ಕಂಡ ಯಾರೂ 'ಇಲ್ಲ' ಎನ್ನುವುದಿಲ್ಲ.

ವೇಷಭೂಷಣಗಳು ಪಾತ್ರಕ್ಕನುಗುಣವಾಗಿರುತ್ತವೆ. ಉದಾಹರಣೆಗೆ: ಶಿವನ ವೇಷಧಾರಿ ಹುಲಿ ಚರ್ಮವನ್ನುಟ್ಟು ಜಡೆ ಮುಡಿ ಕಟ್ಟಿ, ಮೈತುಂಬ ವಿಭೂತಿ ಹಚ್ಚಿಕೊಂಡು ಕೊರಳಿಗೆ ಒಂದು 'ಪ್ಲಾಸ್ಟಿಕ್' ಹಾವು ಸುತ್ತಿಕೊಂಡಿರುತ್ತಾನೆ. ತಲೆಗೆ ಗಂಗೆಯ ಗೊಂಬೆಯನ್ನಿಟ್ಟು ಕಂಕುಳಲ್ಲಿಟ್ಟುಕೊಂಡಿದ್ದ ನೀರು ತುಂಬಿದ ರಬ್ಬರ್ ಚೀಲವನ್ನು ಹಿಚುಕಿದರೆ ಗಂಗೆಯ ಬಾಯಿಂದ ನೀರು ಹೊರ ಚಿಮ್ಮುವಂತೆ ಮಾಡಿಕೊಂಡಿರುತ್ತಾನೆ. ಕೈಯಲ್ಲಿ ತ್ರಿಶೂಲ ಹಿಡಿದ ಅರ್ಧ ನಾರೀಶ್ವರ ವೇಷವಂತೂ ತುಂಬ ಸೊಗಸಾಗಿರುತ್ತದೆ.

ಕಲಾವಿದರು ಮುಖಕ್ಕೆ ಪರದೆಯನ್ನು ಹಾಕಿಕೊಂಡು ಬೇಕಾದಾಗ ತೆಗೆದು ಹೆಣ್ಣು ಗಂಡಿನ ಧ್ವನಿಯಿಂದ ಪಾತ್ರಕ್ಕನುಗುಣವಾಗಿ ಮಾತನಾಡಿ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ಮುಳುಗಿಸುತ್ತಾರೆ. ಅವರು ಒಳ್ಳೆಯ ಏಕಪಾತಾಭಿನಯ ಚತುರರು, ಪೇಟಿ, ತಬಲ, ಎಕ್ಕಮಳಿ (ತಾಳ) ದಮ್ಮಡಿ ಮೊದಲಾದ ವಾದ್ಯಗಳೊಂದಿಗೆ ಬರುವ ವೇಷಗಾರರು, ಸೊಗಸಾಗಿ ಹಾಡುತ್ತಾರೆ. ಅಗತ್ಯವೆನಿಸಿದ ಪಾತ್ರಗಳಲ್ಲಿ ಕುಣಿದೂ ತೋರಿಸುತ್ತಾರೆ.

ಮನೆಗಳ ಮುಂದೆ ನಡೆಯುವ ಕಲಾಪ್ರದರ್ಶನ ಸುಮಾರು ಹತ್ತರಿಂದ ಹದಿನೈದು ನಿಮಿಷದವರೆಗೆ ನಡೆಯುತ್ತದೆ. ಗೌಡರು ಸರಪಂಚರು ಮೊದಲಾದ ಗ್ರಾಮದ ಪ್ರತಿಷ್ಠಿತರ ಮನೆಯ ಮುಂದೆ ಹೆಚ್ಚು ಹೊತ್ತು ಆಡಿ ಮುಗಿದ ಮೇಲೆ 'ಸಲಾಂ' ಹೊಡೆದು ಮುಂದಿನ ಮನೆಗೆ ಹೋಗುತ್ತಾರೆ. ಮನೆಗಳ ಮುಂದೆ 'ವೇಷ' ನಡೆಯುವಾಗ ಅಕ್ಕಪಕ್ಕದವರು ಕೂಡಿ ನೋಡಿ ಅನಂದಿಸುತ್ತಾರೆ.

ಸರ್ವಜ್ಞ, ಬಸವಣ್ಣ, ಪುರಂದರದಾಸರ ವೇಷಗಳನ್ನು ಹಾಕುವುದು ಉಂಟು. ವೇಷಗಾರರ ಮುಗಿತಾಯದ ಪ್ರದರ್ಶನ 'ಕಳ್ಳನ ವೇಷ' ಈ ವೇಷ ನೋಡಲು ಭಯಂಕರವಾಗಿರುತ್ತದೆ. ದವಡೆಯಲ್ಲಿ ಒಂದು 'ಗುಚ್ಚುರಿ'ಯನ್ನು ಚುಚ್ಚಿಕೊಂಡಿದ್ದು ರಕ್ತ ಸೋರುತ್ತಿರುವಂತೆ ಕಾಣುತ್ತದೆ. ಇವನ ಎರಡು ಕೈಗಳಿಗೂ ಬಳೆಯನ್ನು ತೊಡಿಸಿ ಪೋಲೀಸರಂತೆ ಇಬ್ಬರು ಹಿಡಿದುಕೊಂಡು ಬರುತ್ತಾರೆ. ಕಳ್ಳ ವೇಷಧಾರಿ ವಿವಿಧ ಗತ್ತುಗಳಲ್ಲಿ ಹಲಗೆಯ ಗತ್ತಿಗೆ ಕುಣಿಯುತ್ತಾನೆ. ಅಲ್ಲಿಗೆ ಅವರ ವೇಷ ಮುಗಿಯುತ್ತದೆ. ನಂತರ ಸಾರ್ವಜನಿಕರ ಇಷ್ಟದಂತೆ ನಾಟಕ ಪ್ರದರ್ಶನ ನೀಡಿ ಅವರು ತಮ್ಮ ಸಂಸಾರ ಸಮೇತ ಬೇರೆ ಊರಿಗೆ ಪಯಣ ಬೆಳೆಸುತ್ತಾರೆ. ರೀತಿಯಲ್ಲಿ ನಿಂತು ಕುಣಿಯುವಾಗ ನಾಯಕ ಹೇಳಿಕೊಡುವ ಪದವನ್ನು ಎಲ್ಲರೂ ಅನುಸರಿಸುತ್ತಾರೆ. ಪದದ ಲಯಕ್ಕೆ ಸರಿಯಾಗಿ ಕುಣಿತದ ಗತಿಯಲ್ಲಿಯೂ ಮಾರ್ಪಾಟಾಗುತ್ತದೆ. 'ದಾವಣ' ತಾಳವೇ ವಿಶೇಷವಾಗಿರುವ ಪದ್ಯಗಳಲ್ಲಿ ವಿವಿಧ ಪ್ರಕಾರಗಳಿವೆ. ಪದ್ಯಗಳು ಸಾಮಾನ್ಯವಾಗಿ ರಾಮಾಯಣಕ್ಕೆ ಸಂಬಂಧಿಸಿದವು.

ದಸರಾ ವೇಳೆಯಲ್ಲಿ ಮನೆ ಮನೆಗೆ ತೆರಳಿ ಈ ಕುಣಿತ ಮಾಡುವುದುಂಟು. ಇದಲ್ಲದೆ ದೇವರ ಪಲ್ಲಕ್ಕಿ ಉತ್ಸವ ಹೊರಟಾಗಲೂ ಅದರ ಎದುರು ಕುಣಿಯುತ್ತಾರೆ. ಹಗಲು ವೇಳೆಯಲ್ಲಿಯೇ ಹೆಚ್ಚಾಗಿ ಪ್ರದರ್ಶಿತಗೊಳ್ಳುವ ಈ ಕಲೆಯನ್ನು ಮರಾಠಾ ಜನರಲ್ಲಿ ವಿಶೇಷವಾಗಿ ಕಾಣಬಹುದು.

## 17. ಹಲಗೆ ಕುಣಿತ

'ಹಲಗೆ' ಒಂದು ಸರ್ವಸಾಮಾನ್ಯ ಚರ್ಮವಾದ್ಯ, "ಒಲೆಯಿಲ್ಲದ ಒಕ್ಕಲಿಲ್ಲ, ಹಲಗೆ ಇಲ್ಲದ ಊರಿಲ್ಲ" ಎಂಬ ಗಾದೆ ಮಾತೇ ಇದೆ. ಹಲಗೆಗೆ ತಮಟೆ, ತಮ್ಮಟೆ, ತಪ್ಪಡೆ ಎಂದೂ ಕರೆಯುತ್ತಾರೆ. ಹಲಗೆ ಬಾರಿಸುವವರಲ್ಲಿ ಹರಿಜನರೇ ಹೆಚ್ಚು.

ಹಳ್ಳಿ ತೇರು ಉತ್ಸವಗಳಲ್ಲಿ ಹಲಗೆ ವಾದ್ಯ ಇರಲೇ ಬೇಕು ಗ್ರಾಮೀಣ ಸಮಾಜ ಜೀವನದಲ್ಲಿ ಹಲಗೆಯ ಪಾತ್ರ ಮಹತ್ವಪೂರ್ಣವಾದುದು. ಹಳ್ಳಿಯಲ್ಲಿ ನಡೆದ ಅಥವಾ ನಡೆಯಬೇಕಾದ ಯಾವುದೇ ವಿಚಾರವನ್ನು ಸಾರ್ವಜನಿಕವಾಗಿ ತಿಳಿಸಲು ಹಲಗೆಯೇ ಮಾಧ್ಯಮ. ಹಲಗೆ ಬಾರಿಸುವವನಿಗೆ 'ಕುಳವಾಡಿ' 'ತಳವಾರ' ಎನ್ನುತ್ತಾರೆ. ಮುಂದೆ ಬರುವ ಹಬ್ಬದ ಸುದ್ದಿಯಾಗಲೀ ಸರ್ಕಾರಕ್ಕೆ ಕೊಡಬೇಕಾದ ಕಂದಾಯದ ವಸೂಲಿಗೆ ಅಧಿಕಾರಿಗಳು ಬರುವ ಸುದ್ದಿಯಾಗಲೀ ಕುಳವಾಡಿ ಹಲಗೆ ಬಾರಿಸಿಕೊಂಡು ಬೀದಿ ಬೀದಿಗಳಲ್ಲಿ ಸಾರುತ್ತಾ ಹೋಗುತ್ತಾನೆ. ಇದಕ್ಕೆ ಡಂಗುರ ಸಾರುವುದು ಎಂದು ಹೇಳುತ್ತಾರೆ. ಮನೆಯಲ್ಲಿ ಇರುವ ಜನರ ಗಮನವನ್ನು ಸೆಳೆಯುವುದು ಹಲಗೆ ಬಡಿತದ ಉದ್ದೇಶ ಸ್ವಲ್ಪ ಹೊತ್ತು ಬಡಿದು ನಿಲ್ಲಿಸಿ. ಜನರಿಗೆ ತಿಳಿಸಬೇಕಾದ ವಿಷಯವನ್ನು ಸಾರಿ, ಮತ್ತೆ ಬಡಿಯುತ್ತ ಹೋಗುತ್ತಾನೆ ಕುಳವಾಡಿ.

ಹಲಗೆ ವಾದ್ಯವು ಬಹಳ ಸರಳ, ವೃತ್ತಾಕಾರವಾಗಿ ಸಿದ್ದಗೊಳಿಸಿದ ಒಂದು ಮರದ ಬಳೆ. ಅರ್ಧ ಅಂಗುಲದಿಂದ ಒಂದು ಅಂಗುಲ ದಪ್ಪದ ಈ ಮರದ ಬಳೆಯ ವ್ಯಾಸ ಸುಮಾರು ಒಂದೂವರೆ ಅಡಿಯಷ್ಟು ಇರುತ್ತದೆ. ಈ ಬಳೆಗೆ ಚೆನ್ನಾಗಿ ಹದಗೊಳಿಸಿ ನಯಗೊಳಿಸಿದ ಕೋಣನ ಚರ್ಮವನ್ನು ಬಿಗಿದು ಕಟ್ಟಿರುತ್ತಾರೆ. ಹೀಗೆ ಕಟ್ಟಲು ಚರ್ಮದ ದಾರವನ್ನೇ ಬಳಸುತ್ತಾರೆ. ಹೆಗಲಿಗೆ ತೂಗು ಹಾಕಿಕೊಳ್ಳಲು ಅನುಕೂಲವಾಗುವಂತೆ ಒಂದು ಹೆಗಲು ಪಟ್ಟಿಯನ್ನು ಜೋಡಿಸಿರಲಾಗುತ್ತದೆ. ಹಲಗೆ ಬಾರಿಸಲು ಎರಡು ಕಡ್ಡಿಗಳಿರುತ್ತವೆ. ಒಂದು ತೆಳುವಾದ ಚಕ್ಕೆ ಕಡ್ಡಿ, ಮೊತ್ತೊಂದು ದುಂಡು ಕಡ್ಡಿ. ಇವಕ್ಕೆ ಕೆಲವು ಕಡೆ 'ಹಲಗೆ ಗುಣಿ' ಎಂದೂ ಕರೆಯುತ್ತಾರೆ. ಹಲಗೆ ಬಾರಿಸುವ ಮುನ್ನ ಬೆಂಕಿಯ ಕಾವಿನಲ್ಲಿ ಕಾಯಿಸಿದರೆ ಒಳ್ಳೆಯ ದನಿ ಬರುತ್ತದೆ. ಹದವರಿತು ಕಾಯಿಸಿದಾಗ ಬರುವ 'ಕಣಿ ಕಣಿ' ನಾದ ಕೇಳಲು ಬಲು ಚಂದ

ಹಲಗೆ ಬಾರಿಸುವಾತ ವಾದ್ಯವನ್ನು ಎಡಭುಜಕ್ಕೆ ತಗಲಿ ಹಾಕಿಕೊಂಡು ಅದನ್ನು ಮೇಲ್ಭಾಗದಿಂದ ಸೊಂಟಕ್ಕೆ ಒತ್ತಿ ಹಿಡಿದಿರುತ್ತಾನೆ. ಎಡಗೈಯಲ್ಲಿ ಚಕ್ಕೆಕೋಲೂ, ಬಲಗೈಯಲ್ಲಿ ದುಂಡುಕೋಲೂ ಇರುತ್ತದೆ.

ಹಲಗೆಯ ಬಡಿತದಲ್ಲಿ ನಾನಾ ರೀತಿಗಳಿವೆ. ಪ್ರಚಾರ ಮಾಧ್ಯಮವಾಗಿ ಹುಟ್ಟಿಕೊಂಡರೂ ಕ್ರಮೇಣ ಅದೇ ಒಂದು ವಿಶಿಷ್ಟ ಕಲೆಯಾಗಿ ಬೆಳೆದಿದೆ. ಕೆಲವು ಕುಶಲ ಕಲೆಗಾರರು ತಬಲ ವಾದನ, ಘಟವಾದನ, ಡೊಳ್ಳು ವಾದನಗಳ ಗತ್ತು ಮತ್ತು ಸದ್ದುಗಳನ್ನು ಹಲಗೆಯಲ್ಲೇ ಬಾರಿಸಿ ಕೇಳಿಸುತ್ತಾರೆ. ತ್ವರಿತಗತಿಯಲ್ಲಿ ಗುಣಿಯಾಡುವ ಚುರುಕು ವಿಸ್ಮಯಕಾರಿ

ಹಲಗೆ ಬಡಿತದಲ್ಲಿ ದೀನಬಾಜು, ಹನುಮಂತನ ಗತ್ತು, ಕುದುರೆ ಗತ್ತು, ಗವಾರ್ ಹೆಜ್ಜೆ, ನವಬತ್ತು ದೇವರಗತ್ತು, ಬುತಾಲ, ಚಿತ್ರಾಟ ಮೊದಲಾದ ನಾನಾ ಗತ್ತುಗಳಿವೆ. ಹಲಗೆ ಬಡಿದುಕೊಂಡು ಗುಂಪಿನಲ್ಲಿ ಕುಣಿಯುವುದು ದಕ್ಷಿಣ ಕರ್ನಾಟಕ ಭಾಗಕ್ಕಿಂತ ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚು ಪ್ರಚಲಿತ.

ಕೆಲವು ನುರಿತ ಕಲಾವಿದರು ಚಾಕುವಿನಿಂದ ಹಲಗೆ ಬಾರಿಸುವ ಸೂಕ್ಷ್ಮ ಕೈಚಳಕ ತೋರಿಸುತ್ತಾರೆ. ಹಲಗೆ ಬಾರಿಸುತ್ತಲೇ ನೆಲದ ಮೇಲೆ ಅಥವ ಬಟ್ಟಲ ನೀರಿನಲ್ಲಿಟ್ಟ ನಾಣ್ಯ ಅಥವಾ ಹೆಂಚಿನ ಚೂರನ್ನು ಹಣೆಯಿಂದ ಒತ್ತಿ ತೆಗೆಯುವ ನೆಲದ ಮೇಲಿಟ್ಟ ನೋಟು ಅಥವಾ ಸೂಜಿಯನ್ನು ಕಣ್ಣಿನ ರೆಪ್ಪೆಯಿಂದ ತೆಗೆಯುವ ನಿಪುಣ ಕಲಾವಿದರೂ ಇದ್ದಾರೆ.

ಹಲಗೆ ಬಡಿತದಲ್ಲೇ ಕೆಲವೊಂದು ಮಾತುಗಳನ್ನು ಪುನ ರುಚ್ಚರಿಸಿದಂತೆ ದನಿ ಮೂಡಿಸುವ ಕೆಲವರ ಕಲೆಯಂತೂ ಆಶ್ಚರ್ಯಕರ ಉದಾ:

"ಕುದುರಿ ಬಂತು, ಕುದುರಿ ಬಂತು ಮುರಿಯಕ್ಕ"

ಬಂತು ಬಂತು ಕಬ್ಬೂರು ಗುಡ್ಡ'

ಬಾಚಕ್ಕ ಬೈತಲಿ, ಕಟ್ಟಕ್ಕ ತುರುಬ'

ಬೀಗರ ಬಂದಾರ ಚರಗಿ ಕೊಡು, ಕೈಕಾಲು ತೊಕ್ಕ ಹಲಗಿ ಕೊಡು'

'ಚಿನ್ನಕ್ಕಾ ಹನಿ ಬರ್‍ತೈತಿ, ಚಣ್ಣ ತೆಗಿರಿ ತೊಯ್ತೈತಿ'

ಇಂತಹ ಸ್ವಾರಸ್ಯದ ಮಾತುಗಳನ್ನು ಶಬ್ದರೂಪದಲ್ಲೇ ಬಾರಿಸುವುದು ನಿಜಕ್ಕೂ ಒಳ್ಳೆಯ ಕೈಚಳಕ ಇದೇ ರೀತಿ ರೈಲ್ವೆ ಇಂಜಿನ್ ನಂತಹ ಆಧುನಿಕ ಯಂತ್ರಗಳ ಸದ್ದನ್ನೂ ಅನುಕರಣಮಾಡಿ ತೋರಿಸುತ್ತಾರೆ.

ಹಲಗೆ ಬಡಿತದಲ್ಲಿ ಆಡುಮಾತುಗಳನ್ನು ಮೂಡಿಸಲು ಕಾರಣವನ್ನು ಕಲಾವಿದರು ಸ್ವಾರಸ್ಯಕರವಾಗಿ ಹೇಳುತ್ತಾರೆ:

ಒಮ್ಮೆ ಒಂದಷ್ಟು ದೂರ ಸಾಗಿರುವಷ್ಟರಲ್ಲಿ ಮಳೆ ಆರಂಭವಾಯಿತು. ಆಗ ಆತನಿಗೆ ತಾನು ಜಳಕ ಮಾಡಿ ಮನೆಯ ಮಾಳಿಗೆಯ ಮೇಲೆ ಒಣಗು ಹಾಕಿದ ತನ್ನ ಧೋತ್ರದ ನೆನಪಾಗುತ್ತದೆ. ಹಿಂದಕ್ಕೆ ಓಡಿ ಹೋದರೂ ಮನೆ ಸೇರುವಷ್ಟರಲ್ಲಿ ಧೋತ್ರ ನೆನೆದು ಹೋಗಿರುತ್ತದೆ. ಯೋಚಿಸಿದ ಆತ, ತನ್ನ ಹೆಗಲಿಗೆ ತಗುಲಿ ಹಾಕಿಕೊಂಡಿದ್ದ ಹಲಗೆಯಿಂದ 'ಮಾಳಗಿ ಮ್ಯಾಲ ಧೋತರ ಅದ, ಜಲ್ದು ತಗಿ' ಎಂದು ಬಾರಿಸಿದ ನಂತೆ ಮನೆಯಲ್ಲಿದ್ದ ಹೆಂಡತಿ ಈ ಧ್ವನಿ ಕೇಳಿದ ಕೂಡಲೇ ತನ್ನ ಇನಿಯನ ಧೋತ್ರ ಮಳೆಯಲ್ಲಿ ನೆನೆಯುವ ಮೊದಲೇ ತನ್ನ ಇನಿಯನ ಧೋತ್ರ ಮಳೆಯಲ್ಲಿ ನೆನೆಯುವ ಮೊದಲೇ ತೆಗೆದಳಂತೆ! ಹೀಗೆ ಒಂದೊಂದು ವಾಕ್ಯಕ್ಕೂ ಅವರು ಒಂದೊಂದು ಸ್ವಾರಸ್ಯದ ಕತೆ ಹೇಳುತ್ತಾರೆ.

ಕೆಲವು ಕಲಾವಿದರು ಎರಡು ಹಲಗೆಗಳನ್ನು ಕಟ್ಟಿಕೊಂಡು ಬಾರಿಸುತ್ತಾರೆ. ಮುಂದಕ್ಕೆ ಉರುಳಿ ಅಕ್ಕಪಕ್ಕಕ್ಕೆ ತಿರುಗಿ, ಅಂಗಾತ ಮಲಗಿ, ಎರಡು ಕಾಲುಗಳ ಮಧ್ಯೆ ಹಲಗೆ ಇಟ್ಟುಕೊಂಡು ಹೀಗೆ ನಾನಾ ವಿನ್ಯಾಸಗಳಲ್ಲಿ ಹಲಗೆ ಬಾರಿಸುವವರು ಉಂಟು. ಯಾವುದಾದರೂ ಒಂದು ಸಣ್ಣ ವಸ್ತುವನ್ನು ಅಥವಾ ನಾಣ್ಯವನ್ನು ಜನರ ಗುಂಪಿನ ಮಧ್ಯೆ ಅಥವಾ ಯಾವುದಾದರೊಂದು ಸ್ಥಳದಲ್ಲಿ ಬಚ್ಚಿಟ್ಟು ಹಲಗೆಯ ಬಡಿತದ ಸಂಕೇತದಿಂದ ಅದನ್ನು ಹುಡುಕಿ ತೆಗೆಯುವುದನ್ನು ನೋಡಲು ಕುತೂಹಲಕಾರಿಯಾಗಿರುತ್ತದೆ. ಈ ಆಟದಲ್ಲಿ ಒಬ್ಬ ಹಲಗೆ ಬಾರಿಸುತ್ತಿರುತ್ತಾನೆ. ಮತ್ತೊಬ್ಬನ ಕಣ್ಣಿಗೆ ಏನೂ ಕಾಣದಂತೆ ಬಟ್ಟೆ ಕಟ್ಟಿರಲಾಗುತ್ತದೆ. ಹಲಗೆ ಬಾರಿಸುವವನಿಗೆ ಮಾತ್ರ ವಸ್ತು ಅಥವಾ ನಾಣ್ಯವನ್ನು ಬಚ್ಚಿಟ್ಟ ಸ್ಥಳ ತಿಳಿದಿರುತ್ತದೆ. ಹಲಗೆ ವಾದನ ನಡೆದಿರುವಂತೆ ಕಣ್ಣಿಗೆ ಬಟ್ಟೆ ಕಟ್ಟಿಕೊಂಡವನು ವಸ್ತು ಇರುವ ಸ್ಥಳ ಹುಡುಕಿಕೊಂಡು ತನ್ನ ಎರಡು ಕೈ ಮುಂದು ಮಾಡಿಕೊಂಡು ತಡಕಿಕೊಂಡು ಹೋಗುತ್ತಾನೆ. ಹಲಗೆಯನ್ನು ವಿವಿಧ ಗತ್ತುಗಳಲ್ಲಿ ಬಾರಿಸುವುದೇ ಅವನಿಗೆ ದಾರಿ ತೋರಿಸುವ ಸಂಕೇತ. ಸದ್ದು ಕಡಿಮೆಯಾಯಿತೆಂದರೆ ದಾರಿ ತಪ್ಪಿದನೆಂದರ್ಥ, ಸದ್ದು ಹೆಚ್ಚು ಮಾಡಿ ಎರಡು ಗುಣಕಿನಿಂದ ಬಾರಿಸಿದರೆ ಅದೇ ದಾರಿಯಲ್ಲಿ ಮುಂದುವರಿಯಲು ಸೂಚನೆ. ವಸ್ತು ವಿರುವ ಹತ್ತಿರಕ್ಕೆ ಹುಡುಕುವಾತ ಬಂದಂತೆಲ್ಲ ಹಲಗೆಯ ಸದ್ದು ಮತ್ತಷ್ಟು ಹೆಚ್ಚಾಗುತ್ತದೆ. ಆ ಸ್ಥಳವನ್ನು ತಲುಪಿದಾಗ ಗರಿಷ್ಟ ಏರುಗತಿಯಲ್ಲಿ ಹಲಗೆ ಬಾರಿಸಲಾಗುತ್ತದೆ. ಅಲ್ಲೂ ಬೇರೆ ಬೇರೆ ಸೂಚನೆಗಳಿವೆ. ಆ ವಸ್ತುವಿರುವ ಸ್ಥಳ ಅಥವಾ ವ್ಯಕ್ತಿಯನ್ನು ಮುಟ್ಟಲು ಮುಂದಕ್ಕೆ ಹಿಂದಕ್ಕೆ, ಎಡಬದಿ, ಬಲಬದಿಗಳಿಗೆ ಕೈ ಇಡಲು ಬಡಿತದಲ್ಲೇ ಸಂಕೇತಿಸಲಾಗುತ್ತದೆ. ಈ ಹುಡುಕಾಟ ಪ್ರೇಕ್ಷಕರಿಗೆ ಒಳ್ಳೆಯ ರಂಜನೆ ನೀಡುತ್ತದೆ.

ಹಲಗೆ ಪ್ರಧಾನವಾಗಿ ಬಡಿತಕ್ಕಾಗಿದ್ದರೂ ಕಲಾವಿದರು ಮೋಜಿಗಾಗಿ ಕುಣಿತಕ್ಕೂ ಹೊಂದಿಸಿಕೊಂಡಿದ್ದಾರೆ. ಬಹುತೇಕ ಗ್ರಾಮಗಳ ಕಲೆಗಳಿಗೆ ಹಲಗೆ ಅನಿವಾರ್ಯ ಹಿನ್ನೆಲೆವಾದ್ಯ ಹಲಗೆಯಿದ್ದರೇ ಕುಣಿತಕ್ಕೂ ಗತ್ತು. ಹಲಗೆ ಕುಣಿತವನ್ನು ಒಬ್ಬಿಬ್ಬರು ನಡೆಸುವುದಕ್ಕಿಂತ ಹತ್ತಾರು ಜನ ಗುಂಪಿನಲ್ಲಿ ನಡೆಸುವುದನ್ನು ನೋಡಲು ಬಹಳ ಅಕರ್ಷಣೀಯ, ಹಲಗೆ ಕುಣಿತಕ್ಕೆ ಪೋಷಕವಾಗಿ ಓಲಗ, ಸಮಾಳಗಳನ್ನು ಬಳಸುವುದುಂಟು. ಹಲಗೆ ಬಾರಿಸುವವರಿಗೆ, ಸ್ಫೂರ್ತಿ ಬಂತೆಂದರೆ, ಅದರಲ್ಲೂ ಒಬ್ಬರಿಗೊಬ್ಬರಿಗೆ ಸ್ಪರ್ಧೆ ಇತ್ತೆಂದರೆ ಬಡಿತದ ಬೆಡಗು ನೋಡಬೇಕು. ಆ 'ಬಡಿತ'ದಲ್ಲೇ 'ಸವಾಲ್–ಜವಾಬ್' ನಡೆಸುವ ಜಾಣರೂ ಇದ್ದಾರೆ.

ಹಲಗೆ ಧಾರ್ಮಿಗೆ ವಾದ್ಯವೂ ಹೌದು; ಸಾಮಾಜಿಕ ಹಾಗೂ ಸಾಂಸ್ಕೃತಿಕ ವಾದ್ಯವೂ ಹೌದು: ಸಾಮಾಜಿಕ ಹಾಗೂ ಸಾಂಸ್ಕೃತಿಕ ವಾದ್ಯವೂ ಹೌದು!

## 18. ಹುಲಿ ವೇಷ

'ಹುಲಿವೇಷ ದಲ್ಲಿ ಪ್ರಮುಖವಾದುದು ಬಣ್ಣಗಾರಿಕೆ, ಕಲಾವಿದನು ಚಡ್ಡಿಯೊಂದನ್ನು ಬರಿ ಮೈಯಲ್ಲೇ ಇರುತ್ತಾನೆ. ಮುಖಕ್ಕೆ ಹುಲಿಯ ಮುಖವಾಡವನ್ನು ಧರಿಸಿರುತ್ತಾನೆ. ಮೈಗೆ ಹುಲಿಯ ಚರ್ಮವನ್ನು ಹೋಲುವಂತಹ ಹಳದಿ–ಕಪ್ಪು ಪಟ್ಟೆಗಳನ್ನು ಬಳಿದುಕೊಂಡಿರುತ್ತಾನೆ. ಕೆಲವರು ಮುಖವಾಡಕ್ಕೆ ಬದಲು ತಲೆಯ ಭಾಗಕ್ಕೆ ಹುಲಿಯ 'ಕವಿಯಾರ' ವನ್ನು ಕಟ್ಟಿಕೊಂಡು ಉಳಿದೆಲ್ಲಾ ಭಾಗಕ್ಕೆ ಬಣ್ಣವನ್ನೇ ಬಳಸುತ್ತಾರೆ. ಕೈಗಳಿಗೆ ಹುಲಿ ಉಗುರನ್ನು ಹೋಲುವಂತಹ ಮೊನಚಾದ ದೊಡ್ಡ ಉಗುರನ್ನು ಹೋಲುವಂತಹ ಮೊನಚಾದ ದೊಡ್ಡ ಉಗುರುಗಳನ್ನು ಧರಿಸಿರುತ್ತಾರೆ. ಈ ಉಗುರಿಗೆ ಬಹುತೇಕ ಹಿಪ್ಪೆಕಾಯಿನ ತೊಗಟೆಯನ್ನು ಬಳಸುವುದೇ ಹೆಚ್ಚು. ನಾರಿನಿಂದ ಮಾಡಿದ ಬಾಲವನ್ನು ಹಿಂದಕ್ಕೆ ಕಟ್ಟಿಕೊಂಡಿರುತ್ತಾರೆ. ಒಬ್ಬ ವ್ಯಕ್ತಿಗೆ ಸರಿಯಾಗಿ ಹುಲಿವೇಷ ಹಾಕಬೇಕಾದರೆ ಕನಿಷ್ಟ ಮೂರು ಗಂಟೆಯಾದರೂ ಬೇಕು ಎನ್ನುತ್ತಾರೆ.

ಹುಲಿವೇಷ ಧರಿಸಿದ ಕಲಾವಿದ ತಮಟೆಯ ಗತ್ತಿಗೆ ವಿವಿಧ ಭಂಗಿಗಳಲ್ಲಿ ಕುಣಿಯುತ್ತಾನೆ. ಅವನ ಸೊಂಟಕ್ಕೆ ಪಟ್ಟಿಯೊಂದನ್ನು ಕಟ್ಟಿ ಅದಕ್ಕೆ ಹಗ್ಗವನ್ನು ಸೇರಿಸಿ, ಇಬ್ಬರು–ಮೂವರು ಹಿಡಿದಿರುತ್ತಾರೆ. ಮುಂದೆ ಹಿಡಿದ ಗೆಜ್ಜೆ ಕಟ್ಟಿದ ಉದ್ದವಾದ ಜಿಗಿಯುವ ರೀತಿ ಆಕರ್ಷಕವಾಗಿರುತ್ತದೆ. ಮುಂದೆ ಜಿಗಿಯುವಾಗ ಹಗ್ಗವನ್ನು ಹಿಡಿದಿರುವವರು ಅವನನ್ನು ಹಿಂದಕ್ಕೆ ಎಳೆಯುತ್ತಾರೆ.

ಬಲವಾದ ಇಬ್ಬರು ಹೆಗಲಮೇಲೆ ಹೊತ್ತ ಉದ್ದವಾದ ಎರಡು ಬಿದಿರಿನ ಗಳಗಳ ಮೇಲೆ. ಹುಲಿ ವೇಷಧಾರಿ ಕುಪ್ಪಳಿಸುತ್ತ ಕುಣಿಯುವುದು. ಲಾಗ ಹಾಕುವುದು ಮೊದಲಾದ ಆಟಗಳನ್ನು ತೋರಿಸುತ್ತಾನೆ.

ಬಾಬಯ್ಯನ ಹಬ್ಬನ ಸಂದರ್ಭದಲ್ಲಿ ಹುಲಿವೇಷದ ಜೊತೆಗೇ ಬರುವ ಮತ್ತೊಂದು ಮನರಂಜನೆ ಕಲೆ ಕರಿಬೇವಿನ ಸೊಪ್ಪಿನ ವೇಷ. ಚಿತ್ರದುರ್ಗ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಇದು ಕಂಡುಬರುತ್ತದೆ.

ಕಲಾವಿದ ಬರಿಮೈಯಲ್ಲಿದ್ದು ಲಂಗೋಟಿಯನ್ನು ಕಟ್ಟಿರುತ್ತಾನೆ. ಮುಖಕ್ಕೆ ಮಸಿ ಬಳಿದುಕೊಂಡು ಸುಣ್ಣದಿಂದ ಅಲ್ಲಲ್ಲಿ ಚುಕ್ಕೆಗಳನ್ನು ಇಟ್ಟುಕೊಂಡಿರುತ್ತಾನೆ. ತಲೆಗೆ ರುಮಾಲಿನಂತೆ ಸುತ್ತಿಕೊಂಡ ಸೀರೆಯ ಕೊನೆಯ ಭಾಗವನ್ನು ಬೆನ್ನು ಹಿಂದಕ್ಕೆ ನರಿಗೆ ಮಾಡಿ ತೂಗುಬಿಟ್ಟಿರುತ್ತಾನೆ.

ಕತೆಯ ಮೇಲೆ ಕೂತು, ಕರಿಬೇವಿನ ಸೊಪ್ಪನ್ನಿಟ್ಟುಕೊಂಡು ಸೊಪ್ಪಮ್ಮ ಸೊಪ್ಪಮ್ಮ' ಎಂದು ಕೂಗುತ್ತ ಬೀದಿಯ ಜನರನ್ನೆಲ್ಲಾ ನಲಿಸಿ ನಗಿಸುತ್ತಾನೆ. ಕತ್ತೆಗೂ. ಕರಿಬೇವಿನ ಸೊಪ್ಪಿಗೂ ಏನು ಸಂಬಂಧವೆಂದು ತಿಳಿದು ಬಂದಿಲ್ಲ. ಸಾಮಾನ್ಯವಾಗಿ ಸಂಜೆಯ ವೇಳೆ ಪ್ರದರ್ಶಿತವಾಗುವ ಈ ಕಲೆ ಮನರಂಜನೆಗಾಗಿಯೇ ಹುಟ್ಟಿಕೊಂಡಿರುವುದು.

# 19. ಹೋಳಿ ಕುಣಿತ

ಹೋಳಿ ಹಬ್ಬಕ್ಕೆ ಭಾರತದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ. ಅದನ್ನು ಆಚರಿಸುವ ರೀತಿ ಬೇರೆ ಬೇರೆ ಕಡೆ ಬೇರೆ ಬೇರೆ ಇರಬಹುದು. ಆದರೆ ಅದರ ಹಿನ್ನೆಲೆ ಮತ್ತು ಉದ್ದೇಶ ಒಂದೇ ಹೋಳಿ ಹಬ್ಬ ಋತುಮಾನದ ಪ್ರಕಾರ ಒಂದು ಸಂಕ್ರಮಣ ಕಾಲ, ಅದು ಹೊಸ ಋತುವಿನ ಪ್ರಾರಂಭದ ದಿನ.

ಕಾಮದಹನ ಹೋಳಿ ಹಬ್ಬ'ದ ವಿಶೇಷ ಈ ಸಂದರ್ಭದಲ್ಲಿ ನಡೆಯುವ ಕುಣಿತವೇ 'ಹೋಳಿ ಕುಣಿತ' ಇದು ಹೆಚ್ಚಾಗಿ ಮರಾಠಿಯವರಲ್ಲಿ ಕಂಡುಬರುತ್ತದೆ. ಇವರನ್ನು ಕೆಲವು ಕಡೆ 'ಕುಡುಬೀ' ಎಂದು ಕರೆಯುತ್ತಾರೆ. ಕುಡುಬಿಯರಲ್ಲಿ ಗೋವೆ ಕುಡುಬಿಯರು ಕುಮ್ರೀ ಕುಡುಬಿಯರು, ಕೊಡಿಯಾಲ ಕುಡುಬಿಯರು ಮೊದಲಾದ ಒಳ ಪಂಗಡಗಳಿವೆ. ಈ ಹಬ್ಬವನ್ನು ಖಾರ್ವಿ ಭಂಡಾರರೂ ಆಚರಿಸುವುದುಂಟು ಹೋಳಿ ಹಬ್ಬ. ಒಂದು ಸಾಂಕೇತಿಕ ಆಚರಣೆ ಮನರಂಜನೆಗೇ ಇಲ್ಲಿ ಪಟ್ಟ ಇಲ್ಲಿ ಯಾವುದೇ ಪೂಜೆ ಪುನಸ್ಕಾರಗಳಿಲ್ಲ. ಸಾಮಾನ್ಯವಾಗಿ ಈ ಆಚರಣೆಯ ಪ್ರಮುಖ ಅಂಶವೆಂದರೆ, ಅನಂಗನಾದ ಕಾಮನಿಗೆ ಕೃತಕ ದೇಹ ಮಾಡಿ ಅದನ್ನು ಎಲ್ಲರೂ ಒಟ್ಟಿಗೆ ಸೇರಿ ಕಟ್ಟಿಗೆಯಲ್ಲಿ ಸುಡುವುದು. ಕಾಮನ ಹಬ್ಬಕ್ಕೆ ಮುಂಚೆ ಕಲಾವಿದರು ಮನೆ ಮನೆಗೆ ಹೋಗಿ ಸಂಗ್ರಹಿಸಿದ ಊಟ ಮಾಡಿ ನಲಿದು ಕುಣಿಯುತ್ತಾರೆ. ಹೋಳಿ ಕುಣಿತದಲ್ಲಿ ಬಹುತೇಕ ಯುವಕರ ಪಾತ್ರವೇ ಹೆಚ್ಚು.

ಬಿಳಿಯ ನೆರಿ ಅಂಗಿ (ದೌಲಂಗಿ) ಕಸೆ ಹಾಕಿ ಉಟ್ಟ ಕೆಂಪು ಬಣ್ಣದ ಚೌಕಳಿ ಸೀರೆ, ಕೈಗಳಿಗೆ ಬಳೆ, ಜೊತೆಗೆ ಹೂವಿನ ದಂಡೆ, ಎದೆಯ ಭಾಗಕ್ಕೆ ಅಡ್ಡಲಾಗಿ ಹಾಕಿಕೊಂಡ ಕೆಂಪು ಮತ್ತು ಬಿಳಿ ಬಣ್ಣದ ಎರಡು ಶಲ್ಯಗಳು, ತಲೆಗೆ ಸುತ್ತಿದ ಪೇಟ ಮತ್ತು ಅದರ ಮೇಲ್ಭಾಗಕ್ಕೆ ಹೂವಿನ ಮಾಲೆಯ ಅಲಂಕಾರ, ಜೊತೆಗೆ ಸಿಕ್ಕಿಸಿದ ಕೆಂಪು ಕಪ್ಪು ಬಿಳಿ ಬಣ್ಣದ ಪಕ್ಷಿಯ ಗರಿಗಳು, ಕಾಲಿಗೆ ಕಟ್ಟಿದ ಗೆಜ್ಜೆ, ಗಗ್ಗರ ಅಥವಾ ಕಾಲ್ಕಡಿ (ಕಾಲಂದಿಗೆ), ಕೊರಳಿಗೆ ಧರಿಸಿದ ಮೂಂಜೆ (ನೇವಳ–ಸರ)–ಇವಿಷ್ಟು ಕಲಾವಿದರ ವೇಷಭೂಷಣಗಳು, ಕುಣಿತದಲ್ಲಿ ಹೇಳಿಕೊಳ್ಳುವಂತಹ ವೈವಿಧ್ಯತೆಯಿಲ್ಲದಿದ್ದರೂ ಬೇರೆ ಬೇರೆ ಕುಡುಬಿಯರಲ್ಲಿ ಪ್ರದರ್ಶನಕ್ಕಾಗಿ ಧರಿಸುವ ವೇಷಭೂಷಣಗಳಲ್ಲಿ ವೈವಿಧ್ಯತೆಯಿರುವುದು. ಕಂಡುಬರುತ್ತದೆ.

ಗೋವೆ ಕುಡುಬಿಯರಂತೆ ಹಟ್ಟಿಮುಟ್ಟಿನ ಪಕ್ಷಿಯ ರೆಕ್ಕೆಯನ್ನು ಧರಿಸುವ ಪದ್ಧತಿ ಬೇರೆ ಪಂಗಡದವರಲ್ಲಿದ್ದಂತೆ ಕಂಡುಬರುವುದಿಲ್ಲ. ಮರಾಠಿ ಕುಡುಬಿಯರು ತಲೆಗೆ ಜರೀ ಪೇಟ ಧರಿಸಿ, ಅದಕ್ಕೆ ಹೂವಿನ ಮಾಲೆ ಸುತ್ತಿರುತ್ತಾರೆ. ಬಿಳಿಯ ದೌಲಂಗಿ ಕೆಂಪು ಅಥವಾ ಬಿಳಿಯ ಬಣ್ಣದ ಇಜಾರು (ಕಚ್ಚೆ

ಪಂಚೆ), ಕಾಲಿಗೆ ಗೆಜ್ಜೆ, ಕೊರಳಿಗೆ ಬೆಳ್ಳಿ ಸರ, ಹೂವಿನ ಮಾಲೆ ಹಾಕಿಕೊಂಡಿರುತ್ತಾರೆ. ನೆರಿ ಅಂಗಿ, ಪೇಟ ಬಣ್ಣದ ಕಚ್ಚೆ ಪಂಚೆ, ಕಾಲಿಗೆ ಗೆಜ್ಜೆ, ಹೆಗಲ ಮೇಲೆ ಶಾಲು–ಇವು ನಾಡ ಕುಡುಬಿಯರು ಹಾಕುವ ವೇಷಭೂಷಣಗಳು.

ಕುಡುಬಿಯರ 'ಹೋಳಿ ಕುಣಿತ' ಕ್ಕೆ ಹಿನ್ನೆಲೆಯ ಮುಖ್ಯವಾದ್ಯ ಗುಮಟೆ, ತಂಡದ ನಾಯಕನೇ ಗುಮಟೆ ಬಾರಿಸುವವನು. ಇದನ್ನು ಹಗ್ಗ ಕಟ್ಟಿ ಕೊರಳಿಗೆ ಜೋಲು ಬಿಟ್ಟುಕೊಂಡಿರುತ್ತಾನೆ. ಕಲಾವಿದರು ಕೈಯಲ್ಲಿ ಕಂಚು ಹಿತ್ತಾಳೆಯ ತಾಳಗಳನ್ನು ಹಿಡಿದುಕೊಂಡು ತಮ್ಮದೇ ಆದ ಭಾಷೆ (ಕುಡುಬೀ) ಯಲ್ಲಿ ವಿವಿಧ ಕಥಾ ಸಂವಾದಗಳನ್ನು ಹಾಡುತ್ತಾ ಗುಮಟೆ ವಾದ್ಯದ ಗತ್ತಿಗೆ ಕುಣಿಯುತ್ತಾರೆ.

ಕುಡುಬಿಯರು ಸಾಮಾನ್ಯವಾಗಿ ಹೋಳಿ ಕುಣಿತವನ್ನು ಏಕಾದಶಿಯ ದಿನದಂದು ತೆಂಗಿನಕಾಯಿ ಇಟ್ಟು ಪೂಜೆಮಾಡಿ ಪ್ರಾರಂಭಿಸುತ್ತಾರೆ. ಆದರೆ ಕೊಡಿಯಾಲ ಕುಡುಬಿಯರಲ್ಲಿ ಫಾಲ್ಗುಣ ಹುಣ್ಣಿಮೆಯ ದಿನದಂದು ಆರಂಭಿಸಿ, ಪಂಚಮಿಯಂದು ಕುಣಿತವನ್ನು ಮುಕ್ತಾಯಗೊಳಿಸಿ ಸಾಮೂಹಿಕ ಸ್ನಾನ ಮಾಡುವುದು ರೂಢಿ, ಹೋಳಿ ಹುಣ್ಣಿಮೆಯ ದಿನ 'ಓಕುಳಿ' ಆಡುವುದೂ ರೂಢಿಯಲ್ಲಿದೆ.

ಕುಡುಬಿಯರ ಹೋಳಿ ಕುಣಿತದಲ್ಲಿ ಕೋಲಾಟವಾಡುವುದೂ ಉಂಟು, ಇವರು ಹೋಳಿ ಹಬ್ಬ ಮುಗಿದ ನಂತರ ವೇಷಭೂಷಣಗಳನ್ನು ಮತ್ತು ಸಾಧನ ಸಲಕರಣೆಗಳನ್ನು ಗಂಟು ಕಟ್ಟಿ ಇಟ್ಟರೆ ಮತ್ತೆ ಮುಂದಿನ ಹೊಸ ವರ್ಷಕ್ಕೆ ತೆಗೆಯುವುದು. ಈ ರೀತಿಯ ಸಂಪ್ರದಾಯ ಕೊಡವರಲ್ಲಿಯೂ ಇದೆ. ಅವರಲ್ಲಿಯೂ ಸಹ ಹುತ್ತರಿ ಹಬ್ಬದಲ್ಲಿ ಆಡುವ ಬೆತ್ತದ ಕೋಲುಗಳನ್ನು ಅಂದು ಮುಚ್ಚಿಟ್ಟರೆ ಮತ್ತೆ ತೆಗೆಯುವುದು ಹುತ್ತರಿ ಹಬ್ಬಕ್ಕೇ.

ಒಂದು ಜನಪದ ಕುಣಿತ ಪ್ರಕಾರದಲ್ಲಿ ಕಥೆ,ಹಾಡು,ವೇಷಭೂಷಣ, ಇತ್ಯಾದಿಗಳು ಹೇಗೆ ತಮ್ಮ ಕಲಾತಂಡದಲ್ಲಿ ಜೋಡಿಸಿಕೊಳ್ಳುತ್ತಾರೆಂಬ ಮಾಹಿತಿಯನ್ನು ಕಲೆಹಾಕಿದ್ದೇನೆ.

ನಾನೀಗಲೇ ಪ್ರಸ್ತಾಪಿಸಿದಂತೆ ಉತ್ತರ ಕರ್ನಾಟಕ 5 ಜಿಲ್ಲೆಗಳ ಪ್ರಮುಖ ಹಳ್ಳಿಗಳಿಗೆ ಭೇಟಿ ನೀಡಿದ್ದೇನೆ. ಒಳಹೊಕ್ಕು ನೋಡಲು ಸಾಧ್ಯವಾಗಿಲ್ಲ. ಅಲ್ಲಿನ ಪ್ರಮುಖ ಕುಣಿತಗಳು ಕುರಿತು ಟಿಪ್ಪಣಿ ಮಾಡಿಕೊಂಡು ಬಂದಿದ್ದೇನೆ. ಕಲಬುರ್ಗಿ ವಿಶ್ವವಿದ್ಯಾಲಯ ಕರ್ನಾಟಕ ವಿಶ್ವವಿದ್ಯಾಲಯಗಳ ಜಾನಪದ

ವಿಭಾಗಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸಿದ್ದೇನೆ. ಪ್ರಮುಖ ಜಾನಪದ ವಿದ್ವಾಂಸರೊಂದಿಗೆ ಚರ್ಚಿಸಿದ್ದೇನೆ. ಇನ್ನೂ ಮುಂದಿನ 6 ತಿಂಗಳಲ್ಲಿ ಉಳಿದ ಜಿಲ್ಲೆಗಳು ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ವಿಶ್ವವಿದ್ಯಾಲಯ ಹಂಪಿ, ಕರ್ನಾಟಕ ಜಾನಪದ ಅಕಾಡೆಮಿ, ಮೈಸೂರು ವಿಶ್ವವಿದ್ಯಾಲಯದ ಜಾನಪದ ವಿಭಾಗ ಮುಂತಾದ ಸ್ಥಳಗಳಿಗೆ ಭೇಟಿ ನೀಡಿ ಜನಪದ ಕುಣಿತಗಳ ಕುರಿತು ಸವಿಸ್ತಾರ ಮಾಹಿತಿಯನ್ನು ಕಲೆಹಾಕಿಕೊಳ್ಳಬೇಕೆಂದು ಯೋಚಿಸಿದ್ದೇನೆ.

# 20. ಭೂತೇರ ಕುಣಿತ

ಬೀದರ, ಗುಲಬರ್ಗಾ ಜಿಲ್ಲೆಗಳಲ್ಲಿ ಕಂಡು ಬರುವ ಪ್ರಸಿದ್ಧವಾದ ಜನಪದ ಕುಣಿತ, ಇದು ಸಹ ತುಳಜಾಪೂರಿನ ಅಂಬಾಬಾಯಿ (ಅಂಬಾ ಭವಾನಿ)ಯ ಮತ್ತು ಎಲ್ಲಮ್ಮನ ಆರಾಧನೆಯ ಹಿನ್ನಲೆಯಲ್ಲಿ ಹುಟ್ಟಿರುವ ಕುಣಿತ. ಭೂತೇರನ್ನು ದೇವರ ಹೆಸರಲ್ಲಿ ಬಿಡುವ ಸಂಪ್ರದಾಯವಿದೆ. ಕೈಯಲ್ಲಿ ಧೂಪ (ದೀವಟಿಗೆ) ಹಿಡಿದುಕೊಂಡು ಹಾಡುವ ಗಾಯಕರೆ ದೂಪೇರು. ಕಾಲ ಬದಲಾದಂತೆ ಧೂಪೇರ ಪದ ಬದಲಾಗಿ ಭೂತೇರ ಆಗಿರಬಹುದು. ಭೂತೆ–ಭೂತುಣಿ ಎಂದು ಪಟ್ಟ ಕಟ್ಟುವ ಪದ್ಧತಿ ಬೀದರ ಜಿಲ್ಲೆಯಲ್ಲಿ ವಿಶಿಷ್ಟವಾದ ಭೂತೇರ ಕುಣೀತದಲ್ಲಿ ಆರರಿಂದ ಹತ್ತು ಮಂದಿ ಇರುತ್ತಾರೆ. ಕುತ್ತಿಗೆಯಿಂದ ಕಾಲಿನವರೆಗೆ ಎಣ್ಣೆಯ ಜಿಡ್ಡಿನಿಂದ ಕಮಟುಗಟ್ಟಿದ (ಕರಿಯ) ನಿಲುವಂಗಿ. ಹಣೆಗೆ ಧಾರಾಳವಾಗಿ ಅರಶಿನ ಕುಂಕುಮದ ಪಟ್ಟೆ ಬರೆದು  ಕೊಂಡಿರುತ್ತಾರೆ ಕರೆದುಕೊಂಡಿರುವತ್ತಾರೆ. ಕೊರಳಲ್ಲಿ ಕವಡೆಯ ಸರ, ಎದೆಯ ಮೇಲೆ ಕವಡೆಯ ಸರ ಕೈಯಲ್ಲಿ ಅಚ್ಚ ಹಸುರಿನ ಬಳೆ ಮುಂದೆ ಕವಡೆಯ ಕೈಗಡಗ, ಕಾಲಲ್ಲಿ ಗೆಜ್ಜೆ, ಎಡ ಕೈಯಲ್ಲಿ ಉರಿಯುವ ದೀವಟಿಗೆ, ಕುಣಿತಕ್ಕೆ ಮೊದಲು ಚಾಡಿಕೆಯನ್ನು (ಹಡಗಿ) ಪೂಜಿಸಿ ಅನಂತರ ಕುಣಿಯುತ್ತಾರೆ. ಇವರ ಕುಣಿತದ ಮೇಳದಲ್ಲಿ ಹಿಮ್ಮೇಳದವರು, ಮುಮ್ಮೇಳದವರೂ ಸೇರಿರುತ್ತಾರೆ. ಕೈಯಲ್ಲಿ ತುಂತುಣಿ ಹಿಡಿದು ಎಲ್ಲಮ್ಮ ತಾಯಿಯ ಹಾಡನ್ನು ಹಾಡುತ್ತ, ಹಾಡಿಗೆ ತಕ್ಕಂತೆ ಕುಣಿಯುತಾರೆ. ಮೇಳದಲ್ಲಿ ಒಬ್ಬಾತ ಡೋಲಕ (ಚರ್ಮವಾದ್ಯ) ಬಾರಿಸಿದರೆ, ಮತ್ತೆ ಕೆಲವರು ತಾಳುಗಳನ್ನು ಬಾರಿಸುವರು ಭೂತೇರರು ಅಂಬಾ ಭವಾನಿಯ ಮಹಿಮೆಗಳನ್ನು ಹಾಡುತ್ತ ಕುಣಿಯುತ್ತ ತಿರುಗುವರು. ಕೆಲವೊಮ್ಮೆ ದೂರದ ಊರುಗಳಿಗೆ ಹೋಗಿ ಕಥಾ ಪ್ರಸಂಗ, ನಾಟಕಗಳನ್ನಾಡುತ್ತ ತಿರುಗುವರು.

ಭೂತೇರರು ಸಂಪೂರ್ಣವಾಗಿ ಎಲ್ಲಮ್ಮ ದೇವಿಯ ಸಂಪ್ರದಾಯಕ್ಕೆ ತಮ್ಮನ್ನು ತಾವೇ ಅರ್ಪಿಸಿಕೊಂಡಿರುತ್ತಾರೆ. ದಾನದಿಂದ ಬಂದ ಹಣ ದವಸ ಧಾನ್ಯಗಳನ್ನು ತಮಗೆ ಎಷ್ಟು ಬೇಕೊ–ಅಷ್ಟು

ತಮ್ಮ ಉಪಜೀವನಕ್ಕಾಗಿ ಬಳಸಿಕೊಂಡು ಉಳಿದುದ್ದೆಲ್ಲಾ ದೇವಿಯ ಹೆಸರಿಗೆ ಮುಡುಪಾಗಿಡುತ್ತಾರೆ. ವಾರದ ಮಂಗಳವಾರ ಶುಕ್ರವಾರ ಊರೂರೂ ಕೇರಿ ಕೇರಿ ತಿರುಗಿ ಹಾಡಿ ಕುಣಿದು ಭಿಕ್ಷೆ ಬೇಡುತ್ತಾರೆ.

ಅಂಗಯ್ಯ ಹರಡಿಗೆ

ಮಂಗಯ್ಯ ದೀವಟಿಗೆ

ರಾಮು ರಾಮು.....

ಬಂಜೆಂಬ ಶಬ್ದ

ಬಿಡ ಬೇಡಂತಾರ

ರಾಮು ರಾಮು.....

ಎಲ್ಲಿ ಕಾಣಿ ಎಲ್ಲಿ ಕಾಣಿ

ಎಲ್ಲಮ್ಮ ನಂಥಕಿ.....

ಹೀಗೆ ಎಲ್ಲಮ್ಮ ತಾಯಿಯ ಆರಾಧಿಸುತ್ತಾ ಕುಣಿಯುತ್ತಾರೆ. ಇವರ ಕುಣಿತದಲ್ಲಿ ನಯ–ನಾಜೂಕ, ಒಯಾರ ಬದಲಾಗಿ ರೂಕ್ಷತೆ ಇರುತ್ತದೆ.

# 21. ಗೊರವರ ಕುಣಿತ

ಗೊರವರು ಕರ್ನಾಟಕದ ಉತ್ಕೃಷ್ಟ ವೃತ್ತಿ ಗಾಯಕರು. ವೃತ್ತಿ ಹಾಗೂ ಅರೆ ವೃತ್ತಿ ಗಾಯಕರಾದ ಗೊರವರು ಶೈವ ಸಂಬಂಧಿ ಸಾಂಪ್ರದಾಯಿಕ ಕುಣಿತ ಮಾಡುವರು. ಉತ್ತರ ಕರ್ನಾಟಕದಲ್ಲಿ ಮೈಲಾರಲಿಂಗ, ಗೊರವ, ಗೊಗ್ಗಯ್ಯ ಗಡ್ಡಬಡ್ಡಯ್ಯ ಎಂದು ಕರೆಯುತ್ತಾರೆ. ಮೈಲಾರಲಿಂಗರ ಆರಾಧ್ಯ ಭಕ್ತರು. ತಲೆಯ ಮೇಲೆ ಕರಡಿ ಕೂದಲಿನ ಕುಲಾವಿ, ಕರಿಯ ಕಂಬಳಿಯ ನಿಲುವಂಗಿ ಎದೆಗೆ ಅಡ್ಡಲಾಗಿ ಕವಡೆ ಸರಗಳ ಪಟ್ಟಿ ಹೆಗಲಲ್ಲಿ ಜೋಳಿಗೆ ಒಕ್ಕಳ ಗಂಟೆ, ತ್ರಿಶೂಲಿ, ಕೈಯಲ್ಲಿ ಡಮರುಗ, ಹಣೆಯಲ್ಲಿ ವಿಭೂತಿ ಕಂಕುಮ ಕಣ್ಣಿನ ಸುತ್ತ ವಿಭೂತಿಯ ಲೇಪ ಇವಿಷ್ಟು ಗೊರವರ ವೇಷಭೂಷಣಗಳು

ಯಾದಗಿರಿ, ಗುಲಬರ್ಗಾ ಜಿಲ್ಲೆಗಳಲ್ಲಿ ಅಧಿಕವಾಗಿ ಕಂಡು ಬರುತ್ತಾರೆ. ಗೊರವರ ಕುಣಿತ ರುದ್ರ ರಮಣೀಯ ಹತ್ತೆಂಟು ಮಂದಿ ಗೊರವರು ಗೋಲಾಕಾರದಲ್ಲಿ ಸುತ್ತುವದು, ಕೈಯಲ್ಲಿನ ಡಮರುಗವನ್ನು ಢಗ ಢಗ ಢಗ ಢಗ ಎಂದು ಸದ್ದು ಮಾಡುತ್ತಾ ಹಿಂದ್ಹೆಜ್ಜೆ ಮುಂದ್ಹೆಜ್ಜೆ ಹಾಕುತ್ತಾ ಕುಣಿಯಲಾರಂಭಿಸುತ್ತಾರೆ. ಹಿಂದೆ-ಮುಂದೆ ತಿರುಗುತ್ತಾ ಗಿರಕಿ ಹೊಡೆಯುತ್ತಾರೆ. ಕುಣಿತವು ತೀವ್ರತೆಯನ್ನು ಪಡೆದುಕೊಂಡಾಗ ಅವರ ಉಡುಗೆ ತೊಡಿಗೆಯ ರೌದ್ರತೆ ಕುಣಿತದೊಂದಿಗೆ ಸ್ಪಧಿಸುತ್ತಿದೆ ಎಂದು ನೋಡುವವರಿಗೆ ಕಾಣುತ್ತದೆ.

ಕುರುಬ ಜನಾಂಗದವರು ಹಬ್ಬ ಹುಣ್ಣಿಮೆಯ ವಿಶೇಷ ಸಂದರ್ಭಗಳಲ್ಲಿ ಗೊರವನನ್ನು ಕರೆಸಿ ಎಡೆಯಿಟ್ಟು ಬೇಡಿಕೊಳ್ಳುತ್ತಾರೆ. ಬಿಳಿಯ ಬಟ್ಟೆ, ತಲೆಯ ಮೇಲೆ ಅರಶಿನದ ರುಮ್ಮಾಲೂ ಹಣೆಯ ಮೇಲೆ ವಿಭೂತಿ ಅರಶಿನದ ಭಂಡಾರ ಹಚ್ಚಿಕೊಂಡು ಕಂಬಳಿ ಹೊದ್ದುಕೊಂಡು ಬರುವ ಬಗೆ ನೋಡಿದರೆ ಗುರಪ್ಪ, ಗೊಗ್ಗಯ್ಯ ಎಂದು ಕರೆಯುತ್ತಾರೆ.

ಮೈಲಾರಲಿಂಗನ ಮಹಿಮೆ, ಪವಾಡಗಳನ್ನು ಹಾಡುತ್ತಾ ತಿರುಗುವರು. ಮೈಲಾರಲಿಂಗನ ಕಾವ್ಯ ಗೊರವರ ಬಳುವಳಿಯೇ ಆಗಿದೆ. ಉತ್ತರ ಕರ್ನಾಟಕದ್ಯಂತ ಮೈಲಾರಲಿಂಗನ ಕ್ಷೇತ್ರಗಳಿವೆ. ಅಲ್ಲಲ್ಲಿ

ಗೊರವರು ಇದ್ದಾರೆ. ಕುರುಬರು, ಗೊರವ ಸಂಪ್ರದಾಯದವರು "ಗೊರವಪ್ಪನನ್ನು" ದೈವಾಂಶ ಸಂಭೂತ ಎಂದೇ ನಂಬಿರುತ್ತಾರೆ. ಉತ್ತರ ಕರ್ನಾಟಕ ಭಾಗದಲ್ಲಿ ವಗ್ಗೆ, ವಾಘ್ಯಾ ಎಂದು ಕರೆಯುತ್ತಾರೆ.

# 22. ಪುರವಂತರ ಕುಣಿತ

ಪುರವಂತರ ಕುಣಿತ ಜನಪದ ಆರಾಧನಾ ಕಲೆಗಳಲ್ಲಿ ಒಂದು ಭೂತೇರು, ಗೊರವರು, ಡೊಳ್ಳು ಮೇಳದವರು ಚಾಡಿಕೆ ಮೇಳದವರು–ಈ ಮುಂತಾದ ಕಲೆಗಳು ದೇವತಾರಾಧನೆಯ ಹಿನ್ನಲೆಯಲ್ಲಿ ಹುಟ್ಟಿದೆ. ಪುರುಷ ಪ್ರಧಾನ ಕಲೆ, ಹೈದ್ರಬಾದ ಕರ್ನಾಟಕದ ಜಿಲ್ಲೆಗಳಲ್ಲಿ ಪ್ರಚಲಿತದಲ್ಲಿರುವ ಪುರವಂತಿಕೆಯು ಶೈವ ಪರಂಪರೆಗೆ ಸೇರಿದ ವಿಶಿಷ್ಟವಾದ ಧಾರ್ಮಿಕ ಕುಣಿತ. ದಕ್ಷಿಣ ಕರ್ನಾಟಕದಲ್ಲಿ 'ವೀರಗಾಸೆ' ಎಂದು ಕರೆಯುತ್ತಾರೆ. ಈ ನಾಡಿನಲ್ಲಿ 'ಪುರವಂತರೆಂದು' ಕರೆಯುತ್ತಾರೆ. ವೀರಭದ್ರನ ವಿರಾವೇಶದ ಮಹತ್ವವನ್ನು ವೈಭವೀಕರಿಸುವ ದೈವಿಕ ಆಚರಣೆಗಳು ಪುರವಂತಿಕೆಯ ರೂಪದಲ್ಲಿ ಬೆಳೆದು ಬಂದಿದೆ. ಈ ಕಲೆ–ಕುಣಿತವನ್ನು ಮೈಗೂಡಿಸಿಕೊಂಡು ಬಂದವರು ಪುರವಂತರೆಂದು ಅಡ್ಡ ಹೆಸರು ಇಟ್ಟುಕೊಂಡಿರುತ್ತಾರೆ. ಬಡಿಗ ಪಂಚಾಳ ವರ್ಗದ ಜನ ಈ ಪುರವಂತಿಕೆಯನ್ನು ಅನುವಂಶಿಕವಾಗಿ ಮೈಗೂಡಿಸಿಕೊಂಡು ಬಂದಿರುತ್ತಾರೆ.

ಪುರವಂತರ ವೇಷಭೂಷಣ ರುದ್ರ ರಮಣೀಯವಾಗಿರುತ್ತವೆ. ತಲೆಗೆ ಕಾವಿ ರೇಷ್ಮೆ ರುಮಾಲ, ರಣಗೂದಲ ಚೌರಿ, ಕಾವಿ ರುಮಾಲು, ಬಣ್ಣದ ಕಚ್ಚೆ ದೋತ್ರ ಹಣೆ ಮೇಲೆ ಡಾಳ ವಿಭೂತ ಕೊರಳಲ್ಲಿ ರುದ್ರಾಕ್ಷಿ ಮಾಲೆ, ಕಾಲಲ್ಲಿ ಗೆಜ್ಜೆ, ಕೈಯಲ್ಲಿ ಕತ್ತಿ, ಪಂಚ ಮುದ್ರೆಗಳು, ತೋಳು ಕಟ್ಟುಗಳು, ವಿವಿಧ ಉದ್ದಳತೆಗಳುಳ್ಳ ಬೆಳ್ಳಿ–ತಾಮ್ರದ ಶಸ್ತ್ರಗಳು ಎದೆಯ ಮೇಲೆ ವಿರಭದ್ರ ದೇವರ ರೂಪ ಇವು ಪುರವಂತಿಕೆ ಕಲಾವಿದರ ವೇಷಭೂಷಣಗಳು.

ಶಿವನ ಅವತಾರವೆಂದು ಶೈವ ಪರಂಪರೆಯ ಮುಖ್ಯವಾಹಿನಿ ಆಗಿದೆ. ಜಾತ್ರೆ–ಉತ್ಸವ, ಮದುವೆ ಅನೇಕ ಸಂದರ್ಭಗಳಲ್ಲಿ ಈ ಕುಣಿತ ಪ್ರದರ್ಶಿಸುತ್ತಾರೆ. ಕಲಾವಿದರು ಸಮಾಳ, ಶಹನಾಯಿ, ತಾಳು, ವಿವಿಧ ವಾದ್ಯಗಳಗತ್ತಿಗೆ ತಕ್ಕಂತೆ ವೀರಾವೇಶದಿಂದ ಕುಣಿಯುತ್ತಾರೆ. ಮಧ್ಯ–ಮಧ್ಯ ವೀರಭದ್ರನ ಪರಾಕ್ರಮವನ್ನು ವರ್ಣಿಸುತ್ತಾ ಒಡಬು ಹೇಳುತ್ತಿದ್ದರೆ ಮತ್ತೊಬ್ಬ 'ಖಡೆ ಖಡೇ ಜಲಹೇ' 'ಆಹಾ ವೀರಭದ್ರ' ಎನ್ನುತ್ತಾರೆ.

ಇವರ ಕುಣಿತದ ಘರ್ಜನೆಗೆ ಜನ ಭಯಭೀತರಾಗುತ್ತಾರೆ. ಇವರ ಕುಣಿತದಲ್ಲಿ ಪೌರುಷತ್ವವಿದೆ, ಕೌದ್ರತೆ ಮತ್ತು ಸಮರಾವೇಶ ಕಂಡು ಬರುತ್ತದೆ. ಪುರವಂತ ಕುಣಿತದ ವಿಶೇಷ ಆಕರ್ಷಣೆ ಎಂದರೆ ವಿವಿಧ ಬಗೆಯ ಶಸ್ತ್ರ ಪವಾಡಗಳನ್ನು ಮಾಡುತ್ತಾರೆ. ಶಸ್ತ್ರ ಪವಾಡಗಳು ನೋಡಿದರೆ ಎದೆ ಝುಲ್ಲನೆಸಿಸುತ್ತದೆ. ಜೊತೆಗೆ ವೀರಭದ್ರ ದೇವರ ಬಗೆಗಿನ ಭಕ್ತಿ ಆವೇಶವಾಗಿ ಹರಿಯುತ್ತದೆ. ಬೀದರಿನ ಹುಮನಾಬಾದ ವೀರಭದ್ರೇಶ್ವರ ಜಾತ್ರೆ, ಚಾಂಗಲೇರ ವೀರಭದ್ರೇಶ್ವರ ಜಾತ್ರೆ ಗುಲಬರ್ಗಾದ ಕೋರವಾರದ ಅಣವೀರಭದ್ರೇಶ್ವರ ಜಾತ್ರೆ ರಟಕಲ್ ರೇವಣಸಿದ್ದೇಶ್ವರ ಜಾತ್ರೆ, ಹಾಗೂ ಸೂಗೂರು, ನೇಲೋಗಿ, ಸಿಂಧನೂರು, ಮುಂತಾದ ಕಡೆಗಳಲ್ಲಿ ಪುರವಂತರ ಕುಣಿತ ಕಂಡು ಬರುತ್ತದೆ.

# 23. ಜೋಗತಿ ಕುಣಿತ

ಜೋಗತಿಯರು ಸವದತ್ತಿ ಎಲ್ಲಮ್ಮನ ಭಕ್ತರು ಯಲ್ಲಮ್ಮನ ಹೆಸರ ಮೇಲೆಯೇ ಇವರನ್ನು ಬಿಟ್ಟಿರುತ್ತಾರೆ. ಯಲ್ಲಮ್ಮ ದೇವಿಯ ಮೂರ್ತಿಯನ್ನು ಇಟ್ಟುಕೊಂಡಿರುವ ಬುಟ್ಟಿಯನ್ನು ಇಲ್ಲವೆ ಕೊಡವನ್ನು ಹೊತ್ತುಕೊಂಡು ಸಂಚರಿಸುತ್ತಾರೆ. ಜೋಗತಿಯಲ್ಲಿ ಸ್ತ್ರೀಯರು–ಪುರುಷರೂ ಇಬ್ಬರೂ ಇರುತ್ತಾರೆ. ಹಸಿರು, ಹಳದಿ, ಕೆಂಪು ಸೆರಗಿನ ಸೀರೆ, ಕೈಯಲ್ಲಿ ಹಸಿರು  ಬಳೆ, ಕೊರಳಲ್ಲಿ ಕವಡೆ ಸರ, ಕಾಲಿಗೆ ಗೆಜ್ಜೆ ಹಣೆಗೆ ಅಗಲವಾದ ಕುಂಕುಮ ಅರಶಿನ ಭಂಡಾರ, ತಲೆಗೆ ಹೂ (ದಂಡಿ), ತಲೆಯ ಮೇಲೆ ತುಂಬಿದ ನೀರಿನ ಕೊಡ ಇವು ಜೋಗತಿಯರ ವೇಷ ಭೂಷಣಗಳಾಗಿವೆ.

ಯಲ್ಲಮ್ಮ ದೇವಿಯ ಹಾಡುಗಳನ್ನು ಹಾಡುತ್ತಾ ಕುಣಿಯುತ್ತಾರೆ. ಇವರ ಕುಣಿತಕ್ಕೆ ಚಾಡಿಕೆ, ತುಂತುಣಿ, ತಾಳು ಮುಂತಾದ ವಾದ್ಯಗಳಿರುತ್ತವೆ. ವಾದ್ಯ ನಾದಕ್ಕೆ ತಕ್ಕಂತೆ ಪಟಪಟ ಕುಣಿಯುತ್ತಾರೆ, ತಿರುಗುತ್ತಾರೆ ಗಿರಕಿ ಹೊಡೆಯುತ್ತಾರೆ. ತಲೆಯ ಮೇಲೆ ತುಂಬಿದ ಕೊಡ ಇಟ್ಟುಕೊಂಡು ಕುಣಿಯುವುದನ್ನು ನೋಡಿದರೆ ಆಶ್ಚರ್ಯ ಆಗದೆ ಇರದು. ಕೊಡವನ್ನು ಕೈಯಲ್ಲಿ ಹಿಡಿಯುವುದಿಲ್ಲ, ನಡೆಯುವಾಗ, ಏಳುವಾಗ, ಕೂಡುವಾಗ ಕುಣಿಯುವಾಗ ಕೊಡ ಸಮತೋಲನದಿಂದ ಇರುತ್ತದೆ. ತಲೆಯ ಮೇಲೆ ತುಂಬಿದ ಕೊಡ ಹೊತ್ತುಕೊಂಡು ಕೈ ಮುಟ್ಟದೆ ನೆಲದ ಮೇಲಿರಿಸಿದ ನಾಣ್ಯ, ರೂಪಾಯಿ, ನೋಟುಗಳನ್ನು ಬಾಯಿಯಿಂದ ತೆಗೆಯುತ್ತಾರೆ. ಗುಲಬರ್ಗಾದ ಶಹಾಬಜಾರನ ಸಂತೋಷ ಜೋಗತಿ ಈ ಕುಣಿತದ ಕುರಿತು ಮಾಹಿತಿ ನೀಡಿರುತ್ತಾರೆ.

ಜೋಗತಿಯರು ಭೂತೇರು, ಗೊಂದಲಿಗರು ಹೆಚ್ಚು–ಕಡಿಮೆ ಸಾಮ್ಯತೆಯನ್ನು ಹೊಂದಿರುತ್ತಾರೆ. ದೇವಿಯ ಆರಾಧಿಸುತ್ತಾ, ಹಾಡುಗಳನ್ನು ಹಾಡುತ್ತಾ ಊರೂರು ತಿರುಗುತ್ತಾ ಭಿಕ್ಷೆ ಬೇಡುತ್ತಾರೆ. ಗುಲಬರ್ಗಾದ ಶಹಾಬಜಾರನ ಖ್ಯಾತ ಜೋಗತಿ ಸಂತೋಷಿ ಈ ಬಗ್ಗೆ ಮಾಹಿತಿ ನೀಡಿದ್ದು ಬೆನಕನಳ್ಳಿ ಎಲ್ಲಮ್ಮ, ಬೀದರಿನ ವಳಕೋಟಿ ಭವಾನಿ ದಸರಾ ಮೆರವಣಿಗೆಯಲ್ಲಿ, ಕಲಬುರಗಿಯ ಚುಂಚುರ ಮಾಪುರ

ಎಲ್ಲಮ್ಮನ ಜಾತ್ರೆಯಲ್ಲಿ ಜೋಗತಿಯರು–ಭೂತೇರರು ಹೆಚ್ಚಾಗಿ ಕಾಣಸಿಗುತ್ತಾರೆ. ದೇವಿಯ ಆರಾಧನೆಯ ಹಿನ್ನಲೆಯಾಗಿ ಹುಟ್ಟಿಕೊಂಡ ಈ ಕುಣಿತ ಜೋಗತಿಯರು ಯಲ್ಲಮ್ಮ ತಾಯಿಗೆ ಎಷ್ಟು ಸಮರ್ಪಿಸಿ ಕೊಂಡಿದ್ದಾರೆ ಎಂಬುದು ತಿಳಿಯುತ್ತದೆ.

# 24. ಹೆಜ್ಜೆ ಕುಣಿತ

ಉತ್ತರ ಕರ್ನಾಟಕದ ಭಾಗ ಹಿಂದೂ–ಮುಸ್ಲಿಂರ ಭಾವೈಕತ್ಯತೆಯ ಮತ್ತು ಸಾಮರಸ್ಯದ ನೆಲೆಬೀಡು ಬಹಮನಿ ಸುಲ್ತಾನರು, ಹೈದ್ರಬಾದನ ನಿಜಾಮರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿದ್ದರಿಂದ ಮುಸ್ಲಿಂರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಉರ್ದು, ಹಿಂದಿ ಭಾಷಿಯನ್ನಾಡುವವರು ಇಲ್ಲಿ ನೆಲೆಸಿದ್ದಾರೆ.

ಮೊಹರಂ ಹಬ್ಬದ ಸಂದರ್ಭದಲ್ಲಿ ಹಿಂದೂ–ಮುಸ್ಲಿಂರು ಕೂಡಿ ಆಚರಿಸುವ ಮಾಡುವ ಕುಣಿತ ಹೆಜ್ಜೆ ಕುಣಿತ (ಅಲಾವಿ ಹೆಜ್ಜೆ ಮೇಳ) ಬೀದರ, ಗುಲಬರ್ಗಾ, ರಾಯಚೂರು, ಬಳ್ಳಾರಿ, ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.

ಮೊಹರಂ ಹಬ್ಬದಲ್ಲಿ 'ಪೀರ' ದೇವರನ್ನು ಪ್ರತಿಷ್ಠಾಪಿಸುತ್ತಾರೆ. ಮಹಮ್ಮದ ಪೈಗಂಬರ್, ಹಜರತ ಅಲಿ, ಮಗಳು ಫಾತಿಮಾ, ಮೊಮ್ಮಕ್ಕಳಾದ ಹಸೇನ–ಹುಸೇನ ಇವರ ಐದು ಪವಿತ್ರ ಆತ್ಮಗಳ ಪ್ರತಿಕವಾಗಿ ಐದು ದೇವರುಗಳ ಹಸ್ತವನ್ನು ಮಾಡುತ್ತಾರೆ. ಇವು ಸೂರ್ಯ, ಚಂದ್ರರ ಚಿತ್ರಗಳಿಂದ ಕೂಡಿದ ಹಿತ್ತಾಳೆಯಿಂದ ತಯಾರಿಸಿದ್ದಾಗಿರುತ್ತದೆ. ಈ ಹಸ್ತಕ್ಕೆ ಪಂಜಾ ಎಂದು ಕರೆಯುತ್ತಾರೆ. ದೇವರಗಳನ್ನು ಪ್ರತಿಷ್ಠಾಪಿಸಿ ಮುಂದೆ ಕುಣಿಯುತ್ತಾರೆ.

ಈ ಕುಣಿತದಲ್ಲಿ ಹೆಜ್ಜೆಗಳೇ ಮುಖ್ಯ ಕಲಾವಿರಲ್ಲೇ ಯುವಕರಾಗಿರುತ್ತಾರೆ. ಅವರೆಲ್ಲ ಬಣ್ಣ ಬಣ್ಣದ ಅಂಗಿ ತಲೆಯ ಮೇಲೆ ಟೊಪ್ಪಿಗೆ, ಕೈಯಲ್ಲಿ ಬಣ್ಣ ಬಣ್ಣದ ಕರವಸ್ತುಗಳು, ಕೆಲವೊಮ್ಮೆ ಎರಡೂ ಕೈಯಲ್ಲಿ ವಿವಿಧ ಬಣ್ಣದ ಕರವಸ್ತ್ರ, ಒಂದು ಕೈಯಲ್ಲಿ ಉದ್ದನೆಯ ಕೋಲು ಮತ್ತೊಂದು ಕೈಯಲ್ಲಿ ಕರವಸ್ತ್ರ ಹಿಡಿದು ಹೆಜ್ಜೆ ಹಾಕುವರು. ಹೆಜ್ಜೆ ಕುಣಿತದಲ್ಲಿ ಹಲಗೆ ಮುಖ್ಯ ವಾದ್ಯವಾಗಿರುತ್ತದೆ. ಹಲಗೆಯ ನಾದದ ಗತ್ತಿಗೆ ತಕ್ಕಂತೆ ಹೆಜ್ಜೆ ಹಾಕುವುದು.

ಹೆಜ್ಜೆ ಕುಣಿತದಲ್ಲಿ ಒಂದ್ಹೆಜ್ಜೆ, ಎರಡ್ಹೆಜ್ಜೆ, ಹಿಂದ್ಹೆಜ್ಜೆ ಹೀಗೆ ವೈವಿಧ್ಯಮಯ ಗತ್ತುಗಳಿರುತ್ತವೆ. ಸುತ್ತು ತಿರುಗುವುದು, ಮೇಲಕ್ಕೆ ಜಿಗಿಯುವುದು, ಸುತ್ತು ಕೋಲು ಕುಣಿತದಲ್ಲಿ ಕೋಲಿನಿಂದ ಕೋಲಿಗೆ ತಾಡನ (ಹೊಡೆಯವದು) ಮಾಡುವರು ಕೈಯಲ್ಲಿನ ಕರವಸ್ತ್ರ ಮೇಲೆ ಹಾರಿಸುವುದು ಸಹ ಮಾಡುತ್ತಾರೆ.

ಹೆಜ್ಜೆ ಕುಣಿತದಲ್ಲಿ ಹಗ್ಗದ ಕುಣಿಕೆಯ (ಗಂಟು) ಕುಣಿತ ಆಕರ್ಷಣಿಯವಾಗಿದೆ. ನರ್ತಕರೆಲ್ಲರು ಗೋಲಾಕಾರದಲ್ಲಿ ನಿಂತು, ಮಧ್ಯದಲ್ಲಿ ಇಬ್ಬರು ಹಗ್ಗ ಹಿಡಿದುಕೊಂಡಿರುತ್ತಾರೆ. ಸುತ್ತಲಿನ ನರ್ತಕರೆಲ್ಲರೂ ಒಂದೊಂದು ಹಗ್ಗ ಹಿಡಿದು ಎದುರಿಗಿರುವವರ ವಿರುದ್ಧ ಹೆಜ್ಜೆ ಹಾಕುತ್ತಾ ಕುಣಿದು ಕುಣಿಕೆ ಹಾಕುತ್ತಾರೆ. ಕೆಲವೊಮ್ಮೆ ಜಡೆ ಹಾಕುತ್ತಾರೆ. ಮತ್ತೆ ಅದೇ ರೀತಿ ಕುಣಿದು ಕುಣಿಕೆಯನ್ನು ಜಡೆಯನ್ನು ಬಿಚ್ಚುತ್ತಾರೆ.

ಹೆಜ್ಜೆ ಕುಣಿತದಲ್ಲಿ ಮೊಹರಂ ಪದಗಳನ್ನು ಹಾಡುತ್ತಾರೆ. ಸಾಮಾನ್ಯವಾಗಿ ಈ ಕುಣಿತದಲ್ಲಿ ಹಾಡುವ ಹಾಡುಗಳೇ ಮೊಹರಂ ಹಾಡುಗಳು. ಸೂಫಿ ಸಂತರು, ಹಿಂದೂ ಶರಣರು ಸವಾಲ್-ಜವಾಬ್ ಪದಗಳು, ನೀತಿ ಹಾಡುಗಳು, ಕರ್ಬಲಾದ ರಣಭೂಮಿಯ ಯುದ್ಧದ ವಿವರಗಳನೊಳಗೊಂಡ ಹಾಡುಗಳು, ಹಸೇನ-ಹುಸೇನವರ ಜೀವನ ವೃತ್ತಾಂತ ಹೀಗೆ ಹಲವಾರು ಹಾಡುಗಳನ್ನು ಹೆಜ್ಜೆ ಕುಣಿತದಲ್ಲಿ ಹಾಡುತಾರೆ. ಮೊಹರಂ ಹಾಡುಗಳ ಧಾಟಿಯೇ ಬಲು ಸೊಗಸು ಕೇಳುತ್ತಿದ್ದರೆ. ಕೇಳಲೆ ಬೇಕು ಎನಿಸುವಷ್ಟು ಮಾಧುರ್ಯಮಯವಾಗಿರುತ್ತವೆ. ನೀತಿಯುಕ್ತವಾಗಿರುತ್ತವೆ. ಕುಣಿತದ ಮಧ್ಯೆ ಮಧ್ಯೆ "ಹುಸೇನ ಬಸಾಕಿ ದೋಸ್ತರಾ ಹೋದಿನ ಲಾಲಸಾ ಬಲೀಕಿ ದೋಸ್ತಾರಾ ಹೋದೀನ" ಎಂದು ಜೈಕಾರ ಹಾಕುತ್ತಾರೆ.

ಮೊಹರಂ ಹಬ್ಬ ಈ ಭಾಗದ ವಿಶೇಷ ಹಬ್ಬವಾಗಿದೆ. ಹಿಂದೂ-ಮುಸಲ್ಮಾನರೂ ಜಾತಿ ಭೇಧವಿಲ್ಲದೆ ಆಚರಿಸುತ್ತಾರೆ, ಕುಣಿತದಲ್ಲೂ ಎರಡು ಧರ್ಮಿಯರೂ ಕೂಡಿಯೇ ಕುಣಿಯುತ್ತಾರೆ. ಹೆಜ್ಜೆ ಕುಣಿತ ಕೋಮು-ಸೌಹಾರ್ದತೆಯ ಸಂಕೇತವಾಗಿದೆ.

ಹೆಜ್ಜೆ ಕುಣಿತ ಹೈದ್ರಬಾದ ಕರ್ನಾಟಕದ ವಿಶೇಷ ಕುಣಿತವಾಗಿದೆ. ವರ್ಷಕ್ಕೊಮ್ಮೆ ಮಾತ್ರ ಕಾಣುವ ಈ ಕುಣಿತ ಇಂದು ಮೂಲೆಗುಂಪಾಗಿದೆ ಎಂಬುದೇ ದುರದುಷ್ಟಕರ. ಸುಶಿಕ್ಷಿತ ಯುವಕರ ಅನಾಕರ್ಷಣೆಯಿಂದ ತನ್ನ ಮಹತ್ವ ಕಳೆದುಕೊಳ್ಳುತ್ತಿದೆ.

# 25. ಚೌಡಮ್ಮನ ಕುಣಿತ

ಚೌಡಮ್ಮನ ಕುಣಿತ ದೇವಿ ಆರಾಧನೆಯ ಹಿನ್ನಲೆಯಿಂದ ಪ್ರಚಲಿತಕ್ಕೆ ಬಂದ ಕುಣಿತ. ಗುಲಬರ್ಗಾ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಪಂಚಾಳರು–ಬಡಿಗರು, ಈ ಸಂಪ್ರದಾಯವನ್ನು ಅನುಸರಿಸಿಕೊಂಡು ಬಂದಿದ್ದಾರೆ. ಜಾತ್ರೆ ಉತ್ಸವ ಹಬ್ಬ ಹರಿದಿನಗಳ ಸಮಯದಲ್ಲಿ ಚೌಡಮ್ಮನ ಮುಖವಾಡವನ್ನು ಧರಿಸಿಕೊಂಡು ವಾದ್ಯಗಳ ಗುತ್ತಿಗೆ ಕುಣಿಯುವ ಕುಣಿತವೆ ಚೌಡಮ್ಮನ ಕುಣಿತ.

ಚೌಡಮ್ಮನ ಕುಣಿತಕ್ಕೆ ಒಂದು ಪೌರಾಣಿಕ ಕತೆಯೂ ಉಂಟು. ದಕ್ಷಬ್ರಹ್ಮನ ಸಂಹಾರಕ್ಕಾಗಿ ಶಿವನ ಹಣೆಯಿಂದ ಜನ್ಮತಳೆದ ವೀರಭದ್ರನು ಶತ್ರುಗಳನ್ನು ಸಂಹರಿಸುವಾಗ ಅವನ ಸಹಾಯಕ್ಕೆಂದು ಚೌಡಮ್ಮ ಅವಿರ್ಭವಿಸಿದಳು. ವೀರಭದ್ರ ವೀರಾವೇಶದಿಂದ ರಾಕ್ಷಸರನ್ನು ಸಂಹರಿಸುವಾಗ ಅವರ ರಕ್ತವು ನೆಲಕ್ಕೆ ತಾಗಿದರೆ ಮತ್ತೆ ರಾಕ್ಷಸರು ಹುಟ್ಟುವರೆಂದು ತಿಳಿದ ಚೌಡಮ್ಮ ನೆಲಕ್ಕೆ ಬಿಳುವ ರಕ್ತವನ್ನು ನೆಕ್ಕಲು ನಾಲಿಗೆ ಚಾಚಿದಾಗ ವೀರಾವೇಶದಿಂದ ಹೋರಾಡುತ್ತಿದ್ದ ವೀರಭದ್ರ ಅರಿವಿಲ್ಲದೆ ತಂಗಿಯ ನಾಲಿಗೆಯನ್ನು ಕತ್ತರಿಸಿದನು. ಸತ್ಯ ತಿಳಿದ ನಂತರ ಇಬ್ಬರು ಒಂದೇ ಕಡೆ ನೆಲೆಸಿದರು. ವೀರಭದ್ರ ದೇವರ ದೇವಾಲಯದಲ್ಲಿ ಚೌಡಮ್ಮ(ದೇವಿ)ಯ ದೇವಾಲಯ ಇರುತ್ತದೆ.

ಚೌಡಮ್ಮನ ಮುಖವಾಡಗಳನ್ನು ಧರಿಸುವರು ತಲೆಗೆ ರುಮಾಲು ಸೊಂಟಕ್ಕೆ ಬಣ್ಣ ಬಣ್ಣದ ಸೀರೆಗಳನ್ನು ಇಳಿ ಹಾಕಿರುತ್ತಾರೆ. ಚೌಡಮ್ಮನ ಮೆರವಣಿಗೆಯಲ್ಲಿ ಡೊಳ್ಳು, ಹಲಗೆ, ಸಂಭಾಳ, ಶಹನಾಯಿ ಮೇಳಗಳು ಪಾಲ್ಗೊಂಡಿರುತ್ತವೆ. ಚೌಡಮ್ಮನ ಕಿರಿಟವನ್ನು ಹೂಗಳಿಂದ ಅಲಂಕರಿಸುತ್ತಾರೆ. ಮುಖವಾಡ ಧರಿಸಿರುವ ವ್ಯಕ್ತಿಯು ಬಲಗೆಯಲ್ಲಿ ಖಡ್ಗ ಅಥವಾ ಕೊಡಲಿ ಹಿಡಿದಿರುತ್ತಾರೆ.

ಚೌಡಮ್ಮನು ಮುಖವಾಡ ಧರಿಸಿರುವನು ವಾದ್ಯದ ನಾದಕ್ಕೆ ವೀರಾವೇಶದಿಂದ ಕುಣಿಯುತ್ತಾನೆ. ಈ ಮೆರವಣಿಗೆ ಊರ ಬೀದಿ–ಬೀದಿಗಳಲ್ಲಿ ಹಾಯ್ದು ಹೋಗಿ ನೇರವಾಗಿ ಹರಿಜನ ಕೇರಿಗೆ ಬರುವದು. ಈ ಜಾತ್ರೆಯಲ್ಲಿ ಬಲಿಕೊಡುವದು, ಚಾಜ, ಹರಿಕೆ ಒಪ್ಪಿಸುವದು, ದೇವಿಯೊಂದಿಗೆ ಬಡಿಗೆ ಆಡುವದು ಇತ್ಯಾದಿ ನಡೆಯುವುದು. ಪಂಚಾಳರು ಚೌಡಮ್ಮನನ್ನ ಕುಲದೇವತೆ ಎಂದೇ ನಂಬಿರುತ್ತಾರೆ.

## 26. ಲೇಜಿಂ ಕುಣಿತ

ಲೇಜಿಮ ಕುಣಿತ ನಮ್ಮ ನೆರೆಯರಾಜ್ಯವಾದ ಮಹಾರಾಷ್ಟ್ರದಲ್ಲಿ ಪ್ರಸಿದ್ಧವಾದದ್ದು. ಕರ್ನಾಟಕದ ಗಡಿ ಜಿಲ್ಲೆಗಳಾದ ಬೀದರ, ಗುಲಬರ್ಗಾಗಳ ಮೂಲಕ ಪರಿಚಯವಾಗಿ ಇಂದು ಇಡೀ ಕರ್ನಾಟಕದಾದ್ಯಂತ ವ್ಯಾಪಿಸಿದೆ. ಲೇಜಿಂ ಎಂಬುದು ಕಬ್ಬಿಣದ ತಂತಿಗೆ ನಡುವೆ ಅಲ್ಲಲ್ಲಿ ಬಿಲ್ಲೆಗಳ್ನು ಹಾಗಿರುತ್ತಾರೆ. ಇಡೀ ಕಬ್ಬಿಣದ ಬಿಲ್ಲೆ ಹೊಂದಿರುವ ತಂತಿಯನ್ನು ಕಟ್ಟಿಗೆಯ ಕೋಲಿಗೆ ಜೋಡಿಸಿರುತ್ತಾರೆ. ಹತ್ತಾರು ಮಂದಿ ಗಂಡಸರು ತಲೆಗೆ ಕರವಸ್ತ್ರ ಕಟ್ಟಿಕೊಂಡು ಲೇಜಿಂಯನ್ನು ಕೈಯಲ್ಲಿ ಹಿಡಿದು ತಮಟೆಯ ಬಡಿತಕ್ಕನುಗುಣವಾಗಿ ತಾಳ ತಪ್ಪದಂತೆ ಕುಣಿಯುತ್ತಾರೆ. ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಈ ಕುಣಿತವನ್ನು ಅಭ್ಯಸಿಸಿ ರಾಷ್ಟ್ರೀಯ ಹಬ್ಬಗಳಂದು ಪ್ರದರ್ಶಿಸಿಸುವುದುಂಟು.

# 27. ರಾಜಗೊಂಡರ ಕುಣಿತ

ರಾಜಗೊಂಡರ ಕುಣಿತ ಬೀದರ ಜಿಲ್ಲೆ ಹೆಚ್ಚಾಗಿ ಕಂಡು ಬರುತ್ತದೆ. ಮೂಲತ ಮಧ್ಯಪ್ರದೇಶದ ಅಲೆಮಾರಿ ಜನರ ವಿಶಿಷ್ಟ ಕುಣಿತವಾದ ಇದು ಬೀದರ್ ಜಿಲ್ಲೆಗೆ ವಲಸೆ ಬಂದ ಕಲೆಯಾಗಿದೆ. ಜನಪದ ವೈದ್ಯವನ್ನು ವೃತ್ತಿಯನ್ನಾಗಿಸಿ ಕೊಂಡು ಬದುಕುವ ಅಲೆಮಾರಿ ರಾಜಗೊಂಡರು ಬೀದಿಗಳಲ್ಲಿ ತಮ್ಮ ನಾಡಿ ಗಿಡಮೂಲಿಕೆಗಳೊಂದಿಗೆ ಬದುಕುತ್ತಿದ್ದಾರೆ.

ರಾಜಗೊಂಡರ ಕುಣಿತದಲ್ಲಿ ಫೇರಾ, ಹೋಲಿ, ಗೊಂಢಿ, ಚಾಮಚಮೋಲಿ, ಕರ್ಮ ಹೀಗೆ ವಿವಿಧ ಬಗೆಯ ನೃತ್ಯ ಪ್ರಕಾರಗಳಿವೆ. ಹೋಳಿ ಹಬ್ಬದಲ್ಲಿ ಹೋಲಿ ಕುಣಿತ, ದೀಪಾವಳಿಗೆ ಚಾಮ ಚಾಮೋಲಿ ಕುಣಿತ, ದಸರಾ ಹಬ್ಬದಂದು ಬಂಬಾರಿಯೂ ಕುಣಿತಗಳನ್ನು ಮಾಡುತ್ತಾರೆ. ಡೋಲಕ್, ಚಾಮಟಿ, ತಾಶಾ ಮುಂತಾದವು ಇವರ ಕುಣಿತಕ್ಕೆ ವಾದ್ಯಗಳಾಗಿರುತ್ತವೆ. ಕುಣಿತದಲ್ಲಿ ಸವಾಲ–ಜವಾಬಗಳು ಹೆಚ್ಚಾಗಿ ಕಂಡು ಬರುತ್ತವೆ.

---

1) ಗೋ.ರು.ಚ.–1977 ಪುಟ–77

## 28. ರಿವಾಯತ್ ಮೇಳ ಕುಣಿತ

ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ರಿವಾಯತ್ ಕುಣಿತ ಕಂಡು ಬರುತ್ತದೆ. ಈ ಕುಣಿತ ಮುಸಲ್ಮಾನರ ಹಬ್ಬ ಹರಿದಿನಗಳು, ಉರುಸ್ ಜಾತ್ರೆಗಳಲ್ಲಿ ನಡೆಯುತ್ತದೆ. 15 ರಿಂದ 20 ಜನ ಈ ಕುಣಿತದಲ್ಲಿ ಪಾಲ್ಗೊಂಡಿರುತ್ತಾರೆ. ಡಪ್ಪು ಹಿಡಿದುಕೊಂಡು ನಿಂತ ನಾಯಕನು ರಿವಾಯತ್ ಹಾಡುಗಳನ್ನು ಹಾಡುತ್ತಾನೆ. ಉಳಿದ ಸಹ ಕಲಾವಿದರು ಕೈಯಲ್ಲಿ ಕರವಸ್ತ್ರ ಹಿಡಿದು ವರ್ತುಲಾಕಾರದಲ್ಲಿ ನಿಂತು ಹಾಡನ್ನು, ಪುನರುಚ್ಚರಿಸುತ್ತಾರೆ. ಹಾಡಿನ ಬಾವಕ್ಕೆ ತಕ್ಕಂತೆ ಕುಣಿತವೂ ಕೂಡ ವಿಭಿನ್ನ ಭಾವನೆಗಳನ್ನು ಅಭಿವ್ಯಕ್ತಿಸುತ್ತದೆ. ರಿವಾಯತ ಹಾಡುಗಳು ಉರ್ದು ಹಾಗೂ ಕನ್ನಡ ಎರಡು ಭಾಷೆಯರುತ್ತವೆ. ಈ ಹಾಡುಗಳು ಮುಸ್ಲಿಂ, ಸೂಫಿ ಸಂತರ, ಶಿವಶರಣರ ಬದುಕಿಗೆ ಸಂಬಂಧಿಸಿರುತ್ತವೆ. ಈ ಕುಣಿತಕ್ಕೆ ಹಾರ್ಮೋನಿಯಂ, ಡೋಲಕ, ಡಪ್ಪ, ಹಲಗೆ ಈ ತರಹದ ವಾದ್ಯಗಳನ್ನು ಬಳಸಿಕೊಳ್ಳತ್ತಾರೆ. ಸವಾಲ–ಜವಾಬ ಧಾಟಿಯಲ್ಲಿಯೂ ರಿವಾಯತ ಪದಗಳಿರುತ್ತವೆ. ಇಲ್ಲಿ ಬುದ್ದಿವಂತಿಕೆಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಾರೆ.

## 29. ಕೋತಿ ಕುಣಿತ

ಕೋತಿ ಕುಣಿತ ಉತ್ತರ ಕರ್ನಾಟಕದ ಪ್ರಮುಖ ಪ್ರಾಣಿ ಕುಣಿತಗಳಲ್ಲಿ ಕೋತಿ ಕುಣಿತ ಮುಖ್ಯವಾದದ್ದು, ಚಂಚಲ, ಚುರುಕುತನಗೆ ಹೆಸರಾದ ಕೋತಿಯನ್ನು ಜನರ ಮನರಂಜನೆಗಾಗಿ ಬಳಸಿಕೊಂಡು ಆ ಮೂಲಕ ಹೊಟ್ಟೆ ತುಂಬಿಸಿಕೊಳ್ಳುವುದು ಕೋತಿ ಕುಣಿಸುವವರ ಜೀವನವಾಗಿದೆ. ಚುರುಕಾದ ಕೋತಿಗಳನ್ನು ಪಳಗಿಸಿ ತರಬೇತಿ ನೀಡಿ ಪ್ರದರ್ಶನಗಳಿಗೆ ಕೊಂಡೊಯ್ಯುತ್ತಾರೆ. ಪಲ್ಟಿ ಹೊಡೆಯುವುದು, ಅಂತರಲಾಗ, ತಿಪ್ಪರಲಾಗ, ಕೋಲು ಹಿಡಿದು ಲಾಗ ಹೊಡೆಯುವುದು, ಜನರಿಗೆ ನಮಸ್ಕರಿಸುವುದು, ಹೀಗೆ ವಿವಿಧ ಬಗೆಯ ಕಸರತ್ತುಗಳನ್ನು ಕಲಿಸುತ್ತಾರೆ.

ಪ್ರದರ್ಶನ ಮುಗಿದ ಮೇಲೆ ತನ್ನ ಮಾಲೀಕನ ಸೂಚನೆಯಂತೆ ತಟ್ಟೆ ಹಿಡಿದು ಹಣ ಸಂಗ್ರಹಣೆ ಮಾಡುತ್ತದೆ. ಕೋತಿ ಕುಣಿತದಲ್ಲಿ ನೆಗೆಯುವದು, ಬಾಗುವುದು, ಬಳಕುವುದು ಹೆಚ್ಚಾಗಿರುತ್ತದೆ. ಕೋತಿಗೆ ಬಣ್ಣ ಬಣ್ಣದ ಅಂಗಿ–ಚಡ್ಡಿಯನ್ನು ಹಾಕಿ ಮತ್ತಷ್ಟು ಆಕರ್ಷಿತರಾಗಿಸುತ್ತಾರೆ, ಕೋತಿ ಕುಣಿತ ಭಾರತದಾದ್ಯಂತ ಕಾಣಸಿಗುತ್ತದೆ. ಕೋತಿ ಕುಣಿತದ ಜೊತೆಗೆ ಹಲವು ಬಗೆಯ ಚೇಷ್ಟೆಗಳನ್ನು ಮಾಡಿ ಜನರಿಗೆ ಮನರಂಜನೆ ನೀಡುತ್ತದೆ.

# 30. ಕಿನ್ನರಿಜೋಗಿ ಮೇಳ ಕುಣಿತ

ಉತ್ತರ ಕರ್ನಾಟಕದ ಜನಪ್ರಿಯ ವೃತ್ತಿಗಾಯಕರಾದ ಕಿನ್ನರಿಜೋಗಿಗಳು ಸೌಂದರ್ಯಕ್ಕೆ ಮತ್ತು ಆಕರ್ಷಣೆಗೆ ಹೆಸರದವರು. ಇವರ ವೇಷಭೂಷಣಗಳು ಮನಮೋಹಕವಾದುವು. ತಲೆಗೆ ಚಂದ್ರಬಿಲ್ಲೆ, ಮಣಿಕುಚ್ಚು, ಗಳಾಪುಗಳಿಂದ ಅಲಂಕರಿಸಿದ ಮುಂಡಾಸು. ಅದಕ್ಕೊಂದು ಸಣ್ಣ ತ್ರಿಶೂಲ, ಕರಿಯ ನಿಲುವಂಗಿ, ಕಚ್ಚೆ ಪಂಚೆ, ಕೊರಳಿಗೆ ನೇತಾಡುವ ಮುತ್ತಿನ ಸರಗಳು ರುದ್ರಾಕ್ಷಿ ಹಾರ, ಕಿವಿಗಳಿಗೆ ಕರ್ಣಕುಂಡಲ, ಕಾಪಾಲಿ, ಹಣೆಯಲ್ಲಿ ವಿಭೂತಿ ಮತ್ತು ಅರ್ಧ ಚಂದ್ರಾಕೃತಿಯ ನಾಮ, ಬಗಲಲ್ಲಿ ಜೋಳಿಗೆ, ಕಾಲಿಗೆ ಗೆಜ್ಜೆ, ಕೈಯಲ್ಲಿ ಕಿನ್ನರಿ.

ಕಿನ್ನರಿಯು ತಂತಿ ವಾದ್ಯ, ಸುಮಾರು ಮೂರು ಮೊಳ ಉದ್ದದ ಬಿದಿರಿನ ಗಳುವಿಗೆ ಮೂರು ಸೋರೆ ಬುರುಡೆಗಳು. ಎರಡು ದೊಡ್ಡದು, ಒಂದು ಚಿಕ್ಕದು, ಬಿದಿರಿನ ಹೊರ ಮೈಗೆ ಮುಳ್ಳುಹಂದಿಯ ಚಿಪ್ಪಿನಿಂದ ಮಾಡಿದ ಹತ್ತು ಇಲ್ಲವೆ ಹನ್ನೆರಡು ಮೆಟ್ಟಿಲುಗಳು. ಇವುಗಳನ್ನು ಸಾರಿ ಎಂದು ಕರೆಯುತ್ತಾರೆ. ಈ ಸಾರಿಗಳನ್ನು ಗಳಕ್ಕೆ ಜೇನುಮೇಣದಿಂದ ಅಂಟಿಸುತ್ತಾರೆ. ಬಿದಿರಿನ ಒಂದು ತುದಿಯಲ್ಲಿ ತಿರುಪುಳ್ಳ ಶೂಲದ ಕಡ್ಡಿಯನ್ನು ಬಂಧಿಸಿದ್ದು ಮತ್ತೊಂದು ತುದಿಯಲ್ಲಿ ಮರದ ಗಿಣಿಯನ್ನು ಸಿಕ್ಕಿಸಿರುತ್ತಾರೆ. ಸಾರಿಯ ಮೇಲಿನಿಂದ ಹಾಯ್ದು ಬರುವ ತಂತಿಗಳು ಈ ಮರದ ಗಿಣಿಯನ್ನು ಸುತ್ತುವರಿದಿರುತ್ತವೆ. ಶೂಲದ ಕಡ್ಡಿಗಳನ್ನು ತಿರುಗಿಸಿ ಶ್ರುತಿಗೆ ಸರಿಹೊಂದಿಸಿಕೊಳ್ಳುತ್ತಾರೆ. ತಮ್ಮ ವೇಷಭೂಷಣಗಳಷ್ಟೇ ಅಲ್ಲದೆ, ತಾವು ಬಾರಿಸುವ ಕಿನ್ನರಿ ವಾದ್ಯವೂ ಸಹ ಅಂದವಾಗಿ ಕಾಣಬೇಕೆನ್ನುವ ಸೌಂದರ್ಯಾರಾಧಕರು ಕಿನ್ನರಿಜೋಗಿಗಳು. ಕಿನ್ನರಿ ವಾದ್ಯದ ಹುಟ್ಟಿನ ಬಗ್ಗೆ: ಹಿರಣ್ಯರಾಕಾಸಿ ಎಂಬ ರಾಕ್ಷಸಿಯನ್ನು ದೇವೇಂದ್ರನು ಸಂಹಾರ ಮಾಡಿ ಅವಳ ತೊಡೆಯ ಮೂಳೆಯಿಂದ ಗಳುವನ್ನು, ಅವರ ಎರಡು ಸ್ತನಗಳಿಂದ ಎರಡು ಬುರುಡೆಗಳನ್ನು, ಕೈ ಬೆರಳುಗಳಿಂದ ಬಿರಡೆಗಳನ್ನು, ಬೆನ್ನು ನರಗಳಿಂದ ತಂತಿಗಳನ್ನು ಮಾಡಿ ಕಿನ್ನರಿಯನ್ನು ತಯಾರಿಸಿ ಅರ್ಜುನನಿಗೆ ಅರ್ಪಿಸಿದನೆಂಬ ಕಥೆ ಇದೆ. ಕಿನ್ನರಿವಾದ್ಯಕ್ಕೆ ಅತ್ಯಂತ ಪ್ರಾಚೀನ ಇತಿಹಾಸವಿದ್ದು, ಜನಪದ

ವಾದ್ಯಾವಾಗಿ ಭಾರತದ ನಾನಾ ಕಡೆಗಳಲ್ಲಿ ಪ್ರಚಲಿತದಲ್ಲಿದೆ. ಅಲ್ಲದೆ, ಜನಪದ ವಾದ್ಯಗಳಲ್ಲಿ ಮೆಟ್ಟಿಲನ್ನು ಹೊಂದಿರುವ ಏಕೈಕ ತಂತಿವಾದ್ಯ ಕಿನ್ನರಿ ಎಂಬ ಹೆಗ್ಗಳಿಕೆ ಇದೆ.

ತಾವು ಪಾಂಡವ ಪರಂಪರೆಗೆ ಸೇರಿದವರು. ಅರ್ಜುನನೇ ತಮಗೆ ಮೂಲಗುರು ಅರ್ಜುನನಿಂದ ಕಿನ್ನರಿ ವಾದ್ಯ ತಮಗೆ ಬಳುವಳಿ ಬಂದಿದೆ ಎಂದು ಹೇಳಿಕೊಳ್ಳುವ ಕಿನ್ನರಿ ಜೋಗಿಗಳು ಭೈರವನ ಆರಾಧಕರು. ಕಿವಿಗೆ 'ಕಪಾಲಿ' ತೊಡಿಸಿ ಕರ್ಣಕುಂಡಲವಿಟ್ಟು ಭೈರವನ ಸನ್ನಿಧಿಯಲ್ಲಿ ದೀಕ್ಷೆ ಪಡೆಯುತ್ತಾರೆ. ಕುತ್ತಿಗೆಗೆ ಸಿಂಗನಾತ ಕಟ್ಟಿಕೊಳ್ಳುತ್ತಾರೆ.

ಕಿನ್ನರಿಜೋಗಿಗಳು ಮೂಲತಃ ಗಾಯನ ಸಂಪ್ರದಾಯಕ್ಕೆ ಸೇರಿದವರು, ಹಾಡುವಾಗ ಕಿನ್ನರಿ ಮತ್ತು ಚಿಟಕಿಯ ತಾಳಕ್ಕೆ ಅನುಗುಣವಾಗಿ ಲಘುವಾದ ಕುಣಿತ ಮಾಡುತ್ತಾರೆ. ಕಿನ್ನರಿ, ದಂಬರಿಗೆ, ಪಿಳ್ಳಂಗೋವಿ, ತಾಳ, ಚಿಟಕಿ, ಗಗ್ಗರ, ಕಿರುಗೆಜ್ಜೆ ಇವು ಕಿನ್ನರಿ ಜೋಗಿಗಳು ಬಳಸುವ ವಾದ್ಯಗಳು, ಸಾಮಾನ್ಯವಾಗಿ ಮೂರರಿಂದ ಐದುಮಂದಿ ಇರುವ ತಂಡದಲ್ಲಿ ಮುಮ್ಮೇಳದ ಹಾಡುಗಾರ ಹಾಡುತ್ತಾ ಕುಣಿಯುತ್ತಾನೆ. ಉಳಿದವರು ಹಿಮ್ಮೇಳ ಹಾಡುತ್ತಾ ಮುಮ್ಮೇಳದನವನ ಕುಣಿತಕ್ಕೆ ಹೆಜ್ಜೆ ಹಾಕುತ್ತಾ ನರ್ತಿಸುತ್ತಾರೆ. ಕಿನ್ನರಿ ಜೋಗಿಗಳ ಹಾಡಿನ ಧಾಟಿಯೇ ವಿಶಿಷ್ಟವಾದುದು. ಸಂಗೀತ, ನೃತ್ಯ, ಸಾಹಿತ್ಯ ಮತ್ತು ಸಂಭಾಷಣೆಗಳಿಂದ ಕೂಡಿದ ಇವರ ಕಥನ ಕಲೆ ರಂಜನೀಯವಾದುದು.

ಕಿನ್ನರಿಜೋಗಿಗಳು ಬಸವ ಕುಮಾರ–ಲೋಹಿತಕುಮಾರ, ರಾಜಹಂಸ–ಪರಮಹಂಸ, ಚಿತ್ರಶೇಖರ–ಸೋಮಶೇಖರ, ಲಕ್ಷಾಪತಿ ರಾಜನ ಕಥೆ ಮುಂತಾದ ಹಾಡ್ಗತೆಗಳನ್ನು ಹಾಡುವುದಲ್ಲದೆ, ಸಮಕಾಲೀನ ಸಂದರ್ಭದ ಪ್ರಚಲಿತ ವಿಷಯಗಳಿಗೂ ಸಹ ತಮ್ಮ ಹಾಡಿನ ರೀತಿಯನ್ನು ಒಗ್ಗಿಸಿಕೊಂಡಿದ್ದಾರೆ. ಆಧುನಿಕ ನಾಟಕಕಾರರು ಕಿನ್ನರಿಜೋಗಿಗಳ ಕಥನ ಕಲೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿರುತ್ತಾರೆ. ಉತ್ತರ ಕರ್ನಾಟಕ ಬೀದರ, ಕಲಬುರಗಿ, ರಾಯಚೂರ, ಬಳ್ಳಾರಿ, ಯಾದಗೀರ, ಕೊಪ್ಪಳ, ಶಿವಮೊಗ್ಗ, ಧಾರವಾಡ, ಬಿಜಾಪೂರ, ಚಿಕ್ಕಮಂಗಳೂರು, ಚಿತ್ರದುರ್ಗ, ತುಮಕೂರು, ಬಳ್ಳಾರಿ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬರುವ ಈ ಕಲಾವಿದರನ್ನು 'ದೇವರ ಮಕ್ಕಳು' ಎಂದು ಕರೆಯುವುದುಂಟು.

# 31. ದೊಂಬರ ಕುಣಿತ

ವರ್ಷಕ್ಕೊಂದು ಸಲ ನಿರ್ಧಿಷ್ಟ ಕಾಲದಲ್ಲಿ ಬರುವ ದೊಂಬರ ಹಬ್ಬದಲ್ಲಿ ನಡೆಯುವ ಕುಣಿತಕ್ಕೆ "ದೊಂಬರ ಕುಣಿತ" ಎನ್ನುವರು. ಕಲಬುರಗಿ, ಬೀದರ, ರಾಯಚೂರ, ಬಳ್ಳಾರಿ ಈ ಕುಣಿತವು ಶಿವಮೊಗ್ಗ ಜಿಲ್ಲೆಯ ಹಲವು ಭಾಗಗಳಲ್ಲಿ ರೂಢಿಯಲ್ಲಿದೆ. ಕುಣಿಯುವ ದೊಂಬತಿಯರು ರತ್ನಮ್ಮಾಜಿಯ ಪೀಳಿಗೆಗೆ ಸೇರಿದವರೆಂದು ಹೇಳುತ್ತಾರೆ.

ಹಬ್ಬದ ದಿನ ಮುಖವಾಡಗಳನ್ನು ಹೊತ್ತು ಮೆರವಣಿಗೆ ನಡೆಯುವಾಗ ಇತರ ಕುಣಿತದವರ ಜತೆ ಇಬ್ಬರು ದೊಂಬತಿಯರು ಸೇರಿಕೊಂಡು ಹಾಡು ಹೇಳುತ್ತಾ ಕುಣಿಯುವರು. ಇವರು ಬಿಳಿಯ ಸೀರೆಯನ್ನು ಸೆರಗು ಹಾಕದೆ ಉಟ್ಟುಕೊಂಡು. ಬಿಳಿಯ ವಸ್ತ್ರ ಒಂದನ್ನು ಹೊದ್ದುಕೊಂಡಿರುತ್ತಾರೆ. ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಂಡು ಕುಮಾರ ರಾಮನಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾ ಪಾತ್ರಿಯವರೊಂದಿಗೆ ಆವೇಶದಿಂದ ಕುಣಿಯುವರು. "ಗಜ್ಜು" ಎಂದು ಕರೆಯುವ ಅನೇಕ ಹಂತಗಳು ಕಂಡುಬರುತ್ತವೆ. ಪ್ರತಿ ವರ್ಷವೂ ವರ್ತನೆಯ ಮೇಲೆ ಇಬ್ಬರು ದೊಂಬತಿಯರು ಕುಣಿತಕ್ಕೆ ಬೇರೆ ಬೇರೆ ಊರುಗಳಿಗೆ ಆಹ್ವಾನಿತರಾಗುತ್ತಾರೆ. ಇವರಿಗೆ "ಆಯ"ದ ರೂಪದಲ್ಲಿ ವರ್ಷಕ್ಕೊಮ್ಮೆ ದವಸ ಧಾನ್ಯ ದೊರೆಯುತ್ತದೆ.

ದೊಂಬರ ಕುಣಿತವು ದೊಂಬರ ಹಬ್ಬದ ಕೊಡುಗೆ. ಹಬ್ಬದಲ್ಲಿ ಮುಖವಾಡಗಳ ಮೆರವಣಿಗೆ ಇರುತ್ತದೆ. ಈ ಮುಖವಾಡಗಳನ್ನು ಮರದಿಂದ ತಯಾರಿಸಿ ಬಣ್ಣ ಹಾಕಿರುತ್ತಾರೆ. ಇವುಗಳನ್ನು ಒಂದು ನಿರ್ಧಿಷ್ಟ ಜಾಗದಲ್ಲಿ ಇಟ್ಟಿದ್ದು ಹಬ್ಬದ ಸಂದರ್ಭದಲ್ಲಿ ಮಾತ್ರ ಹೊರತೆಗೆಯುವರು. ಹಬ್ಬ ನಡೆಯುವಷ್ಟು ದಿನವೂ ಪ್ರತಿದಿನ ಅವುಗಳನ್ನು ಡೊಲು, ಮೃದಂಗ, ತಾಳ, ಓಲಗ ಮೊದಲಾದ ವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ ನದಿಗೆ ಅಥವಾ ಹೊಳೆಗೆ ತೆಗೆದುಕೊಂಡು ಹೋಗಿ ತೊಳೆದು, ಬೆಳಗಿ ಅಲಂಕಾರ

ಮಾಡಿ ಗ್ರಾಮದ ದೇವಸ್ಥಾನಕ್ಕೆ ತರುವರು. ಆಯಾ ಪ್ರದೇಶದ ಹಿನ್ನೆಲೆಯಲ್ಲಿ ಕುದುರೆ, ಹುಲಿದೇವರು, ಮಾಸ್ತಿ, ಬೀರೇದೇವರು, ಜಟ್ಟಿಗೆ ಮೊದಲಾದ ಮುಖವಾಡಗಳನ್ನು ಹಿಡಿದಿರುತ್ತಾರೆ. ಕುಮಾರರಾಮನ ಪ್ರತಿನಿಧಿಯಾಗಿ ಸಿದ್ಧರ ಕಳಶ ಹಾಗೂ ಈತನ ಅಚ್ಚುಮೆಚ್ಚಿನ ಪವಾಡ ಸದೃಶವಾದ ಕುದುರೆ "ಬೊಲ್ಲ"ದ ಸಂಕೇತವಾಗಿ ಕುದುರೆ ಮುಖವಾಡವೂ ಇರುತ್ತದೆ ಎಂದು ಹೇಳುವರು. ತುದಿಯಲ್ಲಿ ಗಗ್ಗರ ಕಟ್ಟಿದ ಉದ್ದವಾದ ಗಳುವೊಂದನ್ನು ಒಬ್ಬ ಹಿಡಿದಿರುತ್ತಾನೆ. ಇವರೆಲ್ಲರೂ ಕುಣಿಯುವಾಗ ಇಬ್ಬರು ದೊಂಬತಿಯರು ಹಾಡು ಹೇಳುತ್ತಾ ಅವರ ಜತೆಯಲ್ಲಿ ಕುಣಿಯುವರು.

ಪತಿ ಇದ್ದು ಪರಪುರುಷನನ್ನು ಬಯಸಿದ್ದಕ್ಕಾಗಿ ಪತ್ನಿ ರತ್ನಮ್ಮಾಜಿಯನ್ನು ಗಂಡ ಕಂಪಿಲರಾಯನು ಅವಳ ಸೆರಗು ಕಿತ್ತು, ಗೆಜ್ಜೆ ಶಲ್ಯವನ್ನು ಕೊಟ್ಟು ಹೊರಹಾಕುತ್ತಾನೆ. ಈ ರತ್ನಮ್ಮಾಜಿಯ ಪೀಳಿಗೆಯವರೇ ದೊಂಬರ ಹಬ್ಬದಲ್ಲಿ ಕುಣಿಯುವ ದೊಂಬತಿಯರು ಎಂದು ಕರೆದುಕೊಳ್ಳುತ್ತಾರೆ.

## 32. ಜಗ್ಗಲಿಗೆ ಮೇಳ ಕುಣಿತ

ಜಗ್ಗಲಿಗೆ ಮೇಳವು ವಿಶೇಷವಾಗಿ ಧಾರವಾಡ ಜಿಲ್ಲೆಯಲ್ಲಿ ಕಂಡುಬರುತ್ತದೆ. ಜಗ್ಗಲಿಗೆ ಎನ್ನುವಂಥದ್ದು ಸುಮಾರು ಐದು ಅಡಿ ಎತ್ತರದ ವೃತ್ತಾಕಾರದ ಚರ್ಮವಾದ್ಯ, ಎತ್ತಿನಗಾಡಿಯ ಚಕ್ರದ ಕಬ್ಬಿಣದ ದುಂಡಾದ ಪಟ್ಟಿಗೆ ಹದಗೊಳಿಸಿದ ಎತ್ತು, ಎಮ್ಮೆ, ಕೋಣಗಳ ಚರ್ಮವನ್ನು ಚರ್ಮದ ದಾರಗಳಿಮದಲೇ ಬಿಗಿದು ಕಟ್ಟಿ ಸಿದ್ಧಗೊಳಿಸುತ್ತಾರೆ. ಈ ಚರ್ಮದ ಮೇಲೆ ವಿವಿಧ ಬಣ್ಣಗಳಿಂದ ವೈವಿಧ್ಯಮಯ ಚಿತ್ರಗಳನ್ನು ಬಿಡಿಸಿರುತ್ತಾರೆ.

ಜಗ್ಗಲಿಗೆಯನ್ನು ರಣಹಲಿಗೆ ಎಂದೂ ಕರೆಯುತ್ತಾರೆ. ಈ ಹಲಿಗೆಯನ್ನು ಕೈಯಿಂದ ಎತ್ತಿ ಹಿಡಿದು ಬಾರಿಸಲು ಸಾಧ್ಯವಿಲ್ಲ. ನೆಲದ ಮೇಲೆ ಉರುಳಿಸುತ್ತಾ ಬಾರಿಸುತ್ತಾರೆ. ಜಗ್ಗಲಿಗೆ ಮೇಳದಲ್ಲಿ ಸುಮಾರು 15 ರಿಂದ 20 ಮಂದಿ ಕಲಾವಿದರು ಪಾಲ್ಗೊಳ್ಳುತ್ತಾರೆ. ನಿಲುವಂಗಿ, ಕಚ್ಚೆ, ಧೋತರ ಧರಿಸಿ, ತಲೆಗೆ ರುಮಾಲು ಸುತ್ತಿ ಸೊಂಟಕ್ಕೆ ನಡುವಸ್ತ್ರ ಕಟ್ಟಿದ ಕಲಾವಿದರು ಚಕ್ಕಡಿ ಗಾಲಿಯಷ್ಟು ಸುತ್ತಳತೆಯುಳ್ಳ ಜಗ್ಗಲಿಗೆಗಳನ್ನು ಎಡಗೈಯಿಂದ ಉರುಳಿಸುತ್ತಾ ಬಲಗೈಯಿಂದ ತಾಳದ ವಿವಿಧ ಗತ್ತುಗಳಿಗೆ ಅನುಗುಣವಾಗಿ ಬಡಿಯುತ್ತಾರೆ. ಜಗ್ಗಲಿಗೆ ಬಾರಿಸುವಾಗ ಎಡಗೈ ಮತ್ತು ಬಲಗೈ ಎರಡು ಕ್ರಮಬದ್ಧವಾದ ನಡೆಯನ್ನುಳ್ಳವುಗಳಾಗಿರಬೇಕು. ಕ್ರಮ ತ್ವಪಿದರೆ ವಾದ್ಯ ಉರುಳಿ ಹೋಗುತ್ತದೆ ಇಲ್ಲವೆ ತಾಳ ತಪ್ಪುತ್ತದೆ.

ಜಗ್ಗಲಿಗೆ ಮೇಳದ ಮುಖ್ಯಸ್ಥರು 'ಕಣಿ' ಎಂದು ಕರೆಯುವ ಚಿಕ್ಕ ಹಲಗೆಯನ್ನು ಎಡಗೈಯಲ್ಲಿ ಹಿಡಿದು ಬಲಗೈಯಿಂದ ಬಾರಿಸುತ್ತಾನೆ. ಮುಖ್ಯಸ್ಥರು ಕಣೆಯನ್ನು ಬಾರಿಸುವಾಗ ಯಾವ ತಾಳಗಳನ್ನು ಅನುಸರಿಸುತ್ತಾನೋ ಅದೇ ತಾಳಗಳನ್ನು ಜಗ್ಗಲಿಗೆ ಬಡಿಯುವವರು ಅನುಸರಿಸುತ್ತಾರೆ. ಜಗ್ಗಲಿಗೆ ಮೇಳದಲ್ಲಿನ ಕಲಾವಿದರ ಕುಣಿತದ ಗತ್ತುಗಳು ಅಲಾವಿ ಕುಣಿತದ ಮತ್ತು ಹೆಜ್ಜೆ ಕುಣಿತದ ಗತ್ತುಗಳನ್ನು ಹೋಲುತ್ತವೆ. ಜಗ್ಗಲಿಗೆಗಳ ಸಾಮೂಹಿಕ ಬಡಿತವು ಕೇಳುಗರಲ್ಲಿ ರೋಮಾಂಚನವನ್ನು ಉಂಟು

ಮಾಡುತ್ತದೆ. ಕಲಾವಿದರು ವೀರಾವೇಶದಿಂದ ರಣಹಲಿಗೆಯನ್ನು ಬಡಿಯುತ್ತಾ ಕುಣಿಯುತ್ತಾ ಚಲಿಸುತ್ತಿರುತ್ತಾರೆ. ಸರಸರ ಹರಿದಾಡುತ್ತಾರೆ. ಒಬ್ಬರ ಪಕ್ಕ ಒಬ್ಬರು, ಒಬ್ಬರ ಹಿಂದೆ ಒಬ್ಬರು ಅಡ್ಡಲಾಗಿ, ಎದುರು ಬದುರಾಗಿ, ತ್ರಿಕೋನಾಕಾರದಲ್ಲಿ ಹೀಗೆ ವಿವಿಧ ವಿನ್ಯಾಸಗಳಲ್ಲಿ ನಿಂತು ಬಡಿಯುವುದನ್ನು ಕಂಡಾಗ ಮೈನವಿರೇಳುತ್ತದೆ. ಜಗ್ಗಲಿಗೆಯನ್ನು ನಾಲ್ಕು ಜನ ಎತ್ತಿ ಹಿಡಿದು, ಅದರ ಮೇಲೆ ಮುಖ್ಯಸ್ಥರು ನಿಂತು ಕಣಿಯನ್ನು ಬಾರಿಸುವುದನ್ನು ನೋಡಲು ಬಲು ಚಂದ.

# 33. ದೊಡ್ಡಾಟ ಕುಣಿತ

ಉತ್ತರ ಕರ್ನಾಟಕದಲ್ಲ ಆಟ, ಬಯಲಾಟ, ಮೂಡಲಪಾಯದ ಆಟ ಮುಂತಾದ ಹೆಸರುಗಳಿಂದ ಗುರುತಿಸಲ್ಪಡುವ ರಂಗರೂಪವೇ ದೊಡ್ಡಾಟ. ಹೆಸರಿಗೆ ತಕ್ಕಂತೆ, ಭವ್ಯತೆ, ಶ್ರೀಮಂತಿಕೆಯನ್ನು ಒಳಗೊಂಡಿರುವ ದೊಡ್ಡಾಟದಲ್ಲಿ ಭರ್ಜರಿ ವೇಷಭೂಷಣಗಳು, ಭವ್ಯವಾದ ರಂಗಸಜ್ಜಿಕೆ, ಗಂಡು ಕುಣಿತ, ಗಡುಸು ಸಂಭಾಷಣೆ, ಕಾಳಗ ಮತ್ತು ಪರಿಣಯ ಪ್ರಧಾನ ಪ್ರಸಂಗಗಳು ಎಲ್ಲವೂ ಇದೆ. ಅಕ್ಷರ ಗೊತ್ತಿಲ್ಲದ ಗ್ರಾಮೀಣರು ದೊಡ್ಡಾಟದ ಪಾತ್ರ ಧಾರಿಗಳು.

ದೊಡ್ಡಾಟದ ಕಥಾವಸ್ತು ರಾಮಾಯಣ–ಮಹಾಭಾರತ–ಭಾಗವತಗಳಿಂದ ಆಯ್ದು ಕೊಂಡದ್ದು. ಪ್ರಸಂಗಗಳಲ್ಲಿ ಬರುವ ಪಾತ್ರಗಳ ಘನತೆ, ಅಂತಸ್ತಿಗೆ ತಕ್ಕಂತೆ ಇಲ್ಲಿ ವೇಷ ಭೂಷನಗಳಿವೆ. ರಾಜರು, ಮಹಾರಾಜರು, ರಾಕ್ಷಸರು, ಯಕ್ಷ ಗಂಧರ್ವ ಕಿನ್ನರ ಕಿಂಪುರುಷರು ಪ್ರಸಂಗಗಳಲ್ಲಿ ಬರುತ್ತಾರೆ. ಅವರುಗಳಿಗೆ ತಕ್ಕಂತೆ ವೇಷಭೂಷಣಗಳನ್ನು ಸಿದ್ಧಪಡಿಸುತ್ತಾರೆ. ಹಗುರವಾದ ಕಟ್ಟಿಗೆಯಿಂದ ತಯಾರಿಸಿದ, ಸೋನರಿ ಅಥವಾ ಕೆಂಪುಬಣ್ಣದ ಹಾಳೆ ಮತ್ತು ಕನ್ನಡಿ ಚೂರುಗಳನ್ನು ಅಂಟಿಸಿ ದೀಪದ ಬೆಳಕಿಗೆ ಝುಗಮಗಿಸುವ ಕಿರೀಟಗಳು, ಭುಜಕೀರ್ತಿ, ಕೈಕಟ್ಟು, ಎದೆಕಟ್ಟು, ಎದೆಹಾರ, ಕೋರಳಲ್ಲಿ ಬಣ್ಣ ಬಣ್ಣದ ಸೀರೆಗಳ ವೀರಗಚ್ಚೆ, ಭುಜದಿಂದ ನೆಲ ಮುಟ್ಟುವ ಹಾಗೆ ಬೆನ್ನಿನ ಹಿಂದೆ ಇಳಿಬಿಟ್ಟ ಬಣ್ಣದ ಬಟ್ಟೆ ಇತ್ಯಾದಿಗಳೆಲ್ಲವೂ ಗಂಡು ಪಾತ್ರಗಳ ಸಾಮಾನ್ಯ ವೇಷಭೂಷಣಗಳು, ಸ್ತ್ರೀಪಾತ್ರಗಳು ಭರ್ಜರಿ ಪೀರಾಂಬರ ಉಟ್ಟು, ಕೈತುಂಬ ಬಳೆ, ಕೊರಳ ತುಂಬ ಸರ, ಕೈಯಲ್ಲೊಂದು ಬೇವಿನ ಟೊಂಗೆ ಇಲ್ಲವೆ ದೊಣ್ಣೆ ಹಿಡಿದಿರುತ್ತಾನೆ.

ದೊಡ್ಡಾಟದ ರಂಗಮಂಟಪವು ಭವ್ಯವಾದುದು, ಗಟ್ಟಿಮುಟ್ಟಾದುದು ಆಗಿರುತ್ತದೆ. ಎತ್ತಿನ ಗಾಡಿಯ ಚಕ್ರಗಳನ್ನು ಹುಗಿದು, ತೊಲೆಗಳನ್ನು ಜೋಡಿಸಿ, ಅದರ ಮೇಲೆ ಹಲಗೆಗಳನ್ನು ಹಾಕುತ್ತಾರೆ. ಹಿಂಬದಿಗೆ

ಗುಡಾರ ಹಾಕಿ ಮುಚ್ಚುತ್ತಾರೆ. ಇದರ ಹಿಂದೆ ಪಾತ್ರಧಾರಿಗಳು ವೇಷಭೂಷಣಗಳನ್ನು ತೊಟ್ಟು ತಯಾರಾಗಲು ಬಣ್ಣದ ಚೌಕಿ ಇರುತ್ತದೆ. ಅಟ್ಟದ ಮುಂಭಾಗ ಮತ್ತು ಎಡಬಲಗಳು ತೆರೆದುಕೊಂಡಿರುತ್ತವೆ. ಮೇಲುಭಾಗದಲ್ಲಿ ಚಪ್ಪರ ಹಾಕಿರುತ್ತಾರೆ.

ದೊಡ್ಡಾಟದಲ್ಲಿ ಅಭಿನಯಕ್ಕಿಂತ ಕುಣಿಯುವುದೇ ಪ್ರಧಾನ, ರೌದ್ರಪಾತ್ರಗಳು ಮೇಲಿಂದ ಮೇಲೆ ವೀರಾವೇಶದಿಂದ ಕುಣಿಯುತ್ತವೆ. ಎತ್ತರಕ್ಕೆ ಜಿಗಿದು ನೆಲಕ್ಕೆ ಅಪ್ಪಳಿಸುವಂಥ ಪದಗತಿಗಳೇ ಹೆಚ್ಚು, ವೀರರಸವನ್ನು ಬಿಂಬಿಸುವ ಶಕ್ತಿಯುತವಾದ ಪದಾಘಾತಗಳಿವು, ಮೂರ್ಹೆಜ್ಜೆ, ಐದ್ಹೆಜ್ಜೆ, ಆರ್ಹೆಜ್ಜೆಗಳನ್ನು ಬಿಟ್ಟರೆ ಕುಣಿತಗಳ ಹೆಜ್ಜೆಗಳಲ್ಲಿ ಹೆಚ್ಚಿನ ವೈವಿಧ್ಯಗಳೇನೂ ಇಲ್ಲ. ಕರಾವಳಿ ಯಕ್ಷಗಾನದಲ್ಲಿ ಕಂಡುಬರುವ ಮಧುರಭಾವವನ್ನು ಇಲ್ಲಿಯ ಕುಣಿತಗಳಲ್ಲಿ ಕಾಣಲು ಸಾಧ್ಯವಿಲ್ಲ. ಸಾರಥಿ ಮತ್ತು ಸ್ತ್ರೀ ಪಾತ್ರಗಳು ಲಘು ಕುಣಿತ ಮಾಡುತ್ತವೆ. ಭರ್ಜರಿಯಾದ ವೇಷಭೂಷಣಗಳನ್ನು ಧರಿಸಿ ಅರ್ಭಟಿಸುತ್ತಾ ಕುಣಿಯುವುದೇ ದೊಡ್ಡಾಟದ ವೈಶಿಷ್ಟ್ಯ.

ದೊಡ್ಡಾಟದಲ್ಲಿ ಮೃದಂಗ, ತಮಟೆ, ತಾಳ, ಮುಖವೀಣೆ, ಶ್ರುತಿಗಾಗಿ ಪುಂಗಿ ಇಲ್ಲವೆ ಹಾರ್ಮೋನಿಯಂ ಬಳಸುತ್ತಾರೆ. ಇಲ್ಲಿ ಬಳಸುವ ವಾದ್ಯಗಳೆಲ್ಲವೂ ಅಬ್ಬರದಿಂದ ಕೂಡಿದವುಗಳು. ಮೂಡಲಪಾಯದ ಹಾಡುಗಾರಿಕೆಯಲ್ಲಿ ರಾಗಮಾಧುರ್ಯವನ್ನು, ತಾಳಗಳ ಬಂಧುರತೆಯನ್ನು ಕಾಣಬಹುದು. ಒಂದೇ ಗೀತ ಬಂಧದಲ್ಲಿ ಮಧ್ಯಮ ದ್ರುತ ಧೀಮತ ಲಯ ಸಂಚಾರಗಳಿರುತ್ತವೆ. ಸ್ತ್ರೀಯರ ಹಾಡುಗಳಲ್ಲಿ ಸಂಭ್ರಮ, ವಿಭ್ರಮ, ಬೇಡಿಕೆ, ಕೋಪತಾಪ, ಪ್ರೀತಿಗಳನ್ನು ತೋರಲು ತಕ್ಕುದಾದ ರಾಗ ಸಹಿತ ಮಿತದ ಕಿರು ಆಲಾಪಗಳಿರುತ್ತವೆ. ಯುದ್ಧದ ಹಾಡುಗಳಲ್ಲಿಯ ಆವೇಶದ ತೀವ್ರಗತಿ, ಪರಸ್ಪರ ದೂಷಣೆ ಕ್ರೋದಗಳ ಉದ್ಗಾರಗಳು ಭೀಷಣ ಸಮರದ ವಾತಾವರಣವನ್ನು ಕಲ್ಪಿಸುತ್ತವೆ. ಹಾಡು ತಾರಕ್ಕೇರಿದಾಗ ಹಿಮ್ಮೇಳ ದನಿಗೂಡಿ ಅದೇ ಸ್ತರದಲ್ಲಿ ನಿಲ್ಲುವುದು ದೊಡ್ಡಾಟದ ವಿಶೇಷ.

ದೊಡ್ಡಾಟಗಳಲ್ಲಿ ಹಿಮ್ಮೇಳವು ವೈವಿಧ್ಯಪೂರ್ಣವಾಗಿರುತ್ತದೆ. ರಂಗಮಂಟಪದ ಬಲ ಭಾಗದಲ್ಲಿ ಮೇಳದವರು ನಿಲ್ಲುತ್ತಾರೆ. ಇವರು ಆಟ ಮುಗಿಯುವವರೆಗೂ ಕೈಯಲ್ಲಿ ತಾಳ ಹಿಡಿದುಕೊಂಡು ನಿಂತೇ ಇರುತ್ತಾರೆ. ಹಿಮ್ಮೇಳದಲ್ಲಿ ಕನಿಷ್ಟ ನಾಲ್ಕರಿಂದ ಹತ್ತು ಮಂದಿಯವರೆಗೂ ಇರುತ್ತಾರೆ. ಭಾಗವತನ ಹಾಡಿನೊಂದಿಗೆ ಕೋಚು ಎತ್ತಿ ಹಾಡುವ ಹಿಮ್ಮೇಳದವರ ಸ್ವರ ಆಲಾಪ ಕಿವಿ ತುಂಬುವಂಥಾದ್ದು, ದೊಡ್ಡಾಟದ ಸಂಭಾಷಣೆಯು ಸಂಸ್ಕೃತಭೂಯಿಷ್ಠವಾದುದು. ಆಶು ಸಂಭಾಷಣೆಗೆ ಅವಕಾಶವಿಲ್ಲ. ಆದಿ ಪ್ರಾಸ–ಅಂತ್ಯಪ್ರಾಸವುಳ್ಳ ಸಂಭಾಷಣೆ ಉದ್ದುದ್ದ ವಾಕ್ಯಗಳು. ಕೃಷಿಕಾಯಕ ನಿರತ ಗ್ರಾಮೀಣರು ನಾಲಿಗೆಗೆ ಒಗ್ಗದ ಮಾತುಗಳನ್ನು ಬಾಯಿಪಾಠ ಮಾಡಿ ಒಂದೇ ಉಸಿರಿನಲ್ಲಿ ಪಾಠ ಒಪ್ಪಿಸುವಂತೆ ಒಪ್ಪಿಸಿಬಿಡುವುದರಿಂದ ಇಲ್ಲಿ ಅಭಿನಯಕ್ಕೆ ಅವಕಾಶಕ್ಕೆ ಇರುವುದಿಲ್ಲ. ಅಬಿನಯವನ್ನು ಪ್ರೇರೇಪಿಸುವಂಥ ರಂಗಭಾಷೆ ಇಲ್ಲವಾದ್ದರಿಂದ ಪಾತ್ರಗಳ ಮಧ್ಯೆ ಭಾವನಾತ್ಮಕ ಸಂಬಂಧ ಇರುವುದಿಲ್ಲ.

ರಾಮಾಯಣ, ಮಹಾಭಾರತ, ದೇವಿಪುರಾಣಗಳಿಂದ ಆಯ್ದ ಕಥೆಗಳೇ ದೊಡ್ಡಾಟ ಪ್ರಸಂಗಗಳ ಕಥಾವಸ್ತು, ಪರಿಣಯ ಫಲವಾಗಿ ಕಾಳಗ, ಕಾಳಗದ ಫಲವಾಗಿ ಪರಿಣಯ. ಸುಭದ್ರಾ ಪರಿಣಯ, ರತಿ ಕಲ್ಯಾಣ, ಕರ್ಣಾರ್ಜುನರ ಕಾಳಗ, ಇಂದ್ರಜಿತು ಕಾಳಗ, ಭೀಮ ವಿಲಾಸ, ತ್ರಿಪುರ ಸಂಹಾರ ಇತ್ಯಾದಿ. ದೊಡ್ಡಾಟವು ಭವ್ಯತೆಯಲ್ಲಿ ಗೋಳಗುಮ್ಮಟವಿದ್ದಂತೆ ಎಂದು ವಿದ್ವಾಂಸರು ವರ್ಣಿಸಿದ್ದಾರೆ. ಆ ಭವ್ಯತೆ ಇತ್ತೀಚೆಗೆ ನಶಿಸುತ್ತಾ ಬಂದಿದೆ.

## 34. ಬಹುರೂಪಿ ಕುಣಿತ

ಬಹುರೂಪಿಗಳನ್ನು ಹಗಲುವೇಷಗಾರರು ಎಂದು ಕರೆಯುತ್ತಾರೆ. ಕರ್ನಾಟಕದಲ್ಲಿ ಹಗಲುವೇಷ ಹಾಕುವ ಬುಡ್ಗಜಂಗಾಲು ಜನಾಂಗವು ರಾಯಚೂರು, ಕಲಬುರಗಿ, ಬಳ್ಳಾರಿ, ಕೋಲಾರ, ಚಿತ್ರದುರ್ಗ ಜಿಲ್ಲೆಗಳಲ್ಲ ಹೆಚ್ಚಾಗಿಯೂ, ಬಿಜಾಪೂರ, ಧಾರವಾಡ, ಬೆಳಗಾವಿ, ತುಮಕೂರು, ಹಾಸನ, ಶಿವಮೊಗ್ಗ, ಬೆಂಗಳೂರು ಜಿಲ್ಲೆಗಳಲ್ಲಿ ವಿರಳವಾಗಿಯೂ ಕಂಡು ಬರುತ್ತದೆ.

ಬಹುರೂಪಿಗಳು ಹಗಲಿನಲ್ಲಿ ವೇಷಗಳನ್ನು ದರಿಸಿಕೊಂಡು ಮೂರು ದಿನ, ಐದು ದಿನ, ಏಳು ದಿನ, ಒಂಭತ್ತು ದಿನ ಹೀಗೆ ಯಾವುದಾದರೊಂದು ಅವಧಿಯನ್ನು ನಿಗದಿಪಡಿಸಿಕೊಂಡು ಊರಾಡಲು ಹೋಗುತ್ತಾರೆ. ದಿನನಿತ್ಯ ವೈವಿಧ್ಯಮಯ ವೇಷಗಳನ್ನು ಧರಿಸಿಕೊಂಡು ಮನೆ ಮನೆಗಳಿಗೆ ಭಿಕ್ಷೆಗಾಗಿ ಹೋಗುವುದುಂಟು. ಸಾಮಾನ್ಯವಾಗಿ ಇವರು ಊರಾಡುವ ಅವಧಿಯು ಆಯಾ ಊರಿನ ಜನಸಂಖ್ಯೆ, ಮನೆಗಳ ಸಂಖ್ಯೆ, ವೇಷಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಹಗಲುವೇಷಗಳನ್ನು ದರಿಸುವುದನ್ನೇ ಪ್ರಧಾನ ಕಸುಬಾಗುಳ್ಳ ಬುಡ್ಗ ಜಂಗಾಲರು ಮನಮೋಹಕವಾದ, ಕಣ್ಮನ ಸೆಳೆಯುವ, ವೀರಾವೇಶವನ್ನು ಉಕ್ಕಿಸುವ, ಧಾರ್ಮಿಕತೆಯನ್ನು ಪ್ರಚೋದಿಸುವ ವೇಷಗಳನ್ನು  ಧರಿಸುತ್ತಾರೆ. ಮೋಹಿನಿ ಭಸ್ಮಾಸುರ, ಅಂಜನೇಯ, ಭೀಮ, ರಾಮ, ಲಕ್ಷ್ಮಣ, ವಾಲಿ, ಸುಗ್ರೀವ, ಸಂದೋಪಸುಂದ, ಕಿರಾತಾರ್ಜುನ, ಅರ್ಧ ನಾರೀಶ್ವರ, ಬೈರಾಗಿ, ಸಿದ್ಧ, ಲವಕುಶ, ದಾನಶೂರ ಕರ್ಣ ಮುಂತಾದ ವೇಷಗಳ ಜೊತೆಗೆ, ನೋಡಿದ ಕೂಡಲೇ ನಗು ಉಕ್ಕಿ ಬರುವಂತಹ ದಾಸ, ಕೋಡಂಗಿ, ಪೊಲೀಸ್, ಬೈರಾಗಿ ಬೋಡಮ್ಮ ಮುಂತಾದ ವೇಷಗಳನ್ನು ಧರಿಸುತ್ತಾರೆ.

ಹಗಲು ವೇಷಗಾರರು ತಾಚು ಧರಿಸುವ ವೇಷಗಳಿಗೆ ಬೇಕಾದ ಉಡುಗೆ ತೊಡುಗೆಗಳನ್ನು ತಾವೇ ಸಿದ್ಧಪಡಿಸಿಕೊಳ್ಳುತ್ತಾರೆ. ಬಣ್ಣಗಳಿಗೆ ಇದ್ದಿಲು, ತೆಳುವಾದ ತಗಡು, ಬಂಗಾರ ಬಣ್ಣದ ಚಿನ್ನಾರಿ ಪುಡಿ,

ಥಳುಕು ಬಳುಕಿನ ಮಣಿಸರಗಳು, ಮಿಂಚುವ, ಮಿರುಗುವ ಜರಿ ಪಟ್ಟೆಗಳು, ಗಿಲೀಟು ಆಭರಣಗಳು, ರಂಗುರಂಗಿನ ಸೀರೆಗಳು, ಪಂಜೆಗಳು ಇತ್ಯಾದಿಗಳನ್ನು ಬಳಸುತ್ತಾರೆ. ಹಗಲು ವೇಷಗಾರರು ಸಂಗೀತ ಪ್ರಧಾನವಾದ ಕಥಾ ಸಂದರ್ಭಗಳನ್ನು ಆರಿಸಿಕೊಂಡು ವೇಷ ಹಾಕುವುದರಿಂದ ಇವರಲ್ಲಿ ಪ್ರತಿಯೊಬ್ಬರಿಗೂ ಮದುರವಾಗಿ ಹಾಡಲು ಬರುತ್ತದೆ. ಹಾಡುಗಾರಿಕೆಗೆ ವೀಣೆಯಾಕಾರದ ತಂಬೂರಿ, ಬುಡ್ಗ, ಗಗ್ಗರ, ಹಾರ್ಮೋನಿಯಂ, ತಬಲ ಮುಂತಾದವುಗಳನ್ನು ಹಿಮ್ಮೇಳದ ವಾದ್ಯಗಳನ್ನಾಗಿ ಬಳಸುತ್ತಾರೆ.

ಹಗಲು ವೇಷಗಾರರ ಅತಿ ಮುಖ್ಯವಾದ ಸಾಂಪ್ರದಾಯಿಕ ವಾದ್ಯ ಬುಡ್ಗ, ಚರ್ಮದಿಂದ ಮುಚ್ಚಿದ ಒಂದು ಅಗಲವಾದ ಬಾಯಿ, ಮತ್ತೊಂದು ಬದಿಯಲ್ಲಿ ತೆರೆದ ಸಣ್ಣ ಬಾಯಿಯನ್ನು ಹೊಂದಿರುವ ಮತ್ತು ನಡುವಿನಲ್ಲಿ ಉಬ್ಬಿರುವ ಹಿತ್ತಾಳೆಯ ಕೊಳವೆಗೆ ಬುಡ್ಗ ಎಂದು ಕರೆಯುತ್ತಾರೆ. ಬಲಗೈಯಿಂದ ಅಗಲ ಬಾಯಿಯ ಚರ್ಮವನ್ನು ಬಡಿಯುತ್ತಾ ಎಡಗೈನಿಂದ ತೆರೆದ ಭಾಗವನ್ನು ಮುಚ್ಚುವುದು, ತೆಗೆಯುವುದು ಮಾಡುತ್ತಾರೆ. ಬುಡ್ಗವಾದನವು ಇಂಪಾದ ನಾದವನ್ನು ಹೊರಹೊಮ್ಮಿಸುತ್ತದೆ.

ವೇಷಗಳನ್ನು ಧರಿಸಿದಾಗ ವೇಷಗಳು ಮತ್ತು ಕಥಾ ಸಂದರ್ಭಗಳಿಗೆ ತಕ್ಕಂತೆ ಕುಣಿಯುತ್ತಾರೆ. ಹಗಲು ವೇಷಗಾರರ ಅತೀ ಮುಖ್ಯವಾದ ಹಾಗೂ ಜನಾಕರ್ಷಣೀಯವಾದ ವೇಷವೆಂದರೆ ಅರ್ಧ ನಾರೀಶ್ವರ ವೇಷ. ಒಬ್ಬನೇ ವ್ಯಕ್ತಿ ಶಿವ ಮತ್ತು ಪಾರ್ವತಿಯರ ವೇಷವನ್ನು ಧರಿಸುತ್ತಾನೆ. ದೇಹದ ಬಲ ಅರ್ಧದಲ್ಲಿ ಶಿವ, ದೇಹದ ಎಡ ಅರ್ಧದಲ್ಲಿ ಪಾರ್ವತಿ ವೇಷಗಳಿರುತ್ತವೆ, ತಲೆಗೂದಲನ್ನು ನೆತ್ತಿಯ ಮೇಲೆ ತುರುಬು ಕಟ್ಟಿ ಅರ್ಧಚಂದ್ರಾಕಾರದ ಬೆಳ್ಳಿಯ ಬಣ್ಣದ ತಗಡು ಸಿಕ್ಕಿಸಿ ಎಡಭಾಗಕ್ಕೆ ಹೂವು ಮುಡಿಯುತ್ತಾರೆ. ಮುಖದ ಬಲಭಾಗಕ್ಕೆ ಹಸಿರು ಬಣ್ಣ, ಎಡಭಾಗಕ್ಕೆ ಗುಲಾಬಿ ಬಣ್ಣ, ಬಲಹಣೆಯ ಮೇಲೆ ಅರ್ಧ ಭಾಗದ ಮೂರು ಬಿಳಿಯ ಪಟ್ಟಿ ಎಳೆದು ಅದರ ಮೇಲೆ ಕೆಂಪು ಬಟ್ಟಿ ಇಟ್ಟರೆ, ಎಡಭಾಗದ ಹಣೆಗೆ ಕೆಂಪು ಬಣ್ಣದ ಬೊಟ್ಟು ಮಾತ್ರ ಇಡುತ್ತಾರೆ. ಮೂಗಿನ ಕೆಳಗೆ ಬಲಭಾಗಕ್ಕೆ ಚೂಪಾದ ಕರಿಯ ಮೀಸೆ

ಇರುತ್ತದೆ. ಎಡಭಾಗದಲ್ಲಿ ಏನನ್ನೂ ಇಡುವಂತಿಲ್ಲ. ಮೂಗುತಿ ಹಾಕಿಕೊಂಡಿರುತ್ತಾರೆ. ಕುತ್ತಿಗೆಯ ಬಲಭಾಗಕ್ಕೆ ಹೆಡೆ ಬಿಚ್ಚಿನ ಬಟ್ಟೆಯ ಹೆಡೆ ಎತ್ತಿದ ಹಾವು, ಎಡಭಾಗಕ್ಕೆ ಹೊಳೆಯುವ ಕಂಠೀಹರ, ಬಲತೋಳು ಮತ್ತು ಎದೆಯ ಬಲಭಾಗಕ್ಕೆ ವಿಭೂತಿಯ ಬಿಳಿಯ ಪಟ್ಟೆಗಳು, ಎಡಭಾಗದಲ್ಲಿ ಬಣ್ಣದ ಕುಪ್ಪಸ, ಬಲ ಮುಂಗೈ ಮೇಲೆ ವಿಭೂತಿ ಪಟ್ಟಿ, ಎಡ ಮುಂಗೈಗೆ ಬಳೆ, ಸೊಂಟದ ಬಲಭಾಗಕ್ಕೆ ಹುಲಿ ಚರ್ಮದ ಬಟ್ಟೆ, ಎಡಭಾಗಕ್ಕೆ ಕಚ್ಚೆ ಹಾಕಿ ಉಟ್ಟ ರೇಷ್ಮೆ ಸೀರೆ, ತಲೆಯ ತುರುಬಿನಿಂದ ಬೆನ್ನಿನ ಮೇಲೆ ಇಳಿಬಿದ್ದ ಬಣ್ಣದ ವಸ್ತ್ರ, ಈಶ್ವರನ ಪಾತ್ರ ಕಾಣುವಾಗ ಬಟ್ಟೆಯಿಂದ ದೇಹದ ಎಡಭಾಗವನ್ನು ಮುಂದಿನಿಂದ ಅಂದರೆ ಮೂಗಿನ ನೇರದಲಿ ಮುಚ್ಚುತ್ತಾನೆ. ಪಾರ್ವತಿ ವೇಷ ಕಾಣುವಂತೆ ಮಾಡುವಾಗ ಈಶ್ವರನ ವೇಷವನ್ನು ಮುಚ್ಚಿಕೊಳ್ಳುತ್ತಾನೆ. ಅಡಿಯಿಂದ ಮುಡಿಯವರೆಗೆ ಸಮಪ್ರಮಾಣದಲ್ಲಿ ಗೆರೆ ಕೊರೆದಂಥ ವೇಷ.

ಬಹುರೂಪಿಗಳು ಚಲಿಸುವ ರಂಗಭೂಮಿ ಇದ್ದಂತೆ. ಪ್ರೇಕ್ಷಕರು ಇರುವಲ್ಲಿಗೇ ಹೋಗಿ ಅವರಿಗೆ ನಾಟಕ ನೋಡಿದ ಅನುಭವವನ್ನು ತಂದುಕೊಡುತ್ತಾರೆ. ಇವರ ಪಾತ್ರೋಚಿತ ವೇಷ ಭೂಷಣಗಳು, ಮುಖವರ್ಣಿಕೆಗಳು, ಹಾಡು–ಸಂಭಾಷಣೆ, ಅಂಗಿಕ ಅಭಿನಯಗಳೆಲ್ಲವೂ ತಲೆದೂಗಿಸುವಂಥವು, ಹಾಡು–ಕುಣಿತ, ಭಾಷಾಶೈಲಿ, ರಂಗಪ್ರಜ್ಞೆ ಅಚ್ಚರಿಗೊಳಿಸುವಂಥದ್ದು.

# 35. ಸಣ್ಣಾಟ ಕುಣಿತ

ಬೆಳಗಾವಿ ಜಿಲ್ಲೆ ಸಣ್ಣಾಟಗಳ ತವರುಮನೆ, ಸುಮಾರು 160 ವರ್ಷಗಳಿಂದೀಚೆಗೆ ಬೆಳೆದು ಬಂದ ಸಣ್ಣಾಟವನ್ನು ಹುಟ್ಟು ಹಾಕಿ, ಉಳಿಸಿ, ಬೆಳೆಸುವಲ್ಲಿ ಬೆಳಗಾವಿ ಜಿಲ್ಲೆಯ ಕೊಡುಗೆ ಅನನ್ಯವಾದುದು. ಉತ್ತರ ಕರ್ನಾಟಕದ ಜನಪದ ರಂಗಭೂಮಿಯಲ್ಲಿ ದೊಡ್ಡಾಟ ಪ್ರಕಾರಕ್ಕೆ ಪ್ರತಿಯಾಗಿ ಹುಟ್ಟಿಕೊಂಡ ರಂಗ ಪ್ರಕಾರವೇ ಸಣ್ಣಾಟ. ದೊಡ್ಡಾಟದ ಭವ್ಯತೆ, ಶ್ರೀಮಂತಿಕೆ, ಪ್ರದರ್ಶನದ ಅವಧಿ, ಭಾರೀ ವೆಚ್ಚದ ಹೊಡೆತಗಳನ್ನು ಸಹಿಸಿಕೊಳ್ಳಲು ಸಾಧ್ಯವಾಗದಿದ್ದಾಗ ರಂಗಭೂಮಿಯ ಬಗ್ಗೆ ಕಳಕಳಿಯುಳ್ಳ ಪತ್ತಾರ ಮಾಸ್ತರ, ಇಂಚಲದ ಕೆಂಚನಾಯ್ಕ, ಹುಲಕುಂದದ ಚನ್ನಬಸಪ್ಪ, ನೀಲಕಂಠಪ್ಪ ಪತ್ತಾರ ಮುಂತಾದವರು ಸಣ್ಣಾಟ ಪ್ರಕಾರವನ್ನು ಹುಟ್ಟುಹಾಕಿ ಬೆಳೆಸಿದರು.

ಸಣ್ಣಾಟದಲ್ಲಿ ಡಪ್ಪು ಪ್ರಮುಖವಾದ ವಾದ್ಯ, ಈ ವಾದ್ಯದಿಂದಾಗಿ ಸಣ್ಣಾಟಕ್ಕೆ ಡಪ್ಪಿನಾಟ ಎಂಬ ಹೆಸರೂ ಇದೆ. ರಾಯಚೂರು, ಕಲಬುರಗಿ ಜಿಲ್ಲೆಗಳಲ್ಲಿ ಸಣ್ಣಾಟವನ್ನು ಡಪ್ಪಿನಾಟ ಎಂದೇ ಕರೆಯುತ್ತಾರೆ.

ಸಣ್ಣಾಟಗಳು ಬಹುತೇಕ ಗೀತರೂಪಕಗಳು, ಹಾಡುತ್ತಾ ಕುಣಿಯುವುದೇ ಮೂಲ ಮುಮ್ಮೇಳ–ಹಿಮ್ಮೇಳದವರು ಹಾಡಿದಂತೆ, ಪಾತ್ರಗಳು ಆಂಗಿಕ ಅಭಿನಯ ಮಾಡುತ್ತಾ ಕುಣಿಯುತ್ತವೆ. ಮಿತವಾದ ಸಂಭಾಷನೆ, ಸರಳ ವೇಷಭೂಷಣ, ರಂಗಸಜ್ಜಿಕೆ, ಸರಳ ವಾದ್ಯಮೇಳ, ಜನರಿಗೆ ಮನರಂಜನೆಯೊಂದಿಗೆ ನೀತಿ ಬೋಧನೆ.

ಸಣ್ಣಾಟಗಳ ಕಥಾ ವಸ್ತು ದೊಡ್ಡಾಟದಲ್ಲಿರುವಂತೆ ಕಾಳಗ ಮತ್ತು ಕಲ್ಯಾಣಕ್ಕೆ ಸಂಬಂಧಿಸಿದ್ದಲ್ಲ. ಶರಣರು, ಸಾಧು ಸಂತರ ಜೀವನ ಚರಿತ್ರೆ, ಭಕ್ತಿ–ಮುಕ್ತಿ–ಜ್ಞಾನ–ವೈರಾಗ್ಯ–ಜೀವನ–ಸಂಸಾರ, ಮಾಯೆ, ಹೀಗೆ ಆಧ್ಯಾತ್ಮಿಕ ವಸ್ತು, ಭಕ್ತಿಯೊಂದಿಗೆ ಹಾಸ್ಯ–ಶೃಂಗಾರ ಕರುಣ ರಸಗಳು ಮೇಳವಿಸಿವೆ. ಸಾಮಾಜಿಕ ವಿಷಯಗಳನ್ನು ಒಳಗೊಂಡ ಸಣ್ಣಾಟಗಳಲ್ಲಿ ಬರುವ ಪಾತ್ರಗಳು ಸರಳವಾದ ಉಡುಗೆ–ತೊಡುಗೆಗಳನ್ನು

ಹೊಂದಿರುತ್ತವೆ. ಹೆಚ್ಚೆಂದರೆ ಮುಖಕ್ಕೆ ಒಂದಿಷ್ಟು ಬಣ್ಣ, ಕೊರಳಲ್ಲೊಂದು ಕೃತಕ ಹಾರ ಧರಿಸುತ್ತವೆ. ಪುರುಷ ಪಾತ್ರದಾರಿಗಳು ನಿಲುವಂಗಿ, ಧೋತರ, ತಲೆಗೆ ಟೊಪ್ಪಿಗೆ ಇಲ್ಲವೆ ರುಮಾಲು, ನಡುವಿಗೆ ವಸ್ತ್ರ, ಸ್ತ್ರೀ ಪಾತ್ರಧಾರಿಗಳು ಕಚ್ಚೆ ಹಾಕಿದ ಸೀರೆಯುಟ್ಟು ನಡುಪಟ್ಟಿ ಧರಿಸಿ ಕೊರಳಲ್ಲಿ ಕೃತಕ ಹಾರಗಳು, ಕೈತುಂಬ ಬಳೆ, ಕಾಲಿಗೆ ಗೆಜ್ಜೆ, ಕೈಯಲ್ಲಿ ವಸ್ತ್ರ ಹಿಡಿದಿರುತ್ತಾರೆ.

ಸಣ್ಣಾಟಗಳಲ್ಲಿ, ಸುಮಾರು ಒಂದೂವರೆ ಅಡಿ ಸುತ್ತಳತೆ, ನಾಲ್ಕು ಅಥವಾ ಐದಿಂಚು ಎತ್ತರದ ವೃತ್ತಾಕಾರದಲ್ಲಿರುವ ಬಳೆಗೆ ಹದಗೊಳಿಸಿದ ಕೋಣದ ಚರ್ಮ ಬಿಗಿದು ಸಿದ್ಧ ಪಡಿಸಿದ ಡಪ್ಪು ಎಂಬ ವಾದ್ಯವನ್ನು ವಿಶೇಷವಾಗಿ ಬಳಸುತ್ತಾರೆ. ಎಡಗೈಯಿಂದ ದಪ್ಪನ್ನು ಎದೆಗೆ ಅನಿಸಿಕೊಂಡು, ಬಲಗೈಯನ್ನು ಮೇಲೆತ್ತಿ ಕೈಯಲ್ಲಿಯ ಕಡ್ಡಿಯಿಂದ ಚಿಟುಗು ಹಚ್ಚಿ ಬಾರಿಸುತ್ತಾರೆ. ಈ ಡಪ್ಪನ್ನು ಕಾಯಿಸುವುದರಿಂದ ಒಳ್ಳೆಯ ನಾದ ಹೊರಹೊಮ್ಮುತ್ತದೆ. ಶ್ರುತಿಗಾಗಿ ಪುಂಗಿ ಇಲ್ಲವೆ ಹಾರ್ಮೋನಿಯಂ ಬಳಸುತ್ತಾರೆ. ಜೊತೆಗೆ ಹಿತ್ತಾಳೆಯ ತಾಳಗಳಿರುತ್ತವೆ.

ಸಣ್ಣಾಟದಲ್ಲಿ ಮುಮ್ಮೇಳದ ಹಾಡುಗಾರನಿಗೆ ಭಾಗವಂತ, ಮೇಟಿತಾಳ, ಕಥೆಗಾರ, ಮಾಸ್ತರ ಎಂದೆಲ್ಲಾ ಕರೆಯುತ್ತಾರೆ. ಸಣ್ಣಾಟ ಪ್ರದರ್ಶನದ ಯಶಸ್ಸು ಕಥೆಗಾರನನ್ನು ಅವಲಂಬಿಸಿರುತ್ತದೆ. ಹಾಡುವುದರೊಂದಿಗೆ ಕಥೆಯ ಗತಿಯನ್ನು ಕಾಯ್ದುಕೊಂಡು ಹೋಗುವ ಹೊಣೆ ಈತನಿಗೆ ಸೇರಿದ್ದು, ಸಣ್ಣಾಟದ ಪದ್ಯಗಳು ವೈವಿದ್ಯಮಯ ಧಾಟಿಯಿಂದ ಕೂಡಿರುತ್ತವೆ. ಸಾಹಿತ್ಯ ಸಂಗೀತದಲ್ಲಿ ಯಾವುದೇ ರಾಗತಾಳಗಳ ಜಂಜಾಟವಿಲ್ಲದ ಶುದ್ಧ ಜನಪದ ರಚನೆಗಳು, ಸಣ್ಣಾಟದ ಕುಣಿತವೂ ಸಹ ದೊಡ್ಡಾಟದಂತೆ ಅಬ್ಬರದ ಕುಣಿತವಲ್ಲ. ನಯ ನಾಜೂಕಿನ ಕುಣಿತದಿಂದ ಕೂಡಿದ್ದು, ಲಘುವಾಗಿರುತ್ತದೆ. ಸಣ್ಣಾಟದಲ್ಲಿನ ಪಾತ್ರಗಳು ಕೈಕಾಲು ಕತ್ತನ್ನು ಅತ್ತಿತ್ತ ಹೊರಳಾಡಿಸುತ್ತ ಅಂಗಿಕ ಚಲನೆಯೊಂದಿಗೆ ಕುಣಿಯುತ್ತವೆ. ಸಂಭಾಷಣೆಯೂ ಸಹ ಸರಳ ಮತ್ತು ನೇರ, ಚಿಕ್ಕ ವಾಕ್ಯಗಳು, ನಾಲಿಗೆಗೆ ತೊಡರಾಗುವುದಿಲ್ಲ. ವೆಚ್ಚವೂ

ಕಡಿಮೆ, ರಂಗ ಸಜ್ಜಿಕೆಯು ಸರಳ ಪಾತ್ರಗಳ ವೇಷಗಳೂ ಸಾಮಾನ್ಯ, ಹಬ್ಬ ಹರಿದಿನಗಳು ಜಾತ್ರೆ, ಉತ್ಸವಗಳಲ್ಲಿ ಸಣ್ಣಾಟಗಳು ಸಾಮಾನ್ಯವಾಗಿ ಪ್ರದರ್ಶನಗೊಳ್ಳುತ್ತವೆ.

ಸಣ್ಣಾಟಗಳಲ್ಲಿ ಶರಣರಾಟ, ದಾಸರಾಟ, ರಾಧಾರಾಟ ಮತ್ತು ಸಾಮಾಜಿಕ ಆಟಗಳೆಂದು ಬೇರೆ ಬೇರೆ ಪ್ರಕಾರಗಳಿವೆ. ಕೃಷ್ಣಪಾರಿಜಾತ ಸಣ್ಣಾಟದ ಇನ್ನೊಂದು ರೂಪವಾದರೂ ಅದು ಸಣ್ಣಾಟದಲ್ಲಿ ಪ್ರತ್ಯೇಕ ಸ್ಥಾನವನ್ನು ಪಡೆದುಕೊಂಡಿದೆ.

# 36. ದಟ್ಟಿ ಕುಣಿತ

ಉತ್ತರ ಕರ್ನಾಟಕ ಬೀದರ, ಕಲಬುರಗಿ, ರಾಯಚೂರ, ಬಳ್ಳಾರಿ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಕಂಡುಬರುವ ದಟ್ಟಿ ಕುಣಿತ ಅಥವಾ ದಟ್ಟಿಯಾಟವು ಅದ್ವಿತೀಯ ಸಾಧನೆಯ ಕಸರತ್ತುಗಳಿಂದ ಕೂಡಿದ ಕಲಾ ಪ್ರಕಾರ, ಶುಂಭ–ನಿಶುಂಭ ಮತ್ತು ಮಹಿಷಾಸುರರ ಸಂಹಾರಕ್ಕಾಗಿ ದುರ್ಗೆಯ ಅವತಾರ ತಾಳಿದ ಪಾರ್ವತಿಯು ದಟ್ಟಿ ತೊಟ್ಟು ನರ್ತಿಸುತ್ತಾ ರಾಕ್ಷಸ ಸಂಹಾರ ಮಾಡಿದ್ದರ ಸಂಕೇತವಾಗಿ ದಟ್ಟಿ ಕುಣಿತ ರೂಢಿಗೆ ಬಂದಿತೆಂಬುದು ಕಲಾವಿದರ ಅಭಿಪ್ರಾಯ. ಉತ್ತರ ಕರ್ನಾಟಕದ ಕುರುಬ ಸಮುದಾಯವು ತಮ್ಮ ಕುಲದೈವವಾದ ಬೀರಪ್ಪನ ಆರಾಧನೆಯ ಅಂಗವಾಗಿ ದಟ್ಟಿ ಕುಣಿತವನ್ನು ಪ್ರದರ್ಶಿಸುವುದುಂಟು. ದಟ್ಟಿ ಕುಣಿತವನ್ನು ಮೊದಲು ಆಳುಮಕ್ಕಳ ಕುಣಿತವೆಂದು ಕರೆಯುತ್ತಿದ್ದರು. ಆರಾಧನಾ ಮೂಲದಿಂದ ಬಂದ ಈ ಕಲೆಯು ಮೊದಲಿಗೆ ಗುಡಿಯ ಪ್ರಾಂಗನದಲ್ಲಿ ನಡೆಯುತ್ತಿದ್ದುದರಿಂದ ದೇವರ ಸೇವಾ ಕುಣಿತ ಎಂದು ಹೆಸರಾಯಿತು.

ಸಾಮಾನ್ಯವಾಗಿ ಹತ್ತರಿಂದ ಹದಿನಾರು ಮಂದಿ ಕಲಾವಿದರು ಪಾಲ್ಗೊಳ್ಳುವ ಈ ಕುಣಿತದಲ್ಲಿ ನಾಲ್ಕರಿಂದ ಆರು ಮಂದಿ ವಾದ್ಯಮೇಳದವರಿರುತ್ತಾರೆ. ಉಳಿದವರೆಲ್ಲಾ ಕುಣಿತದವರು. ಕೆಂಪು ನಿಲುವಂಗಿ ಧರಿಸಿ, ಕೆಂಪು ಇಜಾರ ಇಲ್ಲವೆ ಪೈಜಾಮ ತೊಟ್ಟಿರುತ್ತಾರೆ. ಇದನ್ನು ವೀರಚೊಣ್ಣ ಎಂದು ಕರೆಯುತ್ತಾರೆ. ನಡುವಿಗೆ ನಡುಕಟ್ಟು, ತಲೆಗೆ ರುಮಾಲು, ರುಮಾಲಿಗೆ ನವಿಲುಗರಿ ಸಿಕ್ಕಿಸಿಕೊಳ್ಳುತ್ತಾರೆ. ಅಂಗಿಯ ಮೇಲೆ ಕುತ್ತಿಗೆಯಿಂದ ಇಳಿಬಿಟ್ಟ ಕೆಂಪಂಚಿನ ದೊಡ್ಡ ದಡಿ ಧೋತರ, ಕೈಗಳಲ್ಲಿ ಉದ್ದನೆಯ ವಸ್ತ್ರ, ಕಾಲಲ್ಲಿ ಗೆಜ್ಜೆ, ಕೊರಳಲ್ಲಿ ಮುತ್ತಿನ ಸರಮಾಲೆ, ಮುಖಕ್ಕೆ ಅರಿಶಿನ ಭಂಡಾರ ಇವಿಷ್ಟೂ ಕುಣಿತದವರ ವೇಷಭೂಷಣಗಳು, ವಾದ್ಯಗಾರರು ದಿನನಿತ್ಯದ ಉಡುಪಿನಲ್ಲಿರುತ್ತಾರೆ. ಕೈಪೆಟ್ಟು, ತಾಳ ಮತ್ತು ಗುಮಿಕಿ, ಶಹನಾಯ್ ಹಿಮ್ಮೇಳದ ವಾದ್ಯಗಳು . ಇವುಗಳ ಜೊತೆಗೆ ಮತ್ತೆರಡು ದೊಡ್ಡ ಕಂಚಿನ ತಾಳಗಳಿರುತ್ತವೆ. ಕೈಪೆಟ್ಟು ಎಂದರೆ ಸಣ್ಣ ಪ್ರಮಾಣದ ಡೊಳ್ಳು, ಗುಮಿಕಿ ಎಂದರೆ ಹೂಜಿಯಾಕಾರದ ಮಣ್ಣಿನ ಮಡಿಕೆಯ ಬಾಯಿಗೆ ಚರ್ಮದ

ಹೊದಿಕೆ ಹೊದಿಸಿ ಸಿದ್ಧಪಡಿಸಿದ ವಾದ್ಯ. ಕರಾವಳಿ ಭಾಗದಲ್ಲಿ ಕಂಡುಬರುವ ಗುಮಟೆ ವಾದ್ಯವನ್ನು ಹೋಲುವಂಥದ್ದು.

ದಟ್ಟಿ ಕುಣಿತದಲ್ಲಿ ಹಿಮ್ಮೇಳದ ವಾದ್ಯಗಳೇ ಕುಣಿತದ ಸ್ಫೂರ್ತಿ ಮತ್ತು ಶಕ್ತಿ ಕೈಪಟ, ತಾಳ, ಸನಾದಿಗಳ ಗತ್ತಿಗೆ ತಕ್ಕಂತೆ ಕಲಾವಿದರು ಒಂದು ಸಾಲು ಇಲ್ಲವೆ ಎರಡು ಸಾಲುಗಳಲ್ಲಿ ನಿಂತು ಎಲ್ಲರೂ ಒಂದೇ ಪ್ರಕಾರವಾಗಿ ಹೆಜ್ಜೆ ಇಡುತ್ತ, ಹಾರುತ್ತ, ಕುಣಿಯುತ್ತ, ಕೂಡುತ್ತ, ಕಾಲು ಜಾಡಿಸುತ್ತ, ಬಾಗುತ್ತ, ಬೀಗುತ್ತ ಕುಣಿಯಲಾರಂಭಿಸುತ್ತಾರೆ. ವಸ್ತ್ರ ಹಿಡಿದ ಕೈಗಳನ್ನು ವಿವಿಧ ಆಕಾರಗಳಲ್ಲಿ, ವಿಭಿನ್ನ ರೀತಿಯಲ್ಲಿ ಬೀಸುತ್ತ ಎಡಕ್ಕೆ ಎರಡ್ಹೆಜ್ಜೆ, ಬಲಕ್ಕೆ ಎರಡ್ಹೆಜ್ಜೆ, ಮುಂದಕ್ಕೆ ಮೂರ್ಹೆಜ್ಜೆ ಜಿಗಿದು, ಗಿರ್ರನೆ ತಿರುಗಿ ಕುಳಿತು, ಚಕ್ಕನೆ ಮೇಲೆದ್ದು ಹಿಂದೆ ಸರಿದು, ಒಮ್ಮೆಲೆ ಕಾಲು ಮೇಲೆ ಮಾಡಿ ಹಿಂದಕ್ಕೆ ಲಾಗ ಹೊಡೆಯುವುದು ಇತ್ಯಾದಿ ಕಸರತ್ತುಗಳನ್ನು ಪ್ರದರ್ಶಿಸುತ್ತಾರೆ. ದಟ್ಟಿ ಕುಣಿತದಲ್ಲಿ ಬಯಲುಗತ್ತು, ಹಿಂಗಾನಿ, ಮುಂಗಾನಿ ಲಾಗಗಳು, ಬಿರಿಕೆ ತಿರುವುವುದು, ದುಂಡುಗುಣಿತ, ಸಾಲುಗುಣಿತ, ಸುತ್ತುಗುಣಿತ ಇತ್ಯಾದಿ ವೈವಿಧ್ಯಗಳಿವೆ. ದಟ್ಟಿಕುಣಿತವು ಕ್ರೀಡಾಕುಣಿತವೂ ಹೌದು. ಹಿಮ್ಮೇಳದಲ್ಲಿ ಶಕ್ತಿದೇವಿಯ ಹಾಡುಗಳನ್ನು ಹಾಡುತ್ತಾರೆ. ಕೈಪಟ ವಾದನ ತೀವ್ರಗತಿಯಲ್ಲಿದ್ದಾಗ ಕಲಾವಿದರ ಕುಣಿತವೂ ತೀವ್ರಗೊಳ್ಳುತ್ತದೆ. ದಟ್ಟಿ ಕಲಾವಿದರು ತೋರುವ ವಿಶೇಷ ಕಸರತ್ತಿನ ಚಮತ್ಕಾರಗಳು ರೋಮಂಚನಕಾರಿಯಾದುವುಗಳು. ತಲೆಯ ಮೇಲೆ ದೀಪದ ಆರತಿಗಳನ್ನು ಹೊತ್ತು ಮರದ ಉರುಳು ದಿಮ್ಮಿಯ ಮೇಲೆ ನರ್ತಿಸುತ್ತ ಎತ್ತರಕ್ಕೆ ಜೋಡಿಸಿಟ್ಟ ಮರದ ಹಲಗೆಯನ್ನು ಏರುವುದು ಪ್ರೇಕ್ಷಕರನ್ನು ನಿಬ್ಬೆರಗಾಗಿಸುತ್ತದೆ. ರಾತ್ರಿಯ ಹೊತ್ತಿನಲ್ಲಿ ಪಂಜು ಹೊತ್ತಿಸಿಕೊಂಡು ಕುಣಿಯುವ ಕುಣಿತವಂತೂ ವರ್ಣಿಸಲು ಅಸದಳವಾದುದು. ದಟ್ಟಿ ಕುಣಿತದ ಕಲಾವಿದರು ತಮ್ಮ ಸಾಮರ್ಥ್ಯಕ್ಕನುಸಾರವಾಗಿ ವೈವಿಧ್ಯಮಯ ಕಸರತ್ತುಗಳನ್ನು ಪ್ರದರ್ಶಿಸುತ್ತಾರೆ. ಉತ್ಸವ, ಜಾತ್ರೆ, ಹಬ್ಬಹರಿದಿನ, ಮೆರವಣಿಗೆ ಸಮಾರಂಭಗಳಲ್ಲಿ ದಟ್ಟಿಕುಣಿತವನ್ನು ಪ್ರದರ್ಶಿಸುತ್ತಾರೆ. ಹೈದ್ರಾಬಾದ ಕರ್ನಾಟಕ ಬೆಳಗಾವಿ ಜಿಲ್ಲೆಯಲ್ಲಿ ಕಂಡುಬರುತ್ತವೆ.

# 37. ಕೋಡಂಗಿ ಕುಣಿತ

ಯಕ್ಷಗಾನ ಬಯಲಾಟಗಳಲ್ಲಿ ರಂಗದ ಮೇಲೆ ಬರುವ ಹಾಸ್ಯ ಪಾತ್ರವಾದ ಕೋಡಂಗಿಯಂತೆ ವೇಷ ಧರಿಸಿ ಕುಣಿಯುವುದರಿಂದ ಕೋಡಂಗಿ ಕುಣಿತ ಎಂಬ ಹೆಸರು ಬಂದಿದೆ. ಇದೊಂದು ಹವ್ಯಾಸಿ ಮನರಂಜನಾ ಪ್ರಧಾನ ಕಲೆ, ಕರ್ನಾಟಕದಾದ್ಯಂತ ಕಂಡು ಬರುತ್ತದೆ. ಈ ಕುಣಿತಕ್ಕೆ ಯಾವುದೇ ನಿರ್ಧಿಷ್ಟತೆಗಳಿಲ್ಲ.

ಕೋಡಂಗಿ ಕುಣಿತದಲ್ಲಿ ನಾಲ್ಕು ಮಂದಿ ಕಲಾವಿದರಿರುತ್ತಾರೆ. ಒಬ್ಬನು ಮುಖಕ್ಕೆ ಮಸಿ ಬಳಿದುಕೊಂಡು, ಹಣೆಗೆ ನಾಮ ಇಟ್ಟು, ತಲೆಗೆ ಶಂಕುವಿನಾಕಾರಣದ ಟೊಪ್ಪಿಗೆ ಧರಿಸಿ, ಸಡಿಲವಾದ ಉದ್ದನೆಯ ಅಂಗಿ ಮತ್ತು ಚಲ್ಲಣ ಉಟ್ಟು, ಕೈಯಲ್ಲಿ ಮರದ ಒಡಿಕತ್ತಿ, ದೊಣ್ಣೆ, ಕಾಲಿಗೆ ಗೆಜ್ಜೆ ಕಟ್ಟಿ ಮೂಗಿನ ತುದಿಗೆ ಬಣ್ಣದ ಹತ್ತಿಯ ಇಲ್ಲವೆ ಕಾಗದದ ಚೂರನ್ನು ಅಂಟಿಸಿಕೊಂಡಿರುವನು. ಮತ್ತೊಬ್ಬ ಬಣ್ಣದ ಸೀರೆ ರವಿಕೆ ಉಟ್ಟು ಚಿಂದಿಗಳಿಂದ ಹೆಣೆದ ಬಟ್ಟೆ ಹಾರವನ್ನು ಕೊರಳಿಗೆ ಧರಿಸಿರುತ್ತಾನೆ. ಇನ್ನಿಬ್ಬರು ವಾದ್ಯದವರು. ಹಬ್ಬ ಹರಿದಿನ, ಉತ್ಸವ ಮೊದಲಾದ ಸಾರ್ವಜನಿಕ ಸಮಾರಂಭಗಳಲ್ಲಿ ಕೋಡಂಗಿ ಕುಣಿತವನ್ನು ಪ್ರದರ್ಶಿಸುತ್ತಾರೆ. ಗಂಡು ವೇಷಧಾರಿಯು ಹೆಣ್ಣು ವೇಷಧಾರಿಯನ್ನು ಹಿಂಬಾಲಿಸುವುದು, ಅಡ್ಡಗಟ್ಟುವುದು. ಅಣಕಿಸುವುದು ಮೊದಲಾದ ಚೇಷ್ಟೆಗಳನ್ನು ಮಾಡುತ್ತಾನೆ. ಕೆಲವೊಮ್ಮೆ ತನ್ನ ಮೂಗಿನ ತುದಿಗೆ ಅಂಟಿಸಿದ ಕಾಗದದ ಚೂರನ್ನು ಬಾಯಿಯಿಂದ 'ಉಫ್' ಎಂದು ಊದಿ ಅಲುಗಾಡಿಸುವ ಮೂಲಕ ಮಕ್ಕಳನ್ನು ರಂಜಿಸುತ್ತಾನೆ. ವಾದ್ಯಗಾರರ ವಾದ್ಯಗಳ ಸದ್ದಿಗೆ ತಕ್ಕಂತೆ ಕುಣಿಯುತ್ತಾನೆ.

# 38. ಮಾರಿ ಕುಣಿತ

ಕರ್ನಾಟಕದಾದ್ಯಂತ ಕಂಡು ಬರುವ ಮಾರಿಕಾಂಬೆಯ ಆರಾಧನೆಯ ಅಂಗವಾಗಿ ಮಾರಿ ಕುಣಿತವು ಹುಟ್ಟಿಕೊಂಡಿವೆ. ಮಾರಿ ಕುಣಿತವನ್ನು ಕುಣಿಯಲು ಇಷ್ಟೇ ಜನರಿರಬೇಕೆಂಬ ನಿಯಮವೇನಿಲ್ಲ. ಈ ಕುಣಿತದಲ್ಲಿ ಮಾರಮ್ಮನಿಗೆ ಬಲಿ ಕೊಡುವ ಕೋಣದ ತಲೆಯನ್ನು ಹೊತ್ತು ಕುಣಿಯುವುದು ಒಂದು ರೀತಿಯದರೆ, ಮಾರಿಯ ಬಗೆಯು ಸರಳವಾದದ್ದು, ಹೆಚ್ಚು ಕಟ್ಟುಪಾಡಿಗಳಿಲ್ಲದ್ದು. ಮಾರಿ ಗುಡಿಯ ಬಯಲಿನಲ್ಲಿ ದಿನನಿತ್ಯದ ಉಡುಪಿನಲ್ಲಿ ನಡುವಿಗೆ ವಸ್ತ್ರ ಸುತ್ತಿ ತಮಟೆ ನಗಾರಿಗಳ ಗತ್ತಿಗೆ ತಕ್ಕಂತೆ ಹತ್ತಾರು ಜನರು ಒಟ್ಟಿಗೆ ಸೇರಿ ಕುಣಿಯುವ ಕುಣಿತವನ್ನು ಮಾರಿ ಕುಣಿತ ಎಂದು ಕರೆಯುತ್ತಾರೆ. ಈ ಸಾಮೂಹಿಕ ಕುಣಿತದಲಿ ಮಾರಿಯ ಪ್ರತೀಕವನ್ನು "ಪೂಜೆ"ಯ ರೂಪದಲ್ಲಿ ಹೊತ್ತವರಿರಬಹುದು, ಕೈಯಲ್ಲಿ ಬೇವಿನ ಸೊಪ್ಪು ಹಿಡಿದು ಹಿಂದೆ ಮುಂದೆ ಆಡಿಸುತ್ತಾ ಹೆಜ್ಜೆ ಹಾಕುವವರಿರಬಹುದು. ತಲೆಯ ಮೇಲೆ ಒನಕೆ ಹೊತ್ತವರಿರಬಹುದು.

ಮಾರಿ ಕುಣಿತದಲ್ಲಿ ಕಲಾವಿದರು ಮಂಡಲಾಕಾರವಾಗಿ ನಿಂತು ಕುಣಿಯುತ್ತಾರೆ. ಕೆಲವರು ಸಾಲಾಗಿ ನಿಂತು ಕುಣಿಯುತ್ತಾರೆ. ಕಾಲಿಗೆ ಗೆಜ್ಜೆ ಕಟ್ಟಿ ಕೈಯಲ್ಲಿ ವಸ್ತ್ರ ಹಿಡಿದು ಸೊಂಟದ ಮೇಲೆ ಎಡಗಯ ಇಟ್ಟು ಕುಣಿಯುತ್ತಾ ಮದ್ಯೆ ಮಧ್ಯೆ "ಹೋ" ಎಂದು ಜೋರಾಗಿ ಕುರಿ ಕೇಕೆ ಹಾಕುತ್ತಾ ಕುಣನಿಯುವ ಗತ್ತನ್ನು ಬದಲಿಸಿಕೊಳ್ಳುತ್ತಾರೆ. ಕುಣಿತದ ನಡುವೆ ಮಾರಮ್ಮನನ್ನು ಹಾಇ ಹೊಗಳುವ ಪದಗಳನ್ನು ಹೇಳುತ್ತಾರೆ. ಮಾರಿ ಕುಣಿತಕ್ಕೆ ರಂಗದ ಕುಣಿತ ಎಂಬ ಹೆಸರೂ ಇದೆ.

# 39. ಗೊಂದಲಿಗರ ಮೇಳ ಕುಣಿತ

ಕಲಬುರಗಿ, ಬೀದರ, ರಾಯಚೂರ, ಬಳ್ಳಾರಿ, ಬೆಳಗಾವಿ, ಧಾರವಾಡ, ಬಿಜಾಪೂರ, ಬಳ್ಳಾರಿ, ರಾಯಚೂರು, ಚಿತ್ರದುರ್ಗ, ಕಲಬುರಗಿ, ಮೈಸೂರು, ಶಿವಮೊಗ್ಗ, ಮೊದಲಾದ ಜಿಲ್ಲೆಗಳಲ್ಲಿ ಕಂಡುಬರುವ ಗೊಂದಲಿಗರು ಕರ್ನಾಟಕದ ಉತ್ಕೃಷ್ಟ ವೃತ್ತಿಗಾಯಕ ಪರಂಪರೆಗೆ ಸೇರಿದವರು, ಸವದತ್ತಿ ಯಲ್ಲಮ್ಮ ಮತ್ತು ತುಳಜಾಪೂರದ ಅಂಬಾಭವಾನಿಯ ಭಕ್ತರಾದ ಇವರು ಶಕ್ತಿ ಉಪಾಸಕರು, ಜಮದಗ್ನಿ–ರೇಣುಕಾ ಪರಂಪರೆಯವರೆಂದು ಪ್ರತೀತಿ. ಶಿವಾಜಿಯು ಗೊಂದಲಿಗರನ್ನು ಗೂಢಚರ ವೃತ್ತಿಗೆ ಬಳಕೆ ಮಾಡುತ್ತಿದ್ದನೆಂದು ಚರಿತ್ರೆಯಲ್ಲಿ ಉಲ್ಲೇಖವಿದೆ.

ಗೊಂದಲಿಗರಲ್ಲಿ ಕಿನ್ನರಿ ಜೋಗಿ, ಹಂದಿ ಜೋಗಿ, ಟಗರು ಜೋಗಿ, ಕೋಣಿ ಜೋಗಿ, ಗೊಂದಲಿ ಜೋಗಿ ಎಂಬ ಒಳಪಂಗಡಗಳಿವೆ. ಹಿಂದೂ ದೈವಗಳನ್ನು ಪೂಜಿಸುತ್ತಾರಾದರು ಅಂಬಾಭವಾನಿಯೇ ಇವರ ಕುಲದೇವತೆ. ಗೊಂದಲಿಗರಲ್ಲಿ ಗೊಂದಲ ಹಾಕುವುದು ಮತೀಯ ಆಚರಣೆ. ತಮ್ಮನ್ನು ಆಹ್ವಾನಿಸಿದವರ ಮನೆಗಳಿಗೆ ಹೋಗಿ ಬಕ್ತರ ಕೋರಿಕೆ ಮೇರೆಗೆ ಗೊಂದಲ ಹಾಕುತ್ತಾರೆ. ನಿಗದಿಪಡಿಸಿದ ದಿನದಂದು ರಾತ್ರಿಯ ಹೊತ್ತು ಗೊಂದಲ ಹಾಕುತ್ತಾರೆ. ಶಕ್ತಿ ಆರಾಧಕರಾದ ಗೊಂದಲಿಗರು ದೇವಿಗುಡಿಯ ಮುಂದೆ ಇಲ್ಲವೆ ದೇವಿಯ ಭಕ್ತ ಮನೆಗಳಲ್ಲಿ, ಹೆಣ್ಣು–ಗಂಡೆಂಬ ಭೆದವಿಲ್ಲದೆ ದೇವಿಯ ಆರಾಧನೆ ಮಾಡುವ ವಿಧಿಗೆ 'ಗೊಂದಲ ಹಾಕುವುದು' ಎಂದು ಕರೆಯುತ್ತಾರೆ. ಇದೊಂದು ಸಾಂಪ್ರದಾಯಿಕ ಆರಾಧನಾ ಪದ್ಧತಿ. ಆದರೆ ಇದನ್ನು ಮೀರಿ ಗೊಂದಲಿಗರು ಅತ್ಯುತ್ತಮ ವೃತ್ತಿಗಾಯಕರು, ಗೊಂದಲಿಗರ ಹಾಡುಗಾರಿಕೆಯು ಭಕ್ತಿ–ಮನರಂಜನೆ–ಅರ್ಥಗಾರಿಕೆ ಮೂವರ ಸಂಮಿಶ್ರಣ.

ಗೊಂದಲಿಗರು ಸಮಾಳ, ತುಂತುಣಿ ಮತ್ತು ಕೈತಾಳಗಳ ಮೇಳದೊಂದಿಗೆ ನವರಸಯುಕ್ತವಾದ ಕಥೆ ಹೇಳುವ ಕಾಯಕದಲ್ಲಿ ಪಲಗಿದವರು. ಸಾಮಾನ್ಯವಾಗಿ ಗೊಂದಲಿಗರ ಕಾಲಿಗೆ ಗೆಜ್ಜೆ ಮೇಳದಲ್ಲಿ

ಇಬ್ಬರು ಅಥವಾ ಮೂವರು ಕಲಾವಿದರಿರುತ್ತಾರೆ. ತಲೆಗೆ ಕವಡೆಗಳನ್ನು ಹೆಣೆದ ಮುಂಡಾಸು, ನಿಲುವಂಗಿ, ಮೇಲೊಂದು ಕರಿಕೋಟು, ಕಚ್ಚರ, ಕೊರಳಲ್ಲಿ ಮಣಿಸರಗಳನ್ನು ಧರಿಸಿ ಕೈಯಲ್ಲಿ ತಾಳ, ತುಂತುಣಿ, ಸಮಾಳಗಳನ್ನು ಹಿಡಿದು ಕಥೆ ಹೇಳುತ್ತಾರೆ. ಗೊಂದಲಿಗರ ಆಟವು ಕರ್ನಾಟಕ ಜನಪದ ರಂಗಭೂಮಿಯ ಬೀಜರೂಪವನ್ನು ಒಳಗೊಂಡಿದೆ. "ಆಟದ ನಿರೂಪಣೆಯೂ ಹಿಮ್ಮೇಳ ಮತ್ತು ಕಥೆಗಾರನ ಮೂಲಕವಾಗಿ ಸಾಗುತ್ತದೆ. ನಾಟಕೀಯವಾಗಿ ಕಥೆಯನ್ನು ಮುಂದುವರಿಸುತ್ತಾರೆ. ವಿಶೇಷವೆಂದರೆ ಇಬ್ಬರೇ ಎಲ್ಲ ಪಾತ್ರಗಳನ್ನು ನಿರ್ವಹಿಸುವುದು. ಆದರೂ ಗೊಂದಲಿಗರ ಆಟದಲ್ಲಿ ಕಥೆಗಾರನೇ ಪ್ರಮುಖನಾದವನು. ಆತ ನಟ, ನಿರೂಪಕ, ಬಾಗವತ, ವಾದಕ, ನರ್ತಕ, ಸೂತ್ರಧಾರ ಎಲ್ಲವೂ ಆಗಿರುತ್ತಾನೆ." ಹಿಮ್ಮೇಳದವರು ಕೊನೆಯವರೆಗೂ ನಿಂತುಕೊಂಡೇ ಆಟದ ಪ್ರಕ್ರಿಯೆಗೆ ಗತಿ ನೀಡುತ್ತಾನೆ. ಕಥೆಗಾರನ ನಿರೂಪಣೆಯನ್ನು ಅನುಸರಿಸಿ ಆಟಕ್ಕೆ ಕಳೆ ಕಟ್ಟುತ್ತಾನೆ. ಚೌಡಿಕೆ, ಸಮಾಳಗಳು ಗೊಂದಲಿಗರಾಟದಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಕತೆಗಾರನು ವಾದ್ಯಗಳನ್ನು ನುಡಿಸುತ್ತಾ ಕುಣಿಯುವುದರೊಂದಿಗೆ ಆಟಕ್ಕೆ ಸೊಗಸು ತರುತ್ತಾನೆ. ಗೊಂದಲಿಗರು ಶೀಲಾವತಿ, ಬಸವಕುಮಾರ–ಲೋಹಿತಕುಮಾರ, ಅರಣ್ಯಕುಮಾರ, ಕುಮಾರ ರಾಮ, ಲಕ್ಷಾಪತಿ ರಾಜ, ಬಾಳ ಭಿಕ್ಷುಕ, ಯಲ್ಲಮ್ಮ, ರೇಣುಕೆಯ ಕಥೆ ಮೊದಲಾದ ಕಥಾನಕಗಳನ್ನು ರಸವತ್ತಾಗಿ ಹಾಡುತ್ತಾರೆ ಮತ್ತು ಕುಣಿಯುತ್ತಾರೆ.

# 40. ದಾಸರಾಟ ಕುಣಿತ

'ದಾಸ'ರೆನ್ನುವ ಜನಾಂಗ ಆಡುವ ಬಯಲಾಟದ ಒಂದು ಪ್ರಕಾರ, ದಾಸರು ಹಳ್ಳಿಯಿಂದ ಹಳ್ಳಿಗೆ ಸಂಚರಿಸುತ್ತಾ ಜಾತ್ರೆ ಉತ್ಸವಗಳ ಕಾಲದಲ್ಲಿ ಆಶ್ರಯ ಸಿಗುವಲ್ಲೆಲ್ಲ ತಮ್ಮ ಕಲೆಯನ್ನು ಪ್ರದರ್ಶಿಸುತ್ತಾರೆ. ಇವರ ಆಟಗಳು ಸಾಮಾನ್ಯವಾಗಿ ಧಾರ್ಮಿಕ ವಸ್ತುಗಳನ್ನುಳ್ಳವು. ತಿರುಪತಿ ತಿಮ್ಮಪ್ಪನ ಭಕ್ತರು. ಈ ಮೇಳದ ಮುಖ್ಯಸ್ಥ ನಟ್ಟುವಾನ. ಇವನನ್ನು ಗೊಡ್ಡಿಭೀಮಣ್ಣ ಎಂದೂ ಕರೆಯುತ್ತಾರೆ. ಪ್ರದರ್ಶನದ ಪೂರ್ಣಾಧಿಕಾರ, ಜವಾಬ್ದಾರಿ ಇವನದೇ. ಸ್ತ್ರೀ ಪುರುಷರಿಬ್ಬರೂ ಭಾಗವಹಿಸುವುದು ದಾಸರಾಟದ ವೈಶಿಷ್ಟ್ಯ, ಪ್ರತಿಯೊಂದು ದಾಸರಾಟದ ಮೇಳವೂ ಹಾಡುವುದರಲ್ಲಿ, ಕುಣಿಯುವುದರಲ್ಲಿ ನುರಿತಳಾದ ಒಬ್ಬ ಸುಂದರ ನಾಯಕಿ (ದಾಸಿ) ಯನ್ನು ಹೊಂದಿರುತ್ತದೆ. ಒಂದು ತಂಡದ ಜನಪ್ರಿಯತೆ ಈ ದಾಸಿಯನ್ನೇ ಅವಲಂಬಿಸಿರುತ್ತದೆ.

ಹಳ್ಳಿಯ ಯಾವುದೇ ಕೂಟ, ಚೌಕ, ರಸ್ತೆ ಅಥವಾ ಮಂಟಪಗಳು ಇವರ ರಂಗಸ್ಥಳವಾಗಬಹುದು. ಸುಮಾರು 10 ಚದರಡಿ ನೆಲದ ಮೇಲೆ ಜಮಖಾನ ಹಾಸಿ ರಂಗ ಸಿದ್ಧಪಡಿಸಿ ಮಧ್ಯದಲ್ಲಿ ಕಂಬಳಿ ಕಟ್ಟಿ ಅದರ ಹಿಂಭಾಗವನ್ನು ನೇಪಥ್ಯವನ್ನಾಗಿಸಿಕೊಂಡು ಮುಂಭಾಗವನ್ನು ರಂಗಭೂಮಿ ಮಾಡಿಕೊಳ್ಳುತ್ತಾರೆ. ತಿರುಪತಿ ತಿಮ್ಮಪ್ಪನ ಸಂಕೇತವಾಗಿ ನೇಪಥ್ಯದಲ್ಲಿ ದೀಪವೊಂದು ಉರಿಯುತ್ತಿರುತ್ತದೆ. ಇದರ ಮುಂದೆ ಧೂಪ, ಹಣ್ಣು, ತೆಂಗಿನಕಾಯಿ, ಗೆಜ್ಜೆ ಮತ್ತು ತಾಳಗಳಿರುತ್ತವೆ. ಎಲ್ಲರೂ ವೇಷಭೂಷಣಗಳನ್ನು ದರಿಸಿಯಾದ ಮೇಲೆ ನಟ್ಟುವಾನ ಮತ್ತು ದಾಸಿ ದೀಪದೆದುರು ಕೈಮುಗಿದು ನಿಲ್ಲುತ್ತಾರೆ. ಉಳಿದ ನಟರು, ವಾದ್ಯವೃಂದವವರು ಅವರನ್ನನುಸರಿಸುತ್ತಾರೆ. ನಟ್ಟುವಾನ ದೀಪಕ್ಕೆ ಪೂಜೆ ಸಲ್ಲಿಸಿ, ತೆಂಗಿನ ಕಾಯಿ ಒಡೆದು ಅದರ ಹೋಳುಗಳನ್ನು ರಂಗದ ಎರಡೂ ಬದಿಗೂ ಎಸೆಯುತ್ತಾನೆ. ದೀಪಕ್ಕೆ ನಮಸ್ಕರಿಸಿ ದೀಪವನ್ನು ಕೈಗೆತ್ತಿಕೊಳ್ಳುತ್ತಾನೆ. ದಾಸಿ ಗೆಜ್ಜೆ ಕಟ್ಟಿಕೊಳ್ಳುತ್ತಾಳೆ. ಎಲ್ಲರೂ ನಟ್ಟುವಾನನಿಗೆ ನಮಸ್ಕರಿಸುತ್ತಾರೆ. ನಟ್ಟುವಾನನ ಎಡಭಾಗದಲ್ಲಿ ಹಾರ್ಮೋನಿಯಂನವನು, ಬಲಭಾಗದಲ್ಲಿ ಮೃದಂಗದವನೂ ಕುಳಿತುಕೊಳ್ಳುತ್ತಾರೆ.

ಕಂಬಳಿಯ ಹಿಂದೆ 3 ಜನ ತಾಳ ಹಿಡಿದು ಕುಳಿತುಕೊಳ್ಳುತ್ತಾರೆ. ದಾಸರಾಟದ ಪ್ರೇಕ್ಷಕರನ್ನು 'ಪರಸಿ' ಎಂದು ಕರೆಯಲಾಗುತ್ತದೆ.

ರಾತ್ರಿ ಸುಮಾರು 10 ಗಂಟೆಯ ವೇಳೆಗೆ ತಿರುಪತಿ ತಿಮ್ಮಪ್ಪ, ಶಿವ, ಗಣೇಶ ಮುಂತಾದ ದೇವತೆಗಳ ಸ್ತುತಿ ಪದಗಳಿಂದ ಪ್ರದರ್ಶನ ಪ್ರಾರಂಭ. ರಾಧೆ ಪ್ರವೇಶ, ಗೆಜ್ಜೆ ದನಿ ಮಾಡುತ್ತಾ 'ರಾಧೆ ಬರುವಳು ನೋಡಿರೇ' ಎಂದು ಹಾಡುತ್ತಾ ಕುಣಿಯುತ್ತಾಳೆ. ನಟ್ಟುವಾನ ರಂಗದ ಮೇಲಿನ ಪ್ರತಿಯೊಂದು ಪಾತ್ರದೊಂದಿಗೆ ಹಾಡುತ್ತಾನೆ. ಕಂಬಳಿಯ ಹಿಂದೆ ನಿಂತ ಹಿಮ್ಮೇಳದವರ ಪೈಕಿ ಒಬ್ಬನು ಚೀರುದನಿಯಲ್ಲಿ ಹಾಡುತ್ತಿರುತ್ತಾನೆ. ಹಿಮ್ಮೇಳನವರು ಹಾಡುವಾಗ ರಾಧ ಅಥವಾ ದಾಸಿ ತಾಳಲಯಗಳಿಗೆ ಸರಿಯಾಗಿ ಹಾವಭಾವದಿಂದ ನರ್ತಿಸುತ್ತಿರುತ್ತಾರೆ. ಹಾಡು ಮುಗಿದೊಡನೆ ಆಕೆ ರಂಗದ ಮೂಲೆಯಲ್ಲಿ ವಯ್ಯಾರದಿಂದ ನಿಲ್ಲುತ್ತಾಳೆ. ಮೇಳಗಾರನೊಂದಿಗೆ ತನ್ನ ಪರಿಚಯದ ಪದ ಹೇಳಿ ಅದರ ಸಾರಾಂಶವನ್ನು ವಿವರವಾಗಿ ಸಂಭಾಷಣೆಯ ರೂಪದಲ್ಲಿ ಹೇಳುತ್ತಾಳೆ. ಕೃಷ್ಣ ಪ್ರವೇಶಿಸಿದ ಮೇಲೆ ಅವನಿಗೂ ರಾಧೆಗು ವಾದ ವಿವಾದಗಳು ನಡೆದು ಜಗಳವಾಡುತ್ತಾರೆ. ಕೊನೆಗೆ ರಾಜಿಯಾಗಿ ಇಬ್ಬರೂ ನರ್ತಿಸುತ್ತಾ ಹೋಗುತ್ತಾರೆ.

ಇದಾದ ಮೇಲೆ ಕೃಷ್ಣಾವತಾರದ ಒಂದೆರಡು ಕಥೆಗಳನ್ನು ಆಡುತ್ತಾರೆ. ಮುಂದೆ ಪ್ರಾರಂಭವಾಗುವ ಕಥೆಯಲ್ಲಿ ರಾಧೆ ಅಥವಾ ದಾಸಿಯಾಗಿದ್ದವಳು "ಚಿಮಣಾ" ಎಂಬ ಹೆಸರಿನಿಂದ ಸಂಪ್ರದಾಯದ ನಾಯಕಿಯ ವೇಷದಲ್ಲಿ ನಟ್ಟುವಾನ, ವಾದ್ಯಗಾರರ ಅದ್ದೂರಿಯ ಸ್ವಾಗತದೊಂದಿಗೆ ರಂಗಕ್ಕೆ ಬರುತ್ತಾಳೆ. ದಾಸರಾಟದ ನಾಯಕನ ಹೆಸರು ಗೊಡ್ಡಿ ಭೀಮಣ್ಣ, ಅವನು ಬಂದು ಇವಳ ಬಗೆಗೆ ಪ್ರೇಮ ವ್ಯಕ್ತಪಡಿಸುತ್ತಾನೆ. ಅವಳು ನಿರಾಕರಿಸುತ್ತಾಳೆ. ಆಗ ಗಂಡು–ಹೆಣ್ಣಿನ ಹೆಚ್ಚುಗಾರಿಕೆಯ ಬಗ್ಗೆ ಅವರಲ್ಲಿ ವಾದ ವಿವಾದಗಳೇಳುತ್ತವೆ. ತಮ್ಮ ನಿಲುವಿನ ಸಮರ್ಥನೆಗೆ ಕವಿಗಳ, ದಾಸರ, ಸಂತರ ಪದಗಳನ್ನು,

ವಚನಗಳನ್ನು ಬಳಸಿಕೊಳ್ಳುತ್ತಾರೆ. ಇವರ ನಡುವೆ ಆಗಾಗ್ಗೆ ವೇಷ ಬದಲಿಸುತ್ತಾ ಪ್ರೇಕ್ಷಕರನ್ನು ನಗಿಸುವ ವಿದೂಷಕನೊಬ್ಬ ಇರುತ್ತಾನೆ. ಅವನನ್ನು 'ಜವಾರಿ' ಎಂದು ಕರೆಯಲಾಗುತ್ತದೆ. ಅವನು ನಾಯಕ ನಾಯಕಿಯರ ವಾದಕ್ಕೆ ಹಾಸ್ಯಾಸ್ಪದ ತಿರುವು ಅಥವಾ ಅಶ್ಲೀಲ ಅರ್ಥ ಕಲ್ಪಿಸುತ್ತಿರುತ್ತಾನೆ. ಪ್ರೇಕ್ಷಕರು ಚಿಮಣಾಳನ್ನು ಕಥೆಗೆ ಸಂಬಂಧವಿಲ್ಲದ ತಮ್ಮ ಮೆಚ್ಚುಗೆಯ ಯಾವುದಾದರು ಹಾಡನ್ನು ಹೇಳಲು ಒತ್ತಾಯಿಸಬಹುದು. ಕೃಷ್ಣನ ಯಾವುದಾದರೊಂದು ಅವತಾರವನ್ನು ಅಭಿನಯಿಸುವಂತೆ ನಷ್ಟವಾನನಿಗೆ ಹೇಳಬಹುದು. ಅವತಾರದ ಕಥೆಗಳು ಒಂದರಿಂದೊಂದು ಭಿನ್ನವಾಗಿದ್ದು ಒಂದೆರಡು ಗಂಟೆಗಳ ಅವಧಿಯಲ್ಲಿ ಮುಗಿಯುತ್ತವೆ. ಒಂದೊಂದೂ ಲಾವಣಿಯ ರೂಪದಲ್ಲಿದ್ದು ಮಧ್ಯೆ ಒಂದೆರಡು ನಾಟಕೀಯ ಸನ್ನಿವೇಶಗಳನ್ನು ಹೊಂದಿರುತ್ತವೆ. ಪ್ರತಿಯೊಂದು ಅವತಾರದ ಕಥೆಗು ನಾಂದಿ ಮತ್ತು ಮಂಗಳಗಳಿರುತ್ತವೆ.

ದಾಸರಾಟಕ್ಕೆ ನಿರ್ಧಿಷ್ಟ ರೂಪ; ವಸ್ತು ಇಲ್ಲ. ಮಹಾರಾಷ್ಟ್ರದಲ್ಲಿ ಇಂಥದೇ ಪ್ರಕಾರವನ್ನು 'ತಮಾಶ' ಎಂದು ಕರೆಯುತ್ತಾರೆ. ದಾಸರಾಟದ ಈ ದೇಶೀ ರಂಗಭೂಮಿಯು ಆರಾಧನೆ ಯಿಂದಲೇ ಹುಟ್ಟಿಕೊಂಡದ್ದು, ಗ್ರಾಮದೇವತೆಯ ಅಸಾದಿಯಂತೆ ಇಲ್ಲಿ ನಟ್ಟುವಾನನಿದ್ದಾನೆ. ಇವನನ್ನು 'ಮೇಟಿತಾಳ' ಅಥವಾ 'ಕಥೆಗಾರ' ಎನ್ನುವ ಹೆಸರುಗಳಿಂದ ಕರೆಯುತ್ತಾರೆ. ಪೂರ್ವಜ ರಿಂದ ಬಂದ ತಾಳಗಳನ್ನು ನಟ್ಟುವಾನನಲ್ಲದೆ ಬೇರೆ ಯಾರೂ ಮುಟ್ಟುವುದಿಲ್ಲ. ಅವನ ಪ್ರಕಾರ ಆಟವನ್ನು ಜೀವಂತವಾಗಿ ಉಳಿಸಿಕೊಂಡು ಹೋಗುವುದೇ ದೇವರ ಸೇವೆ. ಇವನು ರಂಗಸ್ಥಳದ ಮೇಲ್ವಿಚಾರಕನಾದುದರಿಂದ ಮೇಳಗಾರನೆಂತಲೂ ಕರೆಯುತ್ತಾರೆ. ಹಿಮ್ಮೇಳದಲ್ಲಿ ಮೂರು ಜನರಿದ್ದು ಅವರು ಒಳ ಅಟ್ಟದಲ್ಲಿ ಪ್ರೇಕ್ಷಕರಿಗೆ ಕಾಣದಂತೆ ನಿಂತಿರುತ್ತಾರೆ. ಮುಮ್ಮೇಳದವರ ಹಾಡನ್ನು ಇವರು ಪುನಃ ಹಾಡುತ್ತಾರೆ. ಆಗ ಪಾತ್ರಧಾರಿಗಳು ಕುಣಿಯುತ್ತಾರೆ.

ದಾಸರಲ್ಲಿ ಎಡಗೈ–ಬಲಗೈ ದಾಸರು ಎಂದಿದ್ದು ಎಡಗೈ ದಾಸರು ತಮ್ಮ ಹೆಣ್ಣು ಮಕ್ಕಳನ್ನು ದೇವಾಲಯಕ್ಕೆ ಬಿಡುವುದುಂಟು. ಇದನ್ನು ದಾಸರು ಬಿಡುವುದೆಂದು ಕರೆಯುತ್ತಾರೆ. ದಾಸರಾಟದಲಿ ಬರುವ ಶಿವ–ಶಕ್ತಿ ಮತ್ತು ಕೃಷ್ಣ–ರಾಧೆಯರ ಹೆಸರಿನಲ್ಲಿ ನಡೆಯುವ ಹೆಚ್ಚುಗಾರಿಕೆಯ ವಾದವನ್ನು ಕಲ್ಗಿ ಮತ್ತು ತುರಾ ಎಂದು ವಿಭಾಗಿಸಲಾಗಿದೆ. ತುರಾ ಪಂಥದವರು ಗಂಡು ಹೆಚ್ಚೆಂದರೆ ಕಲ್ಗಿ ಪಂಥದವರು ಹೆಣ್ಣು ಹಚ್ಚೆಂದು ವಾದಿಸುತ್ತಾರೆ. ಆದರೆ ದಾಸರಾಟದ ಪ್ರಧಾನ ವಸ್ತು ವಿಷ್ಣುವಿನ ದಶಾವತಾರಗಳೇ ಹೊರತು ಶಕ್ತಿಯ ಉಪಾಸನೆಯಲ್ಲ. ಹಿಂದೆ ವೈಷ್ಣವ ದಾಸರಲ್ಲದೆ ಶೈವದಾಸರೂ ಇದ್ದಂತೆ ತಿಳಿದುಬರುತ್ತದೆ. ದಾಸರಾಟದಲ್ಲಿ ಅವತಾರಗಳ ಕಥೆ ಬಿಟ್ಟರೆ ಉಳಿದ ಪ್ರದರ್ಶನವೆಲ್ಲ ಚಿಂದಿಯಾಗಿದ್ದು ತೇಪೆ ಹಚ್ಚಿದ ವಸ್ತುವಿನಿಂದ ಕೂಡಿರುತ್ತದೆ. ಪರಸ್ಪರ ಸಂಬಂಧವಿಲ್ಲದ ಅನೇಕಾಂಶಗಳನ್ನು ದಾಸರಾಟ ಒಳಗೊಂಡಿದೆ. ಆದ್ದರಿಂದಲೇ 'ದಾಸರಾಟ ಆಟವಲ್ಲ' 'ದೋಸೆ ಊಟ ಊಟವಲ್ಲ' ಎಂಬ ಗಾದೆ ಹುಟ್ಟಿಕೊಂಡದ್ದು.

ದಾಸರಾಟವು ಒಂದು ಕಾಲಕ್ಕೆ ಕರ್ನಾಟಕದ ಉತ್ತರಭಾಗದಲ್ಲಿ ಅದರಲ್ಲೂ ಕಲಬುರಗಿ, ಬೀದರ್, ರಾಯಚೂರು, ಧಾರವಾಡ, ಬಳ್ಳಾರಿ ಮೊದಲಾದ ಭಾಗಗಳಲ್ಲಿ ಶುದ್ಧ ಮನರಂಜನ ಕಲೆಯಾಗಿ ಬೆಳೆದುಬಂದಿತ್ತು. ಆದರೆ ಕ್ರಮೇಣ ದಾಸರು ಬೇರೆ ಬೇರೆ ವೃತ್ತಿಗಳನ್ನು ಕೈಗೊಂಡಿದ್ದರ ಫಲವಾಗಿ ದಾಸರಾಟವು ನಶಿಸುತ್ತಾ ಬಂದಿರುತ್ತದೆ.

ದಾಸರಾಟದ ಮುಂದುವರಿದ ಭಾಗವಾಗಿ ರಾಧಾನಾಟ ಬೆಳವಣಿಗೆ ಸಾಧಿಸಿತು. ರಾಧಾನಾಟಕ್ಕೆ ಇಂಗಳಗಿ ಆಟ ಎಂದೂ ಸಹ ಕರೆಯುತ್ತಾರೆ. ರಾಧಾನಾಟವನ್ನು ಹುಟ್ಟು ಹಾಕಿದವರು ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಬಸಿರಿಗಿ ಗ್ರಾಮದವರು ಎಂಬ ಪ್ರತೀತಿ ಇದೆ. ರಾಧಾನಾಟದಲ್ಲಿ ನಾಯಕ ಗಲ್ಪೋಜಿ, ನಾಯಕಿ ಚಿಮಣಾ, ನಗೆಗಾರ ಮೂವರೇ ಪಾತ್ರಧಾರಿಗಳು, ಮಹಾರಾಷ್ಟ್ರದ ತಮಾಶಾ

ರಂಗಭೂಮಿಯಲ್ಲಿ ಕಂಡು ಬರುವ ಶೃಂಗಾರ ಭರಿತ, ಪ್ರಣಯೋನ್ಮಾದದ ಹಾಡುಗಳು ರಾಧಾನಾಟದಲ್ಲಿ ಚಲ್ಲುವರಿದಿವೆ. ಸರಳ ರಂಗಸಜ್ಜಿಕೆಯಲ್ಲಿ ಅಭಿನಯಗೊಳ್ಳುವ ಈ ಆಟದಲ್ಲಿ ಮೃದಂಗ, ಸಾರಂಗಿ, ಹಾರ್ಮೋನಿಯಂ, ದಪ್ಪು ಮುಂತಾದ ವಾದ್ಯಗಳನ್ನು ಬಳಸುತ್ತಾರೆ. ನಾಟಕದಲ್ಲಿನ ಅತಿಯಾದ ಶೃಂಗಾರದಿಂದಾಗಿ ರಾಧಾನಾಟವು ಅಲ್ಪಾಯಸ್ಸು ಕಂಡಿತು.

# 41. ಪಾಳೇಗಾರನ ಕುಣಿತ

ನಮ್ಮ ದೇಶ ಹಿಂದಿನಿಂದಲೂ ಪಾಳೆಯಗಾರರ ಆಳ್ವಿಕೆಯನ್ನು ಅನುಭವಿಸಿದ ದೇಶ. ವಾಸ್ತವವಾಗಿ ಪಾಳೆಯಗಾರರು ಸ್ವಾಭಿಮಾನ, ಸಾಹಸ, ಪರಾಕ್ರಮಗಳಿಗೆ ಅಂತೆಯೇ ದರ್ಪ ಕ್ರೌರ್ಯಗಳಿಗೂ ಹೆಸರಾದವರು.

ಗತಿಸಿದ ಪಾಳೆಯಗಾರರ ವೇಷಭೂಷಣಗಳು, ಆಯುಧಗಳು, ದರ್ಪ ಧೌಷ್ಟ್ಯಗಳನ್ನು ಪ್ರದರ್ಶಿಸುವ ಕುಣಿತವೇ ಪಾಳೇಗಾರನ ಕುಣಿತ. ಈ ಕುಣಿತದಲ್ಲಿ ಭಾಗವಹಿಸುವ ಕಲಾವಿದರು ತಲೆಗೆ ಬಣ್ಣದ ರುಮಾಲನ್ನು ಸುತ್ತಿ ಬಿಗಿಯಾದ ಬಣ್ಣದ ಚಡ್ಡಿಯನ್ನು ಧರಿಸಿದ್ದು ಬರಿಮೈಲಿರುತ್ತಾರೆ. ಕೆನ್ನೆ, ಹಣೆ, ಮೂಗು, ಮೀಸೆ, ತಲೆಯಿಂದ ಕತ್ತಿನವರೆಗೆ ಎರಡೂ ಕಡೆಗಳಿಗೆ ಇಳಿಬಿಟ್ಟ ಕೂದಲ ಚೌಲಿ, ಕೊರಳಿಗೆ ಮಣಿಹಾರ, ಬಲಗೈಲಿ ಕತ್ತಿ ಇಲ್ಲವೆ ದೊಣ್ಣೆ ಅಥವಾ ಕುಡುಗೋಲು, ಎಡಗೈಲಿ ಗುರಾಣಿ ಹಿಡಿದಿರುತ್ತಾರೆ. ಕೆಲವರು ಬಾಯಲ್ಲಿ ನಿಂಬೆಹಣ್ಣು ಕಚ್ಚಿ ಹಿಡಿದಿರುತ್ತಾರೆ. ಕಾಲಿಗೆ ದಪ್ಪ ಕಡಗ ಅಥವಾ ಗೆಜ್ಜೆ ಧರಿಸಿರುತ್ತಾರೆ. ಬೆನ್ನಿಗೆ ಮೇಲ್ಮುಖವಾಗಿ ಸೂರ್ಯೋದಯ ಕಿರಣಗಳ ಆಕಾರದಲ್ಲಿ ಇಲ್ಲವೆ ಕತ್ತರಿ ಆಕಾರದಲ್ಲಿ ಕತ್ತಿಗಳನ್ನು ಕಟ್ಟಿಕೊಂಡಿರುತ್ತಾರೆ. ಬೆನ್ನ ಹಿಂದೆ ಒಂದು ಹಳೆಯ ಬಟ್ಟೆ ಗಂಟಿದ್ದು ಅದನ್ನು “ಪಾಳೆಯಗಾರನ ಗಂಟು” ಎಂದು ಕರೆಯುತ್ತಾರೆ.

ವೇಷಧಾರಿಯ ಎರಡು ತೋಳುಗಳು ಮತ್ತು ಸೊಂಟಕ್ಕೆ ಕಟ್ಟಿದ ನಡುಕಟ್ಟುಗಳಿಗೆ ಹಗ್ಗಗಳನ್ನು ಕಟ್ಟಿದ್ದು ಎಂಟು ಹತ್ತು ಅಡಿ ದೂರದಲ್ಲಿ ಮೂವರು ಆ ಹಗ್ಗಗಳನ್ನು ಹಿಡಿದು ನಿಂತಿರುತ್ತಾರೆ. ಆವೇಶದಿಂದ ಕುಣಿಯುವ, ರಭಸದಿಂದ ಓಡಲೆಳಸುವ ಕಲಾವಿದನ ವೇಗವನ್ನು ನಿಯಂತ್ರಿಸುವುದು ಈ ಮೂವರ ಕೆಸಲ. ತಮಟೆ, ನಗಾರಿ, ಹರೆ ವಾದ್ಯಗಳ ರವುಸಿಗನುಗುಣವಾಗಿ ಪಾಳೆಯಗಾರ ಕುಣಿಯುತ್ತಾನೆ. ಜೋರಾಗಿ ಹೂಂಕರಿಸುತ್ತಾನೆ. ಹಗ್ಗ ಹಿಡಿದಿರುವವರನ್ನು ತನ್ನ ಶಕ್ತಿಯಿಂದ ಮುಂದಕ್ಕೆ ಎಳೆಯಲು

ಯತ್ನಿಸುತ್ತಾನೆ. ಕಲಾವಿದ ದುಷ್ಟಪುಷ್ಟವಾಗಿದ್ದರಂತೂ ಕುಣಿತದ ಗತ್ತು ಆವೇಶ, ರಭಸಗಳಿಂದ ಕೂಡಿರುತ್ತದೆ. ಕಲಾವಿದನು ಕಣ್ಣು ಹೊರಳಿಸುವ ರೀತಿ, ಮೀಸೆ ಹುರಿ ಮಾಡುವುದು, ಹಾರಿ ಕುಣಿದು ಕುಪ್ಪಳಿಸುವುದು, ಎಲ್ಲವೂ ಕಾಣಲು ಭಯಂಕರವಾಗಿದ್ದರೂ ಪ್ರೇಕ್ಷಕರಿಗೆ ರಂಜನೆಯನ್ನು ಒದಗಿಸುತ್ತದೆ. ವೇಷಧಾರಿಯು ದೊಣ್ಣೆ ಹಿಡಿದು ಕುಣಿಯುವಾಗ ಪ್ರೇಕ್ಷಕರಲ್ಲಿ ಆಸಕ್ತರಾದವರು ಬಂದು ಪಾಳೇಗಾರ ಕಲಾವಿದನೊಂದಿಗೆ ಹೋರಾಡುವುದುಂಟು.

ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕದಲ್ಲಿ ವಿಶೇಷವಾಗಿ ಕಂಡು ಬರುವ ಈ ಕುಣಿತವು ನಾಯಕ ಜನಾಂಗವು ಹೆಚ್ಚು ರೂಢಿಯಲ್ಲಿದೆ. ಮೊಹರಂ ಹಬ್ಬ, ಜಾತ್ರೆ, ಉತ್ಸವಗಳಲ್ಲಿ ಈ ಕುಣಿತವು ಜರುಗುತ್ತದೆ.

## 42. ಕೊಡದ ಕುಣಿತ

ಕಲಬುರಗಿ, ಬೀದರ, ರಾಯಚೂರ ಹಾಗೂ ಬೆಳಗಾವಿ ಜಿಲ್ಲೆಯ ಮರಾಠಿ ಭಾಷಿಕರಲ್ಲಿ ರೂಢಿಯಲ್ಲಿರುವ ಕೊಡದ ಕುಣಿತವು ಮನರಂಜನಾ ಪ್ರಧಾನವಾದ ಕಲೆ, ಕೊಡ ಅಥವಾ ಬಿಂದಿಗೆಯನ್ನು ಕೈಗಳಲ್ಲಿ ಹಿಡಿದು ಬಾಯಿಯಿಂದ ಊದುತ್ತಾ ಕುಣಿಯುವುದರಿಂದ ಇದಕ್ಕೆ ಕೊಡದ ಕುಣಿತ ಎಂದು ಹೆಸರು ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸಿದ್ಧಿ ಹೆಂಗಸರು ಮತ್ತು ಉತ್ತರ ಕನ್ನಡ ಜಿಲ್ಲೆಯ ಅಗೇರರು, ಕೊಮಾರಪಂತ, ಹರಕಂತ, ಹಾಲಕ್ಕಿ ಒಕ್ಕಲಿಗರ ಹೆಂಗಸರಲ್ಲಿ ಈ ಕುಣಿತ ರೂಢಿಯಲ್ಲಿದೆ. ಆದರೆ ಅಲ್ಲಿ ಕೊಡದ ಕುಣಿತ ಎನ್ನುವುದರ ಬದಲಾಗಿ ಪುಗಡಿ ಕುಣಿತ ಎಂದು ಕರೆಯುತ್ತಾರೆ.

ಕೊಡದ ಕುಣಿತದಲ್ಲಿ ಯುವಕರು ಹೆಚ್ಚಾಗಿ ಪಾಲ್ಗೊಳ್ಳುತ್ತಾರೆ. ಸಮಪ್ರಾಯ ಇರುವ ಇಪ್ಪತ್ತರಿಂದ ಮೂವತ್ತು ಮಂದಿ ಕಲಾವಿದರು ಒಂದೇ ಬಣ್ಣದ ಬನಿಯನ್ ಮತ್ತು ಚಡ್ಡಿ, ತಲೆಗೊಂದು ಬಣ್ಣದ ವಸ್ತ್ರ, ಕಾಲಿಗೆ ಗೆಜ್ಜೆ ಧರಿಸಿ ಕೈಯಲ್ಲಿ ಬರಿದಾದ ತಾತ್ರ ಇಲ್ಲವೆ ಹಿತ್ತಾಳೆಯ ಕೊಡ ಹಿಡಿದು, ಕೊಡವನ್ನು ಬಾಯಿಯ ಹತ್ತರ ಹಿಡಿದು ಭೋಂ ಭೋಂ ಎಂದು ಉದುತ್ತಾ ತಾಳಕ್ಕೆ ತಕ್ಕಂತೆ ಕುಣಿಯುತ್ತಾರೆ. ತಂಡದ ಮುಖ್ಯಸ್ಥನು ಮಧ್ಯೆ ನಿಂತು ಕೊಳಲೂದುತ್ತಾನೆ. ಕೊಳಲಿನ ನಾದದ ಗತ್ತು ಬದಲಾದಂತೆ ಕುಣಿತದ ಗತ್ತೂ ಬದಲಾಗುತ್ತದೆ.

ಕೊಡದ ಕುಣಿತದಲ್ಲ ಕೃಷ್ಣಲೀಲೆಗೆ ಸಂಬಂಧಿಸಿದ ಸನ್ನಿವೇಶಗಳ ಅಭಿನಯವಿದೆ. ಕೊಳಲೂದುತ್ತಿರುವ ಕೃಷ್ಣನ ಸುತ್ತ ಕೊಡ ಹೊತ್ತ ಗೋಪಿಕಾಸ್ತ್ರೀಯರು ಲಲ್ಲೆಗರೆಯುತ್ತಾ, ಮೋಹಿಸುತ್ತ ಮೋಹಕ ಲಾಲಿತ್ಯಪೂರ್ಣ ನರ್ತನ ನಡೆಸುವ ಕಲ್ಪನೆಯನ್ನು ತಂದು ಕೊಡುವುದುಂಟು. ಕಲಾವಿದರು ಮಂಡಲಾಕಾರದಲ್ಲಿ ನಿಂತು ಸುತ್ತುತ್ತಾ ಕುಣಿಯುವುದರ ಜೊತೆಗೆ ಎರಡು ಗುಂಪುಗಳಾಗಿ ಪರಸ್ಪರ ಅಭಿಮುಖವಾಗಿ ನಿಂತು ಕುಣಿಯುವುದು ಮತ್ತು ಕುಳಿತು ಕುಣಿಯುವುದು ಹಾಗೆ ಕುಣಿಯುವಾಗ

ಎಡಗಾಲು ಹೆಜ್ಜೆಯನ್ನುಊರಿ, ಬಲಗಾಲು ಹೆಜ್ಜೆಯನ್ನು ತುಸು ಮೇಲಕ್ಕೆತ್ತಿ ಬೆನ್ನನ್ನು ಬಾಗಿಸಿ ಬಿಂದಿಗೆಯನ್ನು ಊದುವುದು, ಆ ಮೇಲೆ ಬಲಗಾಲನ್ನೂರಿ ಎಡಗಾಲನ್ನು ಮೇಲಕ್ಕೆತ್ತಿ ಊದುವುದು ಇತ್ಯಾದಿ ವರಸೆಗಳನ್ನು ಪ್ರದರ್ಶಿಸುತ್ತಾರೆ. ಕೊಡ ಹಿಡಿದು ಜಡೆ ಹೆಣೆಯುವುದೂ ಉಂಟು. ಗೆಜ್ಜೆಯ ನಾದದ ಜೊತೆಗೆ ಕೊಡದಿಂದ ಹೊರಹೊಮ್ಮಿದ ಉಸಿರಿನ ಸದ್ದನ ಲಯವೂ ಸೇರಿ ಕುಣಿತಕ್ಕೆ ಕಳೆ ತಂದುಕೊಡುತ್ತದೆ.

## 43. ಒನಕೆ ಕುಣಿತ

ಉತ್ತರ ಕರ್ನಾಟಕ ಕಲಬುರಗಿ, ಬೀದರ, ರಾಯಚೂರ, ಬಳ್ಳಾರಿ, ಮಂಡ್ಯ, ಮೈಸೂರು, ಕೋಲಾರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕಂಡುಬರುವ ಒನಕೆ ಕುಣಿತವು ಪೂರ್ಣ ಪ್ರಮಾಣದ ಮನರಂಜನ ಕಲೆ. 'ಪೂಜಾ ಕುಣಿತ' ಕಲಿಯುವ ಕಲಾವಿದರು ತಲೆಯ ಮೇಲಿನ ಭಾರದ ಸಮತೋಲನವನ್ನು ಕಾಯ್ದುಕೊಳ್ಳುವುದಕ್ಕಾಗಿ ಮೊದಲು ಒನಕೆ ಕುಣಿತವನ್ನು ಅಭ್ಯಾಸ ಮಾಡುತ್ತಾರೆ.

ಸುಮಾರು ಐದಾರು ಅಡಿ ಉದ್ದ ಹಾಗೂ ಮೂರ್‍ನಾಲ್ಕು ಅಂಗುಲ ವ್ಯಾಸವಿರುವ ದುಂಡನೆಯ ಮರದ ತುಂಡನ್ನು ಚೆನ್ನಾಗಿ ನಯಗೊಳಿಸಿ ಅದರ ಎರಡು ತುದಿಗಳಿಗೂ ಲೋಹದ 'ಹಣಸು' (ಬಳೆ)ಗಳನ್ನು ಜೋಡಿಸಿ ಸಿದ್ದ ಮಾಡಿದ ಉಪಕರಣವೇ ಒನಕೆ. ನಿಕ್ಕರ್, ಬನಿಯನ್ ಧರಿಸಿ ಸೊಂಟಕ್ಕೆ ವಸ್ತ್ರ ಬಿಗಿದು ಕಾಲಿಗೆ ಗೆಜ್ಜೆ ಕಟ್ಟಿದ ಕಲಾವಿದರು ಈ ಒನಕೆಯನ್ನು ತಮ್ಮ ತಲೆಯ ಮೇಲಿರಿಸಿಕೊಂಡು ಕುಣಿಯುತ್ತಾರೆ. ಸಮತೋಲನ ಕಾಯ್ದುಕೊಳ್ಳುವುದಕ್ಕಾಗಿ ಒನಕೆಯ ಮೇಲು ತುದಿಯಲ್ಲಿ ಚಕ್ರವನ್ನು ಜೋಡಿಸುವುದು, ಹೂವಿನ ಗೋಪುರವನ್ನು ಕಟ್ಟುವುದು ಮಾಡುತ್ತಾರೆ. ಒನಕೆಗೆ ಅರಿಶಿಣ ಕುಂಕುಮ ವಿಭೂತಿಗಳನ್ನು ಹಚ್ಚಿ ಅಂಗುದಾರ ಕಟ್ಟಿ ಹೂವಿನ ಹಾರವನ್ನು ಹಾಕಿರುತ್ತಾರೆ.

ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಮನರಂಜನೆಗಾಗಿ ಒನಕೆ ಕುಣಿತವನ್ನು ಪ್ರದರ್ಶಿಸುವ ಕಲಾವಿದರು ತಮಟೆ ನಗಾರಿ ವಾದ್ಯಗಳ ಗತ್ತಿಗೆ ಅನುಗುಣವಾಗಿ ಒನಕೆಯನ್ನು ತಲೆಯ ಮೇಲೆ, ಹೆಗಲು, ಅಂಗೈ, ಹೆಬ್ಬೆರಳು, ಹಣೆ ಮೇಲಿಟ್ಟುಕೊಂಡು ಕುಣಿಯುತ್ತಾರೆ. ಒನಕೆಯ ಮೇಲೆ ದೀಪವೊಂದನ್ನು ಹಚ್ಚಿಟ್ಟು ಅದು ಆರಿ ಹೋಗದಂತೆ ಕುಣಿಯುವ ರೀತಿ ನೋಡಲು ಅತ್ಯಾಕರ್ಷಕವಾಗಿರುತ್ತದೆ.

ಒನಕೆ ಕುಣಿತದಲ್ಲಿ ಬೇಕಾದದ್ದು ಶಕ್ತಿ ಪ್ರದರ್ಶನವಲ್ಲ; ಕೌಶಲ್ಯದ ಪ್ರದರ್ಶನ, ಒನಕೆ ಕೆಳಗೆ ಬೀಳದಂತೆ, ಆಯ ತಪ್ಪದಂತೆ, ಉರುಳಾಡದಂತೆ ಸ್ಥಿರವಾಗಿಟ್ಟುಕೊಂಡು ಕೈ ಬಿಟ್ಟು ಕುಣಿಸುವಲ್ಲಿ ಕಲಾವಿದನ ಕುಶಲತೆ ಅಡಗಿರುತ್ತದೆ.

## 44. ಕಾಸೆ ಕುಣಿತ

ಕಲಬುರಗಿ, ರಾಯಚೂರು, ಬಳ್ಳಾರಿ, ಬೀದರ, ಜಿಲ್ಲೆಗಳಲ್ಲಿರುವ ವೀರಭದ್ರನ ಉಪಾಸಕರು ಕಾಸೆ ಕುಣಿತವನ್ನು ಆಚರಿಸುತ್ತಾರೆ. ಉಟ್ಟ ಪಂಚೆಯನ್ನು ಕಾಸೆ ಕಟ್ಟಿ ಕುಣಿಯುವುದರಿಂದ ಇದಕ್ಕೆ ಕಾಸೆ ಕುಣಿತ ಎಂದು ಹೆಸರು ಬಂದಿದೆ. ಉತ್ತರ ಕರ್ನಾಟಕದ ಪುರವಂತರು, ದಕ್ಷಿಣ ಕರ್ನಾಟಕದ ವೀರಗಾಸೆಯವರು ಕಾಸೆ ಕುಣಿತಕ್ಕೆ ಸೇರಿದವರಾದರೂ

ಕಾಸೆ ಕುಣಿತದ ಕಲಾವಿದರು ಕೆಂಪು ಕಾಸೆ ಪಂಚೆ, ಕೆಂಪು ಜುಬ್ಬ, ತಲೆಗೆ ಕೆಂಪು ವಸ್ತ್ರ, ಹಿಂದಲೆಗೆ ಚೌಲಿ, ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಮಹಾರುದ್ರನ ರೂಪುಳ್ಳ ಹಲಗೆಯನ್ನು ಎದೆಯ ಹತ್ತಿರ ಹಿಡಿದಿರುತ್ತಾರೆ. ನಡುವಿಗೆ ಹಿತ್ತಾಳೆ ಅಥವಾ ಬೆಳ್ಳಿಯ  ಗಗ್ಗರ, ಕಾಲಿಗೆ ಗೆಜ್ಜೆ, ಹಣೆಯಲಿ ವಿಭೂತಿ ಧರಿಸಿರುತ್ತಾರೆ. ಕಸೆ ಕುಣಿತಕ್ಕೆ ಸಮಾಳ, ತಮಟೆ, ನಗಾರಿ, ತಾರಸೆ ಹಿಮ್ಮೇಳದ ವಾದ್ಯಗಳು.

ಶಿವರಾತ್ರಿ, ನವರಾತ್ರಿ, ದೇವರ ಉತ್ಸವ, ವೀರಭದ್ರನ ಆರಾಧನೆ, ಲಿಂಗವಂತರ ಮನೆಯ ಗೃಹಪ್ರವೇಶ ಇತ್ಯಾದಿ ಸಂದರ್ಭಗಳಲ್ಲಿ ಈ ಆಚರಣೆಯು ನಡೆಯುತ್ತದೆ. ಕಾಸೆ ಕಟ್ಟಿದ ವ್ಯಕ್ತಿಗಳನ್ನು ಹಿಮ್ಮೇಳದ ವಾದ್ಯಗಳೊಂದಿಗೆ ಹೊಳೆಯ ಬಳಿಯಿಂದ ಇಲ್ಲವೆ ದೇವಸ್ಥಾನಗಳ ಹತ್ತಿರದಿಂದ ನಡೆಮಡಿಯ ಮೇಲೆ ಕರೆತರುತ್ತಾರೆ. ನಡೆಮಡಿ ಎಂದರೆ ಕಸೆ ಕಟ್ಟುವವರು ನಡೆದು ಬರುವ ಹಾದಿಯಲ್ಲಿ ಮೈಲಿಗೆ ಆಗಬಾರದೆಂದು ದಾರಿಯ ಉದ್ದಕ್ಕೂ ಮಡಿ ಮಾಡಿದ ಬಟ್ಟೆಗಳನ್ನು ಹಾಸಿ ಅದರ ಮೇಲೆ ಕರೆತರುವುದು. ಜೊತೆಯಲ್ಲಿ ಪವಿತ್ರ ನೀರಿನ ಕಳಶಗಳನ್ನು ಹೊತ್ತ ಹೆಣ್ಣುಮಕ್ಕಳಿರುತ್ತಾರೆ. ಹೀಗೆ ಕರೆದು ತರುವಾಗ ದೇವಸ್ಥಾನದ ಮುಂದೆ ಕಾಸೆ ಕುಣಿತವು ಜರುಗುತ್ತದೆ. ಅತ್ಯಂತ ವೀರಾವೇಶದಿಂದ ಜರುಗುವ ಈ ಕುಣಿತದಲ್ಲಿ ಕಲಾವಿದರ ಆವೇಶ, ರೌದ್ರತೆಗಳನ್ನು ತಗ್ಗಿಸಲು ಈಡುಗಾಯಿ (ತೆಂಗಿನ ಕಾಯಿಯನ್ನು ನಿವಾಳಿಸಿ ನೆಲಕ್ಕೆ ಬೀಸಿ ಒಡೆಯುವುದು) ಹೊಡೆಯುತ್ತಾರೆ. ಕುಣಿತ ಮುಗಿದ ಮೇಲೆ ಕಲಾವಿದರು 'ಖಡ್ಗ'

ಹೇಳುತ್ತಾರೆ. ಈ ಖಡ್ಗದಲ್ಲಿ ದಕ್ಷಬ್ರಹ್ಮನ ಯಜ್ಞ, ವೀರಭದ್ರನ ಜನನ, ದಕ್ಷ ಬ್ರಹ್ಮನ ಸಂಹಾರ, ಸೃಷ್ಠಿ ಲಯಗಳಿಗೆ ಸಂಬಂಧಿಸಿದ ವಿಚಾರಗಳಿರುತ್ತವೆ. ಕಲಾವಿದರು ಖಡ್ಗ ಹೇಳುತ್ತಿರುವಾಗ ಒಬ್ಬ ನಡು ನಡುವೆ 'ಉಳ್ಳತ್' ಎನ್ನುತ್ತಿರುತ್ತಾನೆ. ಉಳ್ಳತ್ ಎಂದರೆ ಹೌದು, ಸರಿ ಎಂದರ್ಥ. ಉತ್ತರ ಕರ್ನಾಟಕದಲ್ಲಿ ಇದಕ್ಕೆ ಖಡೇ ಖಡೇ ಎಂದು ಕರೆಯುತ್ತಾರೆ.

# 45. ರಂಗದ ಕುಣಿತ

ಉತ್ತರ ಕರ್ನಾಟಕದ ಬೀದರ, ಕಲಬುರಗಿ, ದರಾಯಚೂರ, ಬಳ್ಳಾರಿ ಮತ್ತು ದಕ್ಷಿಣ ಕರ್ನಾಟಕದ ಮಂಡ್ಯ, ಮೈಸೂರು, ಹಾಸನ, ತುಮಕೂರು, ಚಿಕ್ಕಮಂಗಳೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕಂಡು ಬರುವ ರಂಗದ ಕುಣಿತವು ಸಾಮಾನ್ಯವಾಗಿ ರಂಗದ ಬೀದಿಯಲ್ಲಿ ನಡೆಯುತ್ತಿದ್ದುದರಿಂದ ರಂಗದ ಕುಣಿತವೆಂದು, ಸುಗ್ಗಿಯ ಕಾಲದಲ್ಲಿ ಪ್ರದರ್ಶನಗೊಳ್ಳುತ್ತಿದ್ದುದರಿಂದ "ಸಿಗ್ಗಿ ಕುಣಿತ"ವೆಂದೂ ಹೆಸರಾಗಿದೆ.

ಗ್ರಾಮದೇವತೆಯ ಹಬ್ಬಕ್ಕೆ ಇನ್ನು ಹದಿನೈದು ದಿನಗಳಿರುವಂತೆಯೇ ಊರ ಹಿರಿಯರು ಸೇರಿ ರಂಗ ಕುಣಿಯಲು ಸಿದ್ಧತೆ ನಡೆಸುತ್ತಾರೆ. ಹಬ್ಬಕ್ಕೆ ಕಂಬ ಇಕ್ಕುವ ಶಾಸ್ತ್ರ ಮುಗಿಸಿ ಕೊಂಡ ಹಾಯುವವರೆಗೂ ನಿತ್ಯವೂ ಮಾರಿಗುಡಿಯ ಬಯಲಿನಲ್ಲಿ ರಂಗದ ಕುಣಿತ ಜರುಗುತ್ತದೆ. ಕಲಾವಿದರು ಬಿಳಿಯ ಅಂಗಿ, ಕಚ್ಚೆ ಹಾಕಿದ ಪಂಚೆ, ತಲೆಗೆ ರುಮಾಲು, ನಡುವಿಗೆ ವಸ್ತ್ರ ಬಿಗಿದು, ಕಾಲಿಗೆ ಗೆಜ್ಜೆ ಕಟ್ಟಿ, ಕೈಯಲ್ಲೊಂದು ಚೌಕ ಹಿಡಿದು ತಮಟೆ, ನಗಾರಿಗಳ ಗತ್ತುಗಳಿಗೆ ಅನುಗುಣವಾಗಿ ಕುಣಿತ ನಡೆಸುತ್ತಾರೆ. ಕುಣಿತದಲ್ಲಿ ಇಷ್ಟೇ ಜನ ಕಲಾವಿದರಿರಬೇಕೆಂಬ ನಿಯಮವೇನಿಲ್ಲ. ಎಷ್ಟು ಜನರಾದರೂ ಭಾಗವಹಿಸಬಹುದು. ಆದರೆ ಸಮಸಂಖ್ಯೆಯಲ್ಲಿರಬೇಕು. ಸಾಲಾಗಿ ನಿಂತು, ಎದುರು ಬದುರಾಗಿ ನಿಂತು, ವರ್ತುಲಾಕಾರದಲ್ಲಿ, ಕೆಲವೊಮ್ಮೆ ಮೂರು–ನಾಲ್ಕು ಸಾಲುಗಳಲ್ಲಿ ನಿಂತು ಕುಣಿಯುತ್ತಾರೆ. ಒಂದ್ಹೆಜ್ಜೆ, ಎರಡ್ಹೆಜ್ಜೆ, ಮೂರ್ಹೆಜ್ಜೆ, ಐದ್ಹೆಜ್ಜೆ, ಏಳ್ಹೆಜ್ಜೆ ವರಸೆಗಳಲ್ಲಿ ಕುಣಿಯುತ್ತಾರೆ.

ರಂಗ ಕುಣಿಯುವವರು ತಮಟೆ, ನಗಾರಿಗಳ ಗತ್ತಿಗೆ ತಕ್ಕಂತೆ ಹೆಜ್ಜೆ ಹಾಕುತ್ತಾರೆ. ಹೆಜ್ಜೆಯ ಒಂದೊಂದು ಗತಿಗೂ ಒಂದೊಂದು ಹೆಸರನ್ನಿಟ್ಟು ಕರೆಯುತ್ತಾರೆ. ಮಾರಮ್ಮನ ಗತಿ, ತಿರುಣಿ ಗತಿ, ನಂದಿಕಂಬದ ಗತಿ, ಕೂತಾಟದ ಗತಿ, ಬಾಬಯ್ಯನ ಗತಿ, ಒಳಗತಿ, ಸೈಕಲ್ ಗತಿ, ಸೀಮೆ ಗತಿ, ಕತ್ತರಿಗಾಲ ಗತಿ ಹೀಗೆ ಹಲವು ಬಗೆಯ ಗತಿಗಳಿವೆ. ಕುಣಿಯುವಾಗ ಮಧ್ಯೆ ಮಧ್ಯೆ ಹೋ ಎಂದು ಗಟ್ಟಿಯಾಗಿ

ಕೂಗುತ್ತಾ ಕೈಯಲ್ಲಿ ಹಿಡಿದಿರುವ ಚೌಕವನ್ನು ಬೀಸುತ್ತಾ ಬಲದಿಂದ ಎಡಕ್ಕೆ, ಎಡದಿಂದ ಬಲಕ್ಕೆ ತಿರುಗುತ್ತಾ ಕುಣಿಯುತ್ತಾರೆ. ತಮಟೆ ವಾದ್ಯಗಳನ್ನು ಬಾರಿಸುವವರು ಕುಶಲರಾಗಿದ್ದರಂತೂ, ಕುಣಿತಕ್ಕೆ ಮತ್ತಷ್ಟು ಕಳೆ ಕಟ್ಟುತ್ತದೆ.

ರಂಗದ ಕುಣಿತದಲ್ಲಿ ಹೆಜ್ಜೆ ಕುಣಿತ ಮತ್ತು ಮಾರಿ ಕುಣಿತಗಳೆಂದು ಎರಡು ವಿದ. ಹೆಜ್ಜೆ ಕುಣಿತದ ಪದಗತಿಯಲ್ಲಿ ಲಾಲಿತ್ಯವಿದ್ದರೆ, ಮಾರಿ ಕುಣಿತದ ಪದಗತಿಯಲ್ಲಿ ಬಿರುಸುತನ ಎದ್ದು ಕಾಣುತ್ತದೆ. ರಂಗ ಕುಣಿತದ ಕಲಾವಿದರು ಕುಣಿತದ ಮಧ್ಯೆ ದಣಿವು ಆರಿಸಿಕೊಳ್ಳಲು ನಿಂತಾಗ ಪದಗಳನ್ನು ಹಾಡುತ್ತಾರೆ. ಇವುಗಳಿಗೆ ರಂಗದ ಪದಗಳು ಎಂದು ಹೆಸರು. ಇದರಲ್ಲಿ ಮಾರಮ್ಮನ ಮೇಲಿನ ಹಾಡುಗಳೆ ಹೆಚ್ಚು, ಜೊತೆಗೆ ಪ್ರಣಯ, ರಸಿಕತೆ, ಕೀಟಲೆಗೆ ಸಂಬಂಧಿಸಿದ ಹಾಡುಗಳೂ ಸಹ ಸಹಜವಾಗಿ, ಸರಾಗವಾಗಿ, ರಂಗದ ಮೇಲೆ ನುಸುಳಿಕೊಂಡು ಬರುತ್ತವೆ.

# 46. ಬೇಡರ ಕುಣಿತ

ಉತ್ತರ ಕರ್ನಾಟಕ ಕಲಬುರಗಿ, ಬೀದರ, ರಾಯಚೂರ, ಬಳ್ಳಾರಿ, ಯಾದಗಿರ ಮತ್ತು ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಯಲ್ಲಾಪೂರ, ಮುಂಡಗೋಡ ತಾಲ್ಲೂಕುಗಳಲ್ಲಿ ಪ್ರಚಲಿತವಿರುವ ಬೇಡರ ಕುಣಿತವು ಹಬ್ಬ ಹರಿದಿನಗಳು, ಜಾತ್ರೆ ಉತ್ಸವಗಳಲ್ಲಿ ಪ್ರದರ್ಶಿತಗೊಳ್ಳುತ್ತದೆ. ಹೋಳಿ ಹಬ್ಬದ ಸಂದರ್ಭದಲ್ಲಿ ಮನರಂಜನೆಗಾಗಿ ಕಲಾವಿದರು ಈ ಕುಣಿತವನ್ನು ಪ್ರದರ್ಶಿಸುತ್ತಾರಾದರು ಈ ವೇಷಧಾರಿಗಳು ವೇಷಭೂಷಣಗಳು ಭೀಕರತೆಯನ್ನು ಹುಟ್ಟಿಸುವಂತಿರುತ್ತವೆ.

ಮುಖಕ್ಕೆ ಕೆಂಪು, ಬಿಳಿ, ಕಪ್ಪು ಬಣ್ಣಗಳನ್ನು ಬಳಿದುಕೊಂಡು ಗಡ್ಡ ಮೀಸೆ ಕಟ್ಟಿಕೊಂಡು, ಸೊಂಟಕ್ಕೆ ಬಣ್ಣದ ಬಟ್ಟೆ, ಅದರ ಮೇಲೆ ಗಂಟೆಸರ, ಕಾಲಿಗೆ ಕಿರುಗೆಜ್ಜೆ ತಲೆಗೆ ನವಿಲುಗರಿಗಳಿಂದ ಅಲಂಕರಿಸಿದ ದೊಡ್ಡ ಕಿರೀಟ, ಒಂದು ಕೈಯಲ್ಲಿ ಕತ್ತಿ, ಮತ್ತೊಂದು ಕೈಯಲ್ಲಿ ಗುರಾಣಿ, ಮುತ್ತಿನ ತುರಾಯಿ, ಕೊರಳಿಗೆ ಹೂವಿನಹಾರ, ಬೆನ್ನಿನ ಹಿಂಭಾಗದಲ್ಲಿ ನವಿಲುಗರಿಗಳು, ಇವಿಷ್ಟೂ ಬೇಡರ ಕುಣಿತದ ಕಲಾವಿದರ ವೇಷಭೋಷಣಗಳು. ತಮಟೆಯ ಬಡಿತಕ್ಕೆ ಅಬ್ಬರದಿಂದ ಕೂಗುತ್ತಾ ಅತ್ತಿತ್ತ ಹರಿದಾಡುತ್ತಾ ಕುಣಿಯುತ್ತಿರುತ್ತಾರೆ. ವೇಷಧಾರಿಯ ಸೊಂಟಕ್ಕೆ ಹಗ್ಗವನ್ನು ಕಟ್ಟಿದ್ದು ನಾಲ್ಕೈದು ಮಂದಿ ಹಿಡಿದಿರುತ್ತಾರೆ. ತಮಟೆಯ ಬಡಿತವು ತಾರಕಕ್ಕೇರಿದಂತೆಲ್ಲಾ ಬೇಡರ ವೇಷಧಾರಿಯ ಆವೇಶವು ಹೆಚ್ಚಿ ಕುಣಿತವು ರಭಸವನ್ನು ಪಡೆದುಕೊಳ್ಳುತ್ತದೆ. ಬೇಟೆಯ ಅಭಿನಯವನ್ನು ಪ್ರದರ್ಶಿಸುತ್ತಾ ಬೇಡನು ಅಬ್ಬರಿಸುತ್ತಾ ಕುಣಿಯುತ್ತಾನೆ.

# 1. ವಕ್ತಾರರ ಪಟ್ಟಿ

| ಕ್ರಸಂ. | ವಕ್ತಾರರ ಹೆಸರು | ವಯಸ್ಸು | ಊರು | ತಾಲ್ಲೂಕ | ಜಿಲ್ಲೆ | ಶಿಕ್ಷಣ | ಕುಣಿತ |
|---|---|---|---|---|---|---|---|
| 1. | ಸೋಮಣ್ಣ ಕುಂಬಾರ | 52 | ಗಣಜಲಖೇಡ | ಗುಲಬರ್ಗಾ | ಗುಲಬರ್ಗಾ | ಇಲ್ಲ | ಕೋಲಾಟ |
| 2. | ರಾಜಶೇಖರ ಪೂಜಾರಿ | 48 | ಚನ್ನವೀರನಗರ | ಗುಲಬರ್ಗಾ | ಗುಲಬರ್ಗಾ | ಬಿ.ಎ. | ಡೊಳ್ಳು |
| 3. | ಅಂಬಾರಾಯ ಪೂಜಾರಿ | 62 | ಬೇಲೂರ (ಜೆ) | ಗುಲಬರ್ಗಾ | ಗುಲಬರ್ಗಾ | ಇಲ್ಲ | ಡೊಳ್ಳು |
| 4. | ರುಕ್ಕಪ್ಪ ಪೂಜಾರಿ | 38 | ಬೇಲೂರ | ಗುಲಬರ್ಗಾ | ಗುಲಬರ್ಗಾ | ಇಲ್ಲ | ಡೊಳ್ಳು |
| 5. | ಚಂದಪ್ಪ ಮಾದರ | 53 | ನಿಂಬರ್ಗಾ | ಆಳಂದ | ಕಲಬುರಗಿ | ಇಲ್ಲ | ಹಲಗೆ ಕುಣಿತ |
| 6. | ಸಂತೋಷಿ ಜೋಗತಿ | 26 | ಶಹಾಪೂರ | ಶಹಾಪೂರ | ಯಾದಗಿರ | ಇಲ್ಲ | ಜೋಗತಿ ಕುಣಿತ |
| 7. | ರಾಯವ್ವ ಸಿಂಗೆ | 44 | ಬಸವಪಟ್ಟಣ | ಜೇವರ್ಗಿ | ಕಲಬುರಗಿ | 4ನೇ | ಜೋಗತಿ ಕುಣಿತ |
| 8. | ಶಿವಶರಣಪ್ಪ ಬಿರಾದಾರ | 64 | ಹೆಬ್ಬಾಳ | ಚಿತ್ತಾಪೂರ | ಗುಲಬರ್ಗಾ | ಇಲ್ಲ | ಪುರವಂತಕರ ಕುಣಿತ |
| 9. | ಶಿವಲಿಂಗಪ್ಪ ಶೆಟಕಾರ | 54 | ಭೀಮಳ್ಳಿ | ಹೊಸಪೇಟೆ | ಬಳ್ಳಾರಿ | ಇಲ್ಲ | ಪುರವಂತಕರ ಕುಣಿತ |
| 10. | ಕಾಶಿನಾಥ ಜಾಧವ | 74 | ಎಬ್ಬನಪಲ್ಲಿ ತಾಂಡ | ಸೇಡಂ | ಕಲಬುರಗಿ | ಇಲ್ಲ | ಲಂಬಾಣಿ ಕುಣಿತ |
| 11. | ಶೇಷಬಾಯಿ | 58 | ಎಬ್ಬನಪಲ್ಲಿ ತಾಂಡ | ಸೇಡಂ | ಕಲಬುರಗಿ | 2ನೇ | ಲಂಬಾಣಿ ಕುಣಿತ |
| 12. | ಶೇಖ ಇಸ್ಮಾಯಿಲ ಸಾಬ | 80 | ಸಿಂಗನಳ್ಳಿ | ಸುರಪುರ | ಯಾದಗಿರಿ | ಇಲ್ಲ | ಅಲಾವಿ ಕುಣಿತ |
| 13. | ಖಾಜಾ ಪಟೇಲ | 72 | ಬೇಲೂರ | ಮಾನ್ವಿ | ರಾಯಚೂರ | ಇಲ್ಲ | ಹೆಜ್ಜೆ ಕುಣಿತ |
| 14. | ಮೇರಾ ಪಟೇಲ | 81 | ಕಮಲಾಪೂರ | ಆಳಂದ | ಕಲಬುರಗಿ | 5ನೇ | ಅಲಾವಿ ಕುಣಿತ |
| 15. | ವಿಠ್ಠಲ ವಗ್ಗೆ | 55 | ಸುಲ್ತಾನಪೂರ | ಬೀದರ | ಬೀದರ | ಇಲ್ಲ | ಗೊರವರ ಕುಣಿತ |
| 16. | ಸಮ್ಮು ಮಾದರ | 45 | ಗಣಜಲಖೇಡ | ಶಹಾಪೂರ | ಯಾದಗಿರಿ | 10ನೇ | ಹಲಗೆ ಕುಣಿತ |
| 17. | ಮರೆಪ್ಪ ಸಿದ್ದಪ್ಪ | 30 | ಮಲ್ಲಾಬಾದ | ಅಫಜಲಪೂರ | ಗುಲಬರ್ಗಾ | 5ನೇ | ಡೊಳ್ಳು ಕುಣಿತ |
| 18. | ನಿರಂಜನ ಧನ್ನಿ | 24 | ಕಡಗಂಚಿ | ಆಳಂದ | ಕಲಬುರಗಿ | ಇಲ್ಲ | ನಂದಿ ಕೋಲು ಕುಣಿತ |
| 19. | ಕಲ್ಲಯ್ಯಾ ಮಠ | 58 | ಬ್ರಹ್ಮಪೂರ | ಬ.ಕಲ್ಯಾಣ | ಬೀದರ | ಬಿ.ಎ. | ನಂದಿ ಕೋಲು ಕುಣಿತ |
| 20. | ಬಾಬುರಾವ ಪಾಟೀಲ | 48 | ಮಂಠಾಳ | ಬ.ಕಲ್ಯಾಣ | ಬೀದರ | 10ನೇ | ನಂದಿ ಕೋಲು ಕುಣಿತ |
| 21. | ಸಿದ್ದಣ್ಣ ಕೋಳಿ | 60' | ಕಂಪ್ಲಿ | ಬಳ್ಳಾರಿ | ಬಳ್ಳಾರಿ | ಬಿ.ಎ. | ಗೊರವರ ಕುಣಿತ |
| 22. | ರಾಮಪ್ಪ | 38 | ದೇವದುರ್ಗ | ದೇವದುರ್ಗ | ರಾಯಚೂರ | ಇಲ್ಲ | ಕೋತಿ ಕುಣಿತ |
| 23. | ಹಣಮಂತ | 60 | ರಂಗಂಪೇಟ | ಶಹಾಪೂರ | ಯಾದಗೀರ | ಇಲ್ಲ | ಹಲಗೆ ಕುಣಿತ |
| 24. | ಗುರುಪಾದಪ್ಪ | 70 | ರಾಮಪೂರ | ಗಂಗಾವತಿ | ಕೊಪ್ಪಳ | 7ನೇ | ಡೊಳ್ಳು ಕುಣಿತ |
| 25. | ನಾಗಪ್ಪ ಪೂಜಾರಿ | 55 | ಸಿರವಾರ | ಮಾನ್ವಿ | ರಾಯಚೂರ | 5ನೇ | ಡೊಳ್ಳು ಕುಣಿತ |
| 26. | ಶಿವಶಂಕರ ಪಾಟೀಲ | 62 | ಚೌದ್ರಿ ಬೆಳಕುಣಿ | ಔರಾದ | ಬೀದರ | 10ನೇ | ಚುಟುಕು ಕುಣಿತ |
| 27. | ಪಾರ್ವತಿ ವಾಲಿಕಾರ | 53 | ಘತ್ತರಗಾ | ಅಫಜಲಪೂರ | ಕಲಬುರಗಿ | ಇಲ್ಲ | ಭೂತೇರ ಕುಣಿತ |
| 28. | ಘಾಳೆಮ್ಮ ಮಾದರ | 42 | ರಾವೂರ | ಚಿತ್ತಾಪೂರ | ಗುಲಬರ್ಗಾ | 2ನೇ | ಭೂತೇರ ಕುಣಿತ |
| 29. | ಬಸಪ್ಪ ಕರಗರ | 34 | ಬಾಕ್ಕಳ್ಳಿ | ಹೂವಿನ ಹಡಗಿಲ | ಬಳ್ಳಾರಿ | ಇಲ್ಲ | ಅಲಾವಿ ಕುಣಿತ |
| 30. | ಭೀಮರಾಯ ಭಜಂತ್ರಿ | 54 | ಮಲ್ಲಾಬಾದ | ಅಫಜಲಪೂರ | ಗುಲಬರ್ಗಾ | ಇಲ್ಲ | ಹಲಗೆ ಕುಣಿತ |
| 31 | ವಿ.ಎಲ್.ಪಾಟೀಲ | 50 | ಧಾರಾವಾಡ | ಧಾರವಾಡ | ಧಾರವಾಡ | ಪಿಎಚ್. ಡಿ. | ಜನಪದ ಕುಣಿತಗಳ ಮಾಹಿತಿ |
| 32 | ವೃಷಭಕುಮಾರ | 45 | ಗೊಟಗೋಡಿ | ಶಿಗ್ಗಾಂವಿ | ಹಾವೇರಿ | ಪಿಎಚ್. ಡಿ | ಜನಪದ ಕುಣಿತಗಳ ಮಾಹಿತಿ |
| 33 | ಕಲ್ಲಪ್ಪ | 60 | ಅಥಣಿ | ಅಧಣಿ | ಬೆಳಗಾವಿ | ಪಿಎಚ್. ಡಿ. | ಹಲಗೆ ಕುಣಿತದ ಮಾಹಿತಿ |

# ಆಕರ ಗ್ರಂಥ

| ಗ್ರಂಥದ ಹೆಸರು | ಲೇಖಕರು | ವರ್ಷ | ಪ್ರಕಾಶಕರು |
|---|---|---|---|
| ಜಾನಪದ ಗಂಗೋತ್ರಿ | ಕರಿಂಖಾನ ಎಸ್.ಕೆ. | 1988 | ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು |
| ಜಾನಪದ ವಿಜ್ಞಾನ | ಸೋಮಶೇಖರ ಇಬ್ರಾಂಪುರ | 1979 | ಸಮಾಜ ಪುಸ್ತಕಾಲಯ ಧಾರವಾಡ |
| ಪಿ.ಕೆ. ಖಂಡೋಬಾ | ಲಂಬಾಣಿ ಸಂಸ್ಕೃತಿ | 1988 | ತೇಜಸಿಂಗ ರಾಠೋಡ ಮೆಮೋರಿಯಲ್ ಟ್ರಸ್ಟ, ಗುಲಬರ್ಗಾ |
| ಕರ್ನಾಟಕ ಜನಪದ ಕಲೆಗಳು | ಗೊ.ರು.ಚ. | 1977 | ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು |
| ಜಾನಪದ ಅಧ್ಯಯನ | ದೇ.ಜವರೆಗೌಡ | 1991 | ಚೇತನ ಬುಕ್ ಹೌಸ, ಮೈಸುರು |
| ಜಾನಪದ ಗಂಗೋತ್ರಿ | ಎಚ್.ಎಲ್. ನಾಗೇಗೌಡ | 1986 | ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು |
| ಜಾನಪದ ಸ್ವರೂಪ ಮತ್ತು ಸಾಹಿತ್ಯ | ಡಾ. ಡಿ.ಲಿಂಗಯ್ಯ<br>ಡಾ. ಕೆ.ಆರ್.ಸಂಧ್ಯಾರೆಡ್ಡಿ | 1997 | ಕ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು |
| ಜನಪದ ಕಲಾ ಪ್ರವೇಶ | ಡಾ. ಜಕ್ಕರೆ ಶಿವಶಂಕರ | 2006 | ಸಾಗರ್ ಪ್ರಕಾಶನ ಬೆಂಗಳೂರು |
| ಜಾನಪದ ಗಂಗೋತ್ರಿ | ಡಾ. ಬಸವರಾಜ ಪೋ.ಪಾಟೀಲ<br>ಡಾ. ಜಗನ್ನಾಥ ಹೆಬ್ಬಾಳೆ | 2010 | ಕರ್ನಾಟಕ ಜಾನಪದ ಅಕಾಡೆಮಿ ಬೆಂಗಳೂರು |
| ಜಾನಪದ ಚಿಂತನ | ಡಾ. ಬಸವರಾಜ ಪೋಲಿಸ ಪಾಟೀಲ | 2001 | ಅಮರ ಪ್ರಕಾಶನ ಕಲಬುರಗಿ |
| ಹೈದ್ರಬಾದ ಕರ್ನಾಟಕ ಜನಪದ ಪ್ರದರ್ಶನ ಕಲೆಗಳು | ಡಾ. ಎಚ್.ಟಿ.ಪೋತೆ | 1993 | |
| ಜಾನಪದ ಸಾಹಿತ್ಯ ಸಂಗಾತಿ | ಡಾ. ಚಿ.ಸಿ.ನಿಂಗಣ್ಣ | 2012 | ಕಾವ್ಯ ಕಿರಣ ಪ್ರಕಾಶನ, ಕಲಬುರಗಿ |
| ಲೋಕ ಸಂಸ್ಕೃತಿ | ಡಾ. ಬಸವರಾಜ ಪೋಲಿಸ ಪಾಟೀಲ<br>ಡಾ. ಜಗನ್ನಾಥ ಹೆಬ್ಬಾಳೆ | 2011 | ಅಖಿಲ ಭಾರತ ಜಾನಪದ ಸಮ್ಮೇಳನ ಬೀದರ |
| ಲೋಕಸಿರಿ ಸ್ಮರಣ ಸಂಚಿಕೆ | ಗೊ.ರು.ಚ. ಮತ್ತು ಡಾ. ಜ. ಹೆಬ್ಬಾಳೆ | 2011 | ಅಖಿಲ ಭಾರತ ಜಾನಪದ ಸಮ್ಮೇಳನ ಬಿದರ |
| ಜಾನಪದ ಭಂಡಾರ | ದೇವೇಂದ್ರ ಕುಮಾರ ಹಕಾರಿ | 1988 | ಕುವೆಂಪು ಅಧ್ಯಯನ ಕೇಂದ್ರ, ಬೆಂಗಳೂರು |
| ಜಾನಪದ ಸಾಹಿತ್ಯ ದರ್ಶನ ಭಾಗ–2,3 | ಡಾ. ಎಂ.ಎಸ್. ಸುಂಕಾಪುರ | 1978 | ಕನ್ನಡ ಅಧ್ಯಯನ ಪೀಠ ಕ.ವಿ. ಧಾರವಾಡ |
| ಬೀದರ ಜಿಲ್ಲೆಯ ದೇವರೊತ್ಸವಗಳು | ಡಾ. ಮಹಾದೇವಿ ಹೆಬ್ಬಾಳೆ | 2011 | ಅಖಿಲ ಭಾರತ ಜಾನಪದ ಸಮ್ಮೇಳನ |
| ಜಾನಪದ ವಿಕ್ಷಣೆ | ಅಂಬಳಿಕೆಹಿರಿಯಣ್ಣ | 1986 | ಪ್ರಜ್ವಲ ಪ್ರಕಾಶನ ಮೈಸೂರು. |

## DANCE PHOTOS





















